ಖಾಸಗಿ ಪ್ರಸಾರಕ್ಕಾಗಿ

ಸಂವಾದ

೧೫

ಸಂವಾದ ಪ್ರಕಾಶನ, ಮಲ್ಲಾಡಿಹಳ್ಳಿ, ಚಿತ್ರದುರ್ಗ ಜಿಲ್ಲೆ - 577 531

ಈ ಸಂಚಿಕೆಯ ಲೇಖಕರು:

- **ಸು. ರಂ. ಎಕ್ಕುಂಡಿ,**
  44, ಮಾರುತಿ ಲೇಔಟ್, ಶಂಕರ ಮಠದ ಹತ್ತಿರ,
  ಪಶ್ಚಿಮದ ಕಾರ್ಡ್ ರಸ್ತೆ, ಬೆಂಗಳೂರು – 560 079
- **ಮುಕುಂದ ಜೋಶಿ,**
  A-6, Sejal Apartment, Devidayal Road,
  Mulund (W), Bombaby - 400 080
- **ರಾಘವೇಂದ್ರ ಪಾಟೀಲ,**
  ಜೀವಶಾಸ್ತ್ರ ಅಧ್ಯಾಪಕರು, ಪದವಿಪೂರ್ವ ಕಾಲೇಜು,
  ಮಲ್ಲಾಡಿಹಳ್ಳಿ–577 531, ಚಿತ್ರದುರ್ಗ ಜಿಲ್ಲೆ
- **ಎಸ್. ಮಂಜುನಾಥ್,**
  15ನೇ ಕ್ರಾಸ್, ಬಸವೇಶ್ವರ ಬಡಾವಣೆ, ಕೆ. ಆರ್. ನಗರ–571 602
  ಮೈಸೂರು ಜಿಲ್ಲೆ
- **ಅರವಿಂದ ನಾಡಕರ್ಣಿ,**
  101, Ketayun Mansion, Shahaji Raje Marg,
  Vile Parle (E), Bombay-400 057
- **ಆನಂದಕಂದ** (ದಿವಂಗತ ಬೆಟಗೇರಿ ಕೃಷ್ಣಶರ್ಮರು)
- **ಸ. ಉಷಾ,**
  ಕನ್ನಡ ಪ್ರವಾಚಕರು, ಹೊಯ್ಸಳೇಶ್ವರ ಕಾಲೇಜು, ಅರಸೀಕೆರೆ–573 10
- **ಡಿ. ಎಸ್. ನಾಗಭೂಷಣ,**
  ಕಾರ್ಯಕ್ರಮ ನಿರ್ವಾಹಕರು, ಆಕಾಶವಾಣಿ, ಹಾಸನ–573 201

ಪ್ರಿಯ ಓದುಗ,

ನಿಮ್ಮ ಚಂದಾ ಹಣ ಇಲ್ಲದೆ 'ಸಂವಾದ'ವನ್ನು ನಿಮಗೆ ತಲುಪಿಸುವುದು ಕಷ್ಟ. ಈ ಸರ ಲೆಕ್ಕಾಚಾರವನ್ನು ನಿಮಗೆ ಬಿಡಿಸಿ ಹೇಳುವ ಅಗತ್ಯವಿಲ್ಲವೆಂದು ಭಾವಿಸಿದ್ದೇವೆ. ಇದೇ ಆಗಸ್ಟ್ 15ರೊಳಗೆ ನಿಮ್ಮ ಚಂದಾ ತಲುಪದಿದ್ದರೆ, ಈ ಪತ್ರಿಕೆಯ ಬಗ್ಗೆ ನಿಮಗೆ ಆಸಕ್ತಿ ಇಲ್ಲವೆಂದು ನಾವ ತಿಳಿದು, ನಿಮಗೆ ಸಂಚಿಕೆಯನ್ನು ಕಳಿಸುವುದನ್ನು ನಿಲ್ಲಿಸುವುದು ಅನಿವಾರ್ಯವಾಗುತ್ತದೆ. ಆದುದರಿಂ ಚಂದಾ ಕಳುಹಿಸದ ಅಥವಾ ಬಾಕಿಯಿರಿಸಿಕೊಂಡಿರುವ ಗೆಳೆಯರು ದಯವಿಟ್ಟು ಈ ಕೂಡಲೇ ಚಂದಾ ಹಣ ಕಳುಹಿಸಿ ಸಹಕರಿಸಿ.

ತಿದ್ದುಪಡಿ: ೨೨ನೇ ಪುಟದ ಕೊನೆಯಲ್ಲಿ ಕೊಡಲಾಗಿರುವ ಜೆ. ಬ್ರೊನೊವಸ್ಕಿ ಅವರ ಉದ್ಧರಣೆಯ ಮೊದಲ ಸಾಲಿನಲ್ಲಿ **ಬಹುಶಃ** ನಂತರ **ಚೆಲುವಾದ** ಎಂದು ಸೇರಿಸಿ ಓದಿಕೊಳ್ಳಬೇಕಾಗಿ ಕೋರುತ್ತೇವೆ

ನನ್ನೊಳಗೆ ನಾನು

ಸು. ರಂ. ಎಕ್ಕುಂಡಿ

ಒಳಗುಂಟು ಹೊರಗಿಲ್ಲ ಒಳಗಿಲ್ಲ ಹೊರಗುಂಟು
ತಿಳಿಯುದಿಪ್ಪನು ನಾನಾ ಸ್ಥಳದಿ ವ್ಯಾಪುತನಾಗಿ
ಬೆಳಕು ಕತ್ತಲು ಇನ್ನು ಸ್ಥಳ ಎರಡೆನ್ನದೆ
ಬಲು ಸುಂದರಾಂಗ ನಂತ್ಪೊಳೆವುತಃಲಿಪ್ಪನು
ಸುಲಭ ಭಕುತರಿಗೆ ಗೋಪಾಲವಿಠಲ ರೇಯ
ನೆಲೆಯಾಗುವನು ತನ್ನ ತಿಳಿದರ್ಚಿಪುವಗೆ

ಮನುಷ್ಯನು ಇನ್ನೊಬ್ಬರನ್ನು ನೋಡಲು ತಿಳಿಯಲು ತೋರಿಸುವ ಕುತೂಹಲವನ್ನು ತನ್ನನ್ನೇ ತಿಳಿಯುವಲ್ಲಿ ನೋಡಿಕೊಳ್ಳುವಲ್ಲಿ ತೋರಿಸುವುದು ಅಪರೂಪ. ತನ್ನ ನೆರೆ ಹೊರೆಯುವರು ಸುತ್ತಲಿನ ಜನ ಹೇಗೆ ಬದುಕುವರು ? ಏನು ಮಾಡುವರು ? ಎಲ್ಲೆಲ್ಲಿ ಹೋಗಿ ಬರುವರು ? ಮುಂತಾದ ಸಂಗತಿಗಳಲ್ಲಿ ಎಲ್ಲರಿಗೂ ತಡೆಯಲಾಗದ ಆಸಕ್ತಿ ಇರುತ್ತದೆ. ಆದರೆ ಇಂಥ ಪ್ರಖರ ಜಿಜ್ಞಾಸೆಯ ದೀಪವನ್ನು ತನ್ನಲ್ಲಿಯೇ ಬಿಟ್ಟು ಕೊಳ್ಳಲು ಅವನಿಗೆ ಒಮ್ಮೊಮ್ಮೆ ಅಂಜಿಕೆಯಾಗುತ್ತದೆ. ಅನುಮಾನವಾಗುತ್ತದೆ. ಅವಮಾನವೂ ಆಗುತ್ತದೆ, ಏಕೆಂದರೆ ಜೀವನದುದ್ದಕ್ಕೂ ಅವನ ಜ್ಞಾನದ ಸಾಧನೆ ಗಳೆಲ್ಲ ಬಹಿರ್ಮುಖವಾಗಿಯೇ ಕೆಲಸಮಾಡುತ್ತವೆ. ಹೀಗೆ ಕೆಲಸದಲ್ಲಿ ತೊಡಗಿದಾಗ ಅವನಿಗೆ ಸುಖದ ರಸಕ್ಷಣಗಳು ಒದಗಿ ಬರುತ್ತವೆ. ದುಃಖದ ಉದ್ವಿಗ್ನ ಅನುಭವ ಗಳೂ ಮುತ್ತಿಕೊಳ್ಳುತ್ತವೆ. ಸುಖದ ಕ್ಷಣಗಳನ್ನು ತನ್ನ ನೆನಪಿನ ಕಣಜದಲ್ಲಿ ಸಂಗ್ರಹಿಸಿಡುತ್ತಾನೆ. ದುಃಖದ ಕಲೆಗಳನ್ನೆಲ್ಲ ಅಳಿಸಿಹಾಕಲು, ಮರೆತುಬಿಡಲು ಪ್ರಯತ್ನಿಸುತ್ತಾನೆ. ಸೋಜಿಗದ ಸಂಗತಿಯೆಂದರೆ ದುಃಖದ ಅನುಭವಗಳೆಲ್ಲ ದಿನಗಳು ಸರಿದಂತೆ ನೆನಪಿನ ಕೊಠಡಿಗಳಲ್ಲಿ ಕರಾಳ ರೂಪ ತಾಳುತ್ತವೆ. ಅವುಗಳನ್ನು ನೆನಪಿಸಿಕೊಳ್ಳಲು ಪ್ರಯತ್ನಿಸಿದಷ್ಟೂ ಜೀವನದ ಸಾರ್ಥಕತೆ ಧನ್ಯತೆ ಸೋರುತ್ತ ಹೋಗುತ್ತದೆ. ಸುಖದ ಕ್ಷಣಗಳು ನೆನಪಿನ ಮುಗಿಲಿನಲ್ಲಿ ತಾರೆಗಳಂತೆ ಒಂದು ಕ್ಷಣ ಮಿಂಚಿ ಕಣ್ಮರೆಯಾಗುತ್ತವೆ. ಮನುಷ್ಯನ ಜೀವನ ಇಂಥ ಕ್ಷಣಗಳ ಮಗ್ಗದಲ್ಲಿ ಹೊಯ್ದ ಬಟ್ಟೆಯಾಗಿದೆ. ತನ್ನ ಸುಖದ ಕ್ಷಣಗಳನ್ನು ನೆನೆದುಕೊಳ್ಳಲು ಯತ್ನಿಸಿ ದಷ್ಟೂ ದುಃಖದ ನೆರಳುಗಳು ಇನ್ನಷ್ಟು ದಟ್ಟವಾಗಿ ಮೂಡಿಬರುತ್ತವೆ. ಈ ಹೊಯ್ದಾಟದಲ್ಲಿ ಜೀವನ ಎಲಿಯಟ್ ಕವಿ ಹೇಳಿದಂತೆ 'ಜೀವಿಸುವ ಸೊಗಸನ್ನೇ ಕಳೆದುಕೊಳ್ಳುತ್ತದೆ'.

ನನ್ನೊಳಗೆ ನಾನು ಇಳಿಯಲು ಅಂಜುವುದಕ್ಕೂ ಇಂಥದೇ ಕಾರಣಗಳಿವೆ. ನೆನಪು ಗಣಿ ಕಾರ್ಮಿಕರನ್ನು ಗಣಿಗಳಲ್ಲಿ ಕರೆದೊಯ್ಯುವ ತೊಟ್ಟಿಲು ಇದ್ದ ಹಾಗೆ. ಅದರಲ್ಲಿ ಕುಳಿತು ಸಾವಿರಾರು ಅಡಿ ಕೆಳಗಿಳಿದು ಅವರು ಹೊಟ್ಟೆಪಾಡಿಗಾಗಿ ದುಡಿಯುತ್ತಾರೆ. ಅವರು ಇಳಿದ ಗಣಿಗಳು ಚಿನ್ನದವಾಗಿದ್ದರೂ ಅವರ ಬಡತನ ತಪ್ಪುವುದಿಲ್ಲ. ಕಲ್ಲಿದ್ದಲಿನದಾಗಿದ್ದರೂ ಅವರಿಗೆ ಬಿಳುಪಿನ ಅವಕಾಶವಿಲ್ಲ. ವಜ್ರದವಾಗಿದ್ದರೂ ಅವರ ಕಷ್ಟ ಕಾರ್ಪಣ್ಯಗಳ ಕಠೋರತೆ ತಪ್ಪುವುದಿಲ್ಲ. ಸಾವು ಸಂಕಟಗಳಿಗೆ ಎದೆಯೊಡ್ಡಿ ಛಲದಿಂದ ಅವರು ಶ್ರಮಿಸುತ್ತಾರೆ. ಅವರ ಶ್ರಮದಿಂದ ಪ್ರಪಂಚವು ಬೆಚ್ಚಗಿಡುವ ಬೆಂಕಿಯನ್ನು ಪಡೆಯುತ್ತದೆ. ಸಂಪತ್ತಿನಿಂದ ಸಮೃದ್ಧವಾಗುತ್ತದೆ. ಲಾವಣ್ಯವನ್ನೂ ಕಾಂತಿಯನ್ನೂ ಪಡೆಯುತ್ತದೆ. ನನ್ನೊಳಗೆ ನಾನು ಇಳಿದಾಗ ನನ್ನನ್ನು ಮೊದಲು ಮುತ್ತಿಕೊಳ್ಳುವುದು ನನ್ನ ಬದುಕಿನ ಅಧೀರ ಆರಂಭ. ನನಗೆ ಆಧಾರವೆನಿಸಿದ ವಾತ್ಸಲ್ಯದ ಎರಡು ಮೂರು ಕೊಂಬೆಗಳನ್ನು ವಿಧಿ ಕತ್ತರಿಸಿದಾಗ ನನಗೆ ದುಃಖದ ಮೊದಲ ಪರಿಚಯವಾಯಿತು. ಅದು ನನಗೆ ತಂದು ಒದಗಿಸಿದ ಸ್ಥಿತಿ ಸಹಜ ಸ್ಥಿತಿಯಾಗಿಯೇ ಉಳಿದಿದ್ದರಿಂದ ಬಡತನವಾಗಲೀ ಕಷ್ಟಗಳಾಗಲೀ ನನಗೆ ಅಷ್ಟೊಂದು ಬಿರುಸಾಗಿ ತಟ್ಟಲಿಲ್ಲ. ಇದ್ದುದು, ಹೊದ್ದುದು, ಉಡುವುದು, ತೊಡುವುದು ಬಡತನವೇ ಆದಾಗ ಮನುಷ್ಯನ ಬದುಕಿಗೆ ಅದು ಅಷ್ಟೇನು ಅಸಹನೀಯವೆನಿಸುವುದಿಲ್ಲ. ಅದಕ್ಕೆ ಕಾರಣವೆಂದರೆ ತನ್ನಂಥವರು ಈ ಪ್ರಪಂಚದಲ್ಲಿ ಅನೇಕರಿದ್ದಾರೆ ಎಂಬ ಸೈರಣೆಯು ಒಂದಾಗಿರುತ್ತದೆ. ತುಂಬಾ ಕೊರತೆ ಕಾರ್ಪಣ್ಯ ಕಷ್ಟಗಳಿದ್ದರೂ ಅವೆಲ್ಲ ತೀರ ಎಳವೆಯಲ್ಲಿಯೇ ಒದಗಿದ್ದರಿಂದ ಅವುಗಳ ಬಿಸಿಯು ನನಗೆ ಅಷ್ಟಾಗಿ ತಟ್ಟಲಿಲ್ಲ. ಅವಮಾನದ ಬಿರುನುಡಿಗಳನ್ನು ತಣ್ಣಗೆ ನುಂಗಿಕೊಳ್ಳಬಲ್ಲ ಮಂಜುಗಡ್ಡೆಯೊಂದು ಮನಸ್ಸಿನಲ್ಲಿ ಈಗಾಗಲೇ ಮೂಡಿತ್ತು. ಇಲ್ಲದ ಹಾಗೂ ಇರಬಯಸದ ಸುಖದ ಕನಸುಗಳನ್ನು ಕಾಣುವ ಕಲ್ಪನೆಯ ಕಣ್ಣೊಂದು ಮೆಲ್ಲಗೆ ತೆರೆದುಕೊಳ್ಳುತ್ತಿತ್ತು. ವಾಸ್ತವದೊಂದಿಗೆ ಹೋರಾಡುವ ಬಲದ ಸಂಗ್ರಹ ಅಸಾಧ್ಯವಿದ್ದರೂ ಗೆಳೆಯರ ಒಡನಾಟದ ಪ್ರೀತಿಯ ಪ್ರಪಂಚದಲ್ಲಿ ಬಂದುದೆಲ್ಲವನ್ನೂ ಬರಮಾಡಿಕೊಳ್ಳುವ ತೆರೆದ ಬಾಗಿಲೊಂದು ನನ್ನಲ್ಲಿತ್ತು. "ಒಂದು ಕಿಟಕಿಯನ್ನು ಸದಾ ಹೊಂದಿರುವುದು ಅತ್ಯಂತ ರೋಚಕವಾದ ಸಂಗತಿಯಾಗಿದೆ" ಎಂದು ಒಬ್ಬ ಇಂಗ್ಲಿಷ್ ಲೇಖಕಿ ಹೇಳಿದ್ದಾಳೆ. ಇಂಥ ಕಿಟಕಿಯನ್ನು ಹೊಂದಿರುವುದರ ಪ್ರಯೋಜನವೆಂದರೆ ಅದರ ಮೂಲಕ ಹೊರಗಿನ ಪ್ರಪಂಚವನ್ನೂ ಕಾಣಬಹುದು. ಒಳಗೆ ನಡೆಯುವುದೆಲ್ಲವನ್ನೂ ಕಾಣಬಹುದು. ಸುದೈವದಿಂದ ನನ್ನ ತಾಯಿ ನನಗೆ ಇಂಥದೊಂದು ಕಿಟಕಿಯನ್ನು ವ್ಯವಸ್ಥೆ ಮಾಡಿಕೊಟ್ಟಿದ್ದಳು. ಅದರ ಮೂಲಕ, ನಾನು ದೊಡ್ಡವನಾದಂತೆಲ್ಲ ಹೊರಗೆ ನೋಡಿದ್ದು ಅನುಭವಿಸಿದ್ದು ಯಾವುದೂ ಬಹುಪಾಲು ನನಗೆ

ಸುಖವನ್ನು ತರಲಿಲ್ಲ. ಅದಕ್ಕೆಲ್ಲ ನಾನು ಅಂಜಿಕೆಯಿಂದಲೇ ಮೈಯೊಡ್ಡಿಕೊಂಡಿದ್ದೆ. ನಿಷ್ಠುರವಾದ ಕಷ್ಟದ ಸಂಗತಿಗಳಿಗೆಲ್ಲ ನಾನು ಹಾಸಿಗೆಯಂತೆ ಬಿಚ್ಚಿಕೊಂಡಿದ್ದೆ. ದೈನ್ಯ, ಅಸಹಾಯಕತೆ, ಮೂಲೆಗುಂಪು ಮಾಡುವ ನಿರಾಸೆಗಳಿಗೆಲ್ಲ ಮೈಯೊಡ್ಡಿನಿಂತ ಮರವಾಗಿದ್ದೆ. ಬರಗಾಲದ ದಂಟಿನಂತೆ ಬಿರುಬಿಸಿಲಿಗೆ ದಿಕ್ಕು ದಿಕ್ಕುಗಳನ್ನು ನೋಡುತ್ತ ನನ್ನನ್ನು ಕೈಹಿಡಿದೆತ್ತುವ ಅಮೃತ ಕ್ಷಣಕ್ಕಾಗಿ ಕಾಯುತ್ತಿದ್ದೆ. ನನ್ನ ತಾಯಿ ನನಗಾಗಿ ಕಟ್ಟಿಸಿದ ಕಿಟಕಿಯಿಂದ ಸದಾ ಒಳಗೆ ನೋಡಲು ಹೆಣಗಿದೆ. ಈ ಅಂತರ್ಮುಖತೆಯಲ್ಲಿ ನನಗೆ ಕಾವ್ಯ, ಸಾಹಿತ್ಯ ಹಾಗೂ ಕ್ರಿಯಾಶೀಲತೆಯ ಅಮೃತ ಕ್ಷಣ ಒದಗಿ ಬಂದಿತು.

ನನ್ನೊಳಗೆ ನಾನು ಮತ್ತೆ ಮತ್ತೆ ಇಣಕಿನೋಡುವ ಪ್ರೇರಣೆ ಮತ್ತು ಹವ್ಯಾಸಗಳನ್ನು ಪಡೆದ ಭಾಗ್ಯವು ನನಗೆ ನನ್ನ ತಾಯಿಯಿಂದಲೇ ದೊರಕಿತು. ಆಕೆ ಹೆಚ್ಚು ಓದಿದವಳಲ್ಲವಾದರೂ ತಿಳಿದದ್ದು ತಿಳಿಸಿದ್ದು ನನಗೆ ಅತ್ಯಂತ ಬೆಲೆಯುಳ್ಳದ್ದಾಗಿತ್ತು. ಬದುಕನ್ನೂ, ಪ್ರಪಂಚವನ್ನೂ ಕಾಣಲು ನನಗೊಂದು ಕಿಟಕಿಯನ್ನು ಆಕೆ ಕಟ್ಟಿಸಿ ಕೊಟ್ಟಳೆಂದು ಹೇಳಿದೆನಲ್ಲ ಆ ಕಿಟಕಿಯೇ ಕಾವ್ಯಪ್ರೇಮ. ಆಕೆ ಇಂಪಾದ ಧ್ವನಿಯನ್ನು ಹೊಂದಿದ್ದಳು. ಅವಳ ಜೀವಮಾನದಲ್ಲಿ ಒಂದೇ ಒಂದು ಬಾರಿ ಆಕೆ ಹಾಡಿದ್ದನ್ನು ಕೇಳುವ ಸಂದರ್ಭ ನನಗೆ ಒಬ್ಬ ಮಹಾತ್ಮರ ಆರಾಧನೆಯ ಕಾಲದಲ್ಲಿ ಒದಗಿತ್ತು. ಬಾಲ್ಯದಿಂದಲೂ ಕಷ್ಟಗಳಲ್ಲಿಯೇ ಬೆಳೆದು ಕಷ್ಟಗಳಲ್ಲಿಯೇ ಬದುಕಿದ ಆಕೆ ತನ್ನ ಹೃದಯದ ಹಾಡುಗಳನ್ನೆಲ್ಲ ಪ್ರಯಾಸದಿಂದ ಬಚ್ಚಿಟ್ಟುಕೊಂಡಿದ್ದಳೆಂದು ನನಗೆ ಈಗ ತೋರುತ್ತದೆ. ಹರಿದಾಸರ ಕೀರ್ತನೆಯಲ್ಲಿ ಒಂದಾದ

ರಂಗ ಕೊಳಲನೂದಲಾಗ ।
ರಂಗಯ್ಯ ಕೊಳಲನೂದಲು ॥
ಮಂಗಳಮಯವಾಯಿತು ಧರೆ ।
ಜಗಂಗಳು ಪರವಶವಾದವು ॥

ಎಂಬುದನ್ನು ಹಾಡಿದಾಗ ಪಕ್ಕದಲ್ಲಿ ಕುಳಿತ ನನಗೆ ರೋಮಾಂಚನವಾಯಿತು. ಅಷ್ಟು ಇಂಪಾದ ಧ್ವನಿಯಲ್ಲಿ ಅಂಥ ಸುಂದರವಾದ ಕೀರ್ತನೆಯನ್ನು ಆಕೆ ಹಾಡಿದ್ದು—ನನ್ನ ಪಾಲಿಗೆ ಅದೇ ಮೊದಲ ಬಾರಿ ಹಾಗೂ ಅದೇ ಕೊನೆಯ ಬಾರಿ ಆಗಿತ್ತು.

ಪೊಂಗೊಳಲೂದುತ ಮೃಗಪಕ್ಷಿಗಳನೆಲ್ಲ
ಸಂಗಳಿಸುತಲಿಪ್ಪನ
ಅಂಗಜ ಜನಕ ಗೋಪಾಂಗನೇರೊಡನೆ ಬೆಳ
ದಿಂಗಳೊಳಗೆ ಸುಳಿದಾಡೊ ರಂಗಯ್ಯನ ॥

ಮೇ–ಜೂನ್ ೧೯೮೦/೫

ರಂಗನ ಪುಂಗೊಳಲ ಪವಾಡವನ್ನು ಮೈಮರೆತು ಚಿತ್ರಿಸಿದ ದಾಸರ ಕೀರ್ತನೆಯು ಆಕೆಗೆ ಎಂಥ ಸಂತೋಷ ನೀಡಿರಬಹುದೆಂದು ನಾನು ಇಂದಿಗೂ ನನಗಾದ ಸಂತೋಷದಿಂದಲೇ ಅರ್ಥಮಾಡಿಕೊಂಡಿದ್ದೇನೆ. ಕಷ್ಟಗಳಿಂದ ಜರ್ಜರಿತವಾದ ಬದುಕುಗಳ ಪಾಲಿಗೆ ಕಾವ್ಯ ಎಂಥ ಪ್ರೇರಣೆ ಸಂತೋಷಗಳನ್ನು ತರಬಹುದೆಂಬುದನ್ನು ಈಗ ನಾನು ತುಸುಮಟ್ಟಿಗೆ ತಿಳಿದುಕೊಂಡಿದ್ದೇನೆ. ಭಾವಪೂರ್ಣವಾಗಿ ಹಾಡಿದ ಆ ಒಂದು ಕೀರ್ತನೆಯು ನನಗೆ ನನ್ನೊಳಗಿನ ಪ್ರಪಂಚದ ಚೆಲುವಿನ ಕದಗಳನ್ನು ತೆರೆಯಿತು. ಹೊರಗಿನ ಪ್ರಪಂಚದ ನಿಷ್ಠುರವಾದ ವಾಸ್ತವಗಳನ್ನು ಸಹಿಸುವ ಹಾಗೂ ಸಹ್ಯಗೊಳಿಸುವ ರಸದೃಷ್ಟಿಯನ್ನು ಕೂಡ ಪಡೆಯಲು ನನಗೆ ನನ್ನ ತಾಯಿ ಹಾಡಿದ ಆ ಹಾಡು ನೆರವಾಯಿತು. ಪಟ್ಟಣದಲ್ಲಿ ಅದೂ ಬಡವರ ಕೇರಿಯಲ್ಲಿ ಬೆಳೆದ ನನಗೆ ಕಿಟಕಿಯ ಹೊರಗಿನ ದೃಶ್ಯಗಳೆಲ್ಲ ಹಸಿದ, ದುಡಿಯುವ, ಬದುಕಿನೊಂದಿಗೆ ಹೋರಾಡುವ ಜನರ ಜೀವನದ ದೃಶ್ಯಗಳನ್ನು ತೆರೆದು ತೋರಿಸಿತು. ಎರಡು ಬಾರಿ ಮಾತ್ರ ನನಗೆ ಪ್ರಕೃತಿಯ ಸೌಂದರ್ಯದ ದರ್ಶನದ ರಸಕ್ಷಣಗಳೊದಗಿದವು. ಒಮ್ಮೆ ಚಿಕ್ಕಂದಿನಲ್ಲಿ ಗೆಳೆಯರೊಡನೆ ಊರಿನಿಂದ ನಾಲ್ಕು ಮೈಲುಗಳಾಚೆ ಹೊಲದಲ್ಲಿ ಒಂಟಿಯಾಗಿರುವ ಆಂಜನೇಯನ ಗುಡಿಗೆ ಹೋಗಿದ್ದೆನು. ಅಲ್ಲಿಂದ ಮರಳಿ ಬರುವಾಗ ಅಮೋಘವಾದ ಸೂರ್ಯಾಸ್ತವನ್ನು ಕಂಡು ತುಂಬಾ ಸಂತೋಷಪಟ್ಟೆನು. ಪ್ರಪಂಚ ಬೆಳಕಿನಿಂದ ಕತ್ತಲೆಗೆ ತಿರುಗಿ ಕರಗಿ ಹೋಗುವ ಸಂಧಿಕಾಲದಲ್ಲಿ ಬೆಂಕಿಯ ದೊಡ್ಡ ಉಂಡೆಯಂತೆ ತನ್ನ ಬಣ್ಣವನ್ನೆಲ್ಲ ರಾಚಿ ನಿಂತ ಸೂರ್ಯನ ಬೆಡಗು ನನ್ನನ್ನು ದಿಗಿಲುಗೊಳಿಸಿತು. ಸಂಭಾಷಿತವೊಂದು ಹೇಳುವಂತೆ ಮೂಡುವಾಗ ಕೆಂಪಗಿರುತ್ತಾನೆ. ಮುಳುಗುವಾಗಲೂ ಅವನು ಕೆಂಪಗಿರುತ್ತಾನೆ. ಅದರಂತೆ ಸಂಪತ್ತಿನಲ್ಲೂ ಸಂಕಟದಲ್ಲೂ ಮಹಾತ್ಮರು ಒಂದೇ ರೀತಿ ಇರುತ್ತಾರೆ ಎಂಬ ಮಾತು ನನಗೆ ನೆನಪಾಯಿತು. ತನ್ನ ಬೆಳಕಿನ ಕಣ್ಣನ್ನೇ ಕಂಡು ಲೋಕ ತಡವರಿಸುತ್ತಿದ್ದಾಗ ಅಸಂಖ್ಯ ನಕ್ಷತ್ರಗಳು ಮುಗಿಲಿನ ತುಂಬ ಸೂರೆಯಾದವು. ಅವನ್ನು ನೋಡುತ್ತ ನಾವು ಮನೆಗೆ ಬಂದು ತಲುಪಿದೆವು. ಇನ್ನೊಮ್ಮೆ ಪಟ್ಟಣದ ಹೊರವಲಯದಲ್ಲಿ ಇದ್ದ ಜೋಳದ ಹೊಲಗಳಲ್ಲಿ ಹಾದು ಬರುವ ಪ್ರಸಂಗ ನನಗೆ ಒದಗಿತ್ತು. ಅದನ್ನಂತೂ ನಾನೆಂದಿಗೂ ಮರೆಯುವುದು ಸಾಧ್ಯವಿಲ್ಲ. ಹಾಲು ಸುರಿಯುವ ಹುಣ್ಣಿಮೆಯ ಚಂದ್ರ ಹೊಳೆಯುತ್ತಿದ್ದನು. ಇಡೀ ಸೃಷ್ಟಿಯೇ ನಿತಾಂತ ಮೌನದಲ್ಲಿ ಸ್ತಬ್ಧವಾಗಿತ್ತು. ಬೆಳೆದು ನಿಂತ ಪಯರಿನ ತುದಿಯಲ್ಲಿ ಹಾಲು ತುಂಬಿದ ತೆನೆಗಳಿದ್ದವು. ಸೀಳು ದಾರಿಯಲ್ಲಿ ಬರುತ್ತಿದ್ದಂತೆ ದಂಟಿನ ಗರಿಗಳು ಚರಪರ ಸಪ್ಪಳ ಮಾಡುತ್ತಿದ್ದವು. ಕಪ್ಪು ಮಣ್ಣಿನ ಈ ಬಯಲನ್ನು ಮನುಷ್ಯ ತನ್ನ ದುಡಿಮೆಯಿಂದ ಎಷ್ಟು ಸುಂದರವಾಗಿ ಮಾಡಿದ್ದಾನೆ, ಎಂಥ ಸಂಪತ್ತಿನ ಕಣಜವನ್ನು ಇಲ್ಲಿ ತೆರೆಸಿದ್ದಾನೆ–ಎಂದು ಮುಂತಾಗಿ

ಏನೇನೋ ಯೋಚಿಸುತ್ತ ನಾನು ಸಾಗಿದ್ದೆನು. ಇಂಥ ಒಂದೆರಡು ರಸಾನುಭವಗಳು ನನಗೆ ಬದುಕಿನ, ಪ್ರಪಂಚದ ಹಾಗೂ ಪ್ರಕೃತಿಯ ಸೌಂದರ್ಯವನ್ನು ದಳದಳವಾಗಿ ಅರಳಿಸಿ ತೋರಿದವು. ತಾಯಿ ನನ್ನಲ್ಲಿ ಮೂಡಿಸಿದ ಕಾವ್ಯ ಪ್ರೇಮವು ನನ್ನನ್ನು ಚಿಕ್ಕಂದಿನಲ್ಲಿ ಪುಸ್ತಕದ ಹುಳುವನ್ನಾಗಿ ಮಾಡಿದವು. ವಾಚನಾಲಯುಗಳನ್ನೆಲ್ಲ ಸುತ್ತಿ ಕಥೆ, ಕವಿತೆ, ಕಾದಂಬರಿಗಳನ್ನೆಲ್ಲ ಓದಿದೆ. ಓದಿದಷ್ಟೂ ನನ್ನಲ್ಲಿ ಶಬ್ದಗಳ ಹಸಿವು ಹೆಚ್ಚಾಯಿತು. ಯಾವ ಕ್ಷಣದಲ್ಲೋ ಕಾವ್ಯದ ಅಂತರ್ಜಲ ಸೆಲೆಯೊಡೆದುಕೊಂಡು ನನ್ನ ಬಾಲ್ಯದಲ್ಲಿಯೇ ಪುಟಿಯಿತು. ಸಣ್ಣ ಝರಿಯಾಗಿ ಹರಿಯುತ್ತ ತಾನು ಕಂಡ ಚೆಲುವನ್ನು, ಉಂಡ ಅನುಭವವನ್ನು ಬಣ್ಣಿಸುತ್ತ ಮುಂದರಿಯಿತು.

ನನ್ನೊಳಗೆ ನಾನು ಇಣಿಕಿ ನೋಡುವ ಹವ್ಯಾಸವು ನನ್ನೊಂದಿಗೆ ಕಳೆದ ಆರು ದಶಕಗಳಿಂದಲೂ ಬೆಳೆದು ಬಂದಿದೆ. ಇದರಿಂದ ನನಗೆ ಜೀವನದ, ಪ್ರಪಂಚದ, ಪ್ರಕೃತಿಯ ಅಮೋಘ ಸೌಂದರ್ಯದ ಮಿಂಚಿನ ಕ್ಷಣಗಳ ದರ್ಶನವಾಗಿದೆ. ದುಡಿಯುವ ಬಡವರ ಬದುಕುಗಳ ನೋವುಗಳನ್ನೆಲ್ಲ ಹೊದಿಸಿದ ಅವರ ಸಜ್ಜನಿಕೆಯ ಅರಿವಾಗಿದೆ. ಕಾಲದ ಗಾಲಿಗಳು ಉರುಳಿದಂತೆ ಅದರಡಿಯಲ್ಲಿ ಸಿಕ್ಕು ಛಿದ್ರಗೊಳ್ಳಲು ನಿರಾಕರಿಸಿ ಹೋರಾಡುವ ಧೀರ ಚೇತನಗಳ ಪರಿಚಯುವಾಗಿದೆ. ಇಂಥ ಜೀವಗಳಿಗೆ ಬೆಂಬಲವಾಗಿ ಸದಾ ನಿಂತು ಅವರನ್ನು ಸಂರಕ್ಷಿಸುವ ಅಪಾರ ಕರುಣೆಯ ಅವ್ಯಕ್ತ ಹಸ್ತದ ಮಹಿಮೆಯನ್ನು ಬಣ್ಣಿಸುವ ಹಾಡುಗಳನ್ನು ಆಲಿಸಿದ್ದೇನೆ. ಅಂಥ ಹಾಡುಗಳು ಒಮ್ಮೆ ಹಕ್ಕಿಯ ಕೊರಳುಗಳೊಳಗಿಂದ ಬಂದರೆ ಇನ್ನೊಮ್ಮೆ ಗಾಳಿಯ ಅಲೆಗಳಲ್ಲಿ ಬಂದಿದೆ. ಒಮ್ಮೆ ಕಡಲಿನ ಅಬ್ಬರದ ಅಲೆಗಳಿಂದೆದ್ದರೆ ಇನ್ನೊಮ್ಮೆ ಮೃದುವಾಗಿ ನಲಗುವ ಹುಲ್ಲಿನಲ್ಲಿ ಮೂಡಿವೆ. ಗೋಪಾಲದಾಸರು ತಮ್ಮ ಒಂದು ಕೀರ್ತನೆಯಲ್ಲಿ ಹಾಡಿದಂತೆ ಆ ಕರುಣೆಯ ಕೈ ಒಳಗುಂಟು ಹೊರಗಿಲ್ಲ. ಒಳಗಿಲ್ಲ ಹೊರಗುಂಟು, ಎಲ್ಲ ಕಡೆ ವ್ಯಾಪಿಸಿದ ಆ ಕರುಣೆಯ ಮಹಿಮೆ ತಿಳಿಯುವುದು ಕಷ್ಟ. ಆ ಕರುಣೆಯೇ ಒಮ್ಮೆ ಬೆಳಕಾಗಿ, ಒಮ್ಮೆ ಕತ್ತಲೆಯಾಗಿ ಮೈದೋರುವುದು. ಅವನನ್ನು ತಿಳಿದು ಅರ್ಚಿಸುವವನಿಗೆ ಬಲು ಸುಂದರಾಂಗನಾದ ಗೋಪಾಲ ವಿಠಲನು ಸುಲಭವಾಗಿ ನೆಲೆಯಾಗುವನು. ನನ್ನೊಳಗೆ ನಾನು ಕಾಣಲೆತ್ನಿಸಿದ್ದು ಅವನ ಈ ನೆಲೆಯನ್ನು–ಬೆಳಕಿನಲ್ಲಿ, ಕತ್ತಲೆಯಲ್ಲಿ, ನೋವಿನಲ್ಲಿ, ಹುಲ್ಲಿನಲ್ಲಿ, ಬೆಟ್ಟದಲ್ಲಿ, ಹೊಳೆಯ ಹರಿಯುವ ನೀರಿನಲ್ಲಿ, ಸಂಜೆ ಮುಂಜಾವುಗಳನ್ನು ಹೊದಿಸುವ ಅಗಾಧ ಮೌನದಲ್ಲಿ.

ಕಥೆ

ಹತ್ತು ಸಾವಿರ ಶಬ್ದಗಳು

⊕ ಮೂಲ ಮರಾಠಿ: ದಿಲೀಪ ಚಿತ್ರೆ

ಕನ್ನಡಕ್ಕೆ: **ಮುಕುಂದ ಜೋಷಿ**

"ಧರ್ಮ, ಅರ್ಥ, ಕಾಮ, ಮೋಕ್ಷ: ನಾಲ್ಕು ಅಧ್ಯಾಯಗಳಲ್ಲಿ ಎಲ್ಲ ಮುಗಿಯುತ್ತದೆ. ನಾಲ್ಕೂ ಕಠಿಣ–ಅದರಲ್ಲೂ ನಡುವಿನ ಎರಡು; ಅರ್ಥ ಮತ್ತು ಕಾಮ. ಇವುಗಳ ಸಾಧನೆಯ ಸುತ್ತ ಮನುಷ್ಯ ಸಾವಿರಾರು ತೊಡಕಿನ ವಿಧಿ ನಿರ್ಮಾಣ ಮಾಡಿದ್ದಾನೆ. ಈ ತೊಡಕಿನಲ್ಲಿ ಅರ್ಥ ಮತ್ತು ಕಾಮ ಏಕೆ ಎನ್ನುವುದಕ್ಕೆ ಎಲ್ಲಿಯೂ ಉತ್ತರ ಸಿಗುವುದಿಲ್ಲ. ಅವರಲ್ಲಿಯ ಮೂಲ ಸತ್ಯ ಸಿಗುವುದು ಕಠಿಣ ವಾಗಿದೆ. ಯಾಕೆಂದರೆ ಈ ವಿಧಿಗಳ ತೊಡಕಿನಲ್ಲೇ ಮನುಷ್ಯನ ಎಲ್ಲ ಬುದ್ಧಿ, ಇಚ್ಛೆ, ಶಕ್ತಿ ವ್ಯಯವಾಗಿ ಹೋಗುತ್ತದೆ. ಸಾಯುವವರೆಗೆ ಯಾರ ಕಣ್ಣೂ ತೆರೆಯುವುದಿಲ್ಲ. ಅಸ್ತಿತ್ವ ಒಂದು ಶಾಪಗ್ರಸ್ತ ವರ್ತುಲವಾಗಿ ಬಿಡುತ್ತದೆ...." ಪ್ರೊಫೆಸರರು ಇಲ್ಲಿಗೇ ನಿಂತರು. ಹತ್ತು ಸಾವಿರ ಶಬ್ದಗಳಲ್ಲೇ ಭಾಷಣ ಮುಗಿಸಬೇಕು. ಪ್ರಾರಂಭ ವಂತೂ ಪ್ರಭಾವಿಯಾಗಿದೆ. ಆದರೆ ಬರೆಯುವಾಗ ಮಧ್ಯದಲ್ಲಿಯೇ ಪೆನ್ನಿನಲ್ಲಿಯ ಮಸಿ ತೀರಿತು. ತ್ರಾಸಿನಿಂದ ಚಡಪಡಿಸುತ್ತ ಕುರ್ಚಿಗೆ ಬೆನ್ನು ಆನಿಸಿ ಕಿಟಕಿಯಿಂದ ಹೊರಗೆ ನೋಡಿದರು.

ಪ್ರತಿ ವರ್ಷದ ಸೆಪ್ಟೆಂಬರ್ ತಿಂಗಳು ಇದೇ ರೀತಿ ಸಂತಸದಿಂದ ಅರಳಿರುತ್ತದೆ. ಅರ್ಥಾತ್ ಯಾವ್ಯಾವೋ ಹೊಸ ಜೀವಗಳು ಜನ್ಮ ಪಡೆದಿರುತ್ತವೆ. ಯಾರೋ ತೀರಿ ಹೋಗಿರುತ್ತಾರೆ. ಯಾರಿಗಾದರೂ ನೌಕರೀ ಹೋಗಿರುತ್ತದೆ. ಯಾರಿಗೋ ಬಡತಿ ಸಿಕ್ಕಿರುತ್ತದೆ. ಯಾರಾದರೂ ಒಮ್ಮೆಲೆ ಪ್ರಸಿದ್ಧಿಗೆ ಬಂದಿರುತ್ತಾರೆ ಮತ್ತು ಯಾರಾದರೂ.... ಆದರೂ ಪ್ರತಿ ಸೆಪ್ಟೆಂಬರ್‌ದಲ್ಲಿ ಮಳೆಗಾಲ ಮುಗಿಯಲು ಬಂದಿರು ತ್ತದೆ, ಮಣ್ಣಿನಿಂದ ಹೊಸ ಹುಲ್ಲು ತಲೆ ಮೇಲಕ್ಕೆತ್ತಿರುತ್ತದೆ ಮತ್ತು ಪ್ರಕಾಶ.... ಸೆಪ್ಟೆಂಬರಿನ ಪ್ರಕಾಶ ಅಂದರೆ ಫ್ಯಾಬುಲಸ್.

ಮೆಲ್ಲಗೆ ಅವರೆದುರು ಚಹಾದ ಕಪ್ಪು ಇಡಲಾಗುತ್ತದೆ ಅವರಿಗೆ ಒಮ್ಮೆಲೇ ಹಗುರಾದಂತಹ ಅನುಭವ. ಸುಲೂ–ಅವರ ಹೆಂಡತಿ ಅವರ ಪ್ರತ್ಯೇಕ ಅವಶ್ಯಕತೆಗಳನ್ನು ಚಾಚೂ ತಪ್ಪದೆ ಎಷ್ಟೊಂದು ಸಹಜವಾಗಿ, ಸರಳವಾಗಿ ಗುರುತಿಸುತ್ತಾಳೆ. ಐದು ವರ್ಷಗಳ ಹಿಂದೆ ಅವಳ ಜೊತೆಗೆ ಮದುವೆಯಾದಾಗ ತಮಗಿಂತ ಹದಿನೈದು ವರ್ಷ ಸಣ್ಣವಳ ಜೊತೆಗೆ-ಬಹಳಷ್ಟು ಜನ, ಬೇಕಾದಷ್ಟು ಜನ ತಮ್ಮ ತಮ್ಮಲ್ಲೇ ಸಣ್ಣದನಿಯಲ್ಲಿ ಬಡಬಡಿಸಿದ್ದರು.

ಅವರ ಅತ್ಯಂತ ಹತ್ತಿರದ ಗೆಳೆಯ ಹೇಳಿದ್ದ: "*Frankly* ಮಧು, *Are you sure you are not making a mistake ? In ten more years you are fifty and She will be just thirty five.... wonldn't that create a crisis ?* ನೀ ಮೆಚುರ್ಡ್ ಇರುವಿ. ಇದರ ಬಗ್ಗೆ ನೀನು ವಿಚಾರ ಮಾಡಲೇಬೇಕು".

"ನಿನಗೆ ಏನು ಹೇಳುವುದಿದೆ ಗೊತ್ತು ನನಗೆ. ಕೇವಲ *Lonely* ಅನಿಸುತ್ತದೆ ಅದಕ್ಕಾಗಿ ನಾನು ಮದುವೆಯಾಗುತ್ತಿದ್ದೇನೆಂದಲ್ಲ. ನನ್ನ ಕಡೆಗೆ ಕೆಲಸಕ್ಕೇನೂ ಕೊರತೆಯಿಲ್ಲ, ಆದರೆ *you know, I am in love, she loves me too.* ಮತ್ತೂ ಮುಖ್ಯ ಅಂದರೆ *is sex all ?*"

IS SEX ALL ? ಬಹಳ ಸಲ ತಮ್ಮಷ್ಟಕ್ಕೇ ತಾವೇ ಈ ಪ್ರಶ್ನೆ ಕೇಳಿಕೊಂಡಿದ್ದಾರೆ. *True.* ನಾನು ಸ್ವತಃ *Sex enjoy* ಮಾಡುತ್ತೇನೆ-ಇಪ್ಪತ್ತೈದರ ಉಮೇದಿನ ಹರೆಯದ ಹುಡುಗನಂತೆ. ಅದಲ್ಲದೆ ಇದರ ಹೊರತಾಗಿಯೂ 'ಎಷ್ಟೊಂದು' ಇದೆ ಈ ಸಂಬಂಧದಲ್ಲಿ ... ಎಷ್ಟೊಂದಾದರೂ ಇದೆ....

ಕ್ಲಾಸ್‌ರೂಮಿನಲ್ಲಿಯ ಆತ್ಮವಿಶ್ವಾಸದ ಸ್ವರದಲ್ಲಿ ಇದನ್ನು ಮತ್ತೆ ಮತ್ತೆ.... ಪುನಃ ಪುನಃ ತಮಗೆ ತಾವೇ ಹೇಳಿಕೊಂಡಿದ್ದಾರೆ.

(೨)

ಮನೆಯ ಎದುರಿಗಿಂದ ಪೋಲೀಸ್ ಜೀಪು ಸಾಯರನ್ ಬಾರಿಸುತ್ತಾ ಹೊರಟು ಹೋಯಿತು.

ಟೇಬಲ್ ಲ್ಯಾಂಪ್‌ನ ಬೆಳಕಿನಲ್ಲಿ ಅವರು ಸುಲೂ ಕಡೆಗೆ ನೋಡಿದರು. ಅವರಿಗೆ ಅವಳು ರಸಭರಿತ, ಪಕ್ವ, ಪ್ರೌಢ ಮತ್ತು ಚೆಲುವೆಯಾಗಿ ಕಂಡಳು. ಅವಳ ಧ್ಯಾನ ಪುಸ್ತಕದಲ್ಲಿತ್ತು.

"ಸುಲೂ"

"ಆಂ ?"

"ಏನು ಓದುತ್ತಿರುವಿ ?"

"ಕಮಿಂಗ್ ಆಫ್ ಏಜ್ ಇನ್ ಸಮೋವಾ"

"ಕಾದಂಬರಿ ಓದತ್ತಿರಬಹುದು ಎಂದೆನಿಸಿತು"

"ಯಾಕೆ ? ಸೀರಿಯಸ್ಸಾದದ್ದು ಓದುವುದಿಲ್ಲವೆ ನಾನು ?"

"ಛೆ ! ಹಾಗಲ್ಲ. ಇಷ್ಟೊಂದು ಮಗ್ನಳಾಗಿದ್ದಿ, ಅದಕ್ಕೆ"

"*It is very absorbing*"

ಅವಳು ಪುನಃ ಓದತೊಡಗಿದಳು. ಪ್ರೊಫೆಸರ್ ಎದ್ದರು. ಎಲ್ಲೆಡೆಗೂ ಶಾಂತತೆ. ಆದರೆ ಯಾಕೋ ಏನೋ ಇಂದದು ಅವರಿಗೆ ಸಹನವಾಗುತ್ತಿಲ್ಲ.

"ಸುಲೂ ?"

"ಆಂ ?"

"ಪುಸ್ತಕ ಸ್ವಲ್ಪ ಕೆಳಗಿಡುತ್ತೀಯಾ"

"ನೀವೇ ಹೇಳುವಿರಾ ?"

ಅವಳ ಸ್ವರದಲ್ಲಿ ತಕರಾರು ಇರಲಿಲ್ಲ. ಕೇವಲ ಒಂದು ಆದರ್ಶ, ಶಾಂತ ತುಂಬುತನ.

"ತಿರುಗಾಡಲು ಹೋಗಬೇಕೆಂದು ಅನಿಸು...."

"ಈಗ ? ಈ ಹೊತ್ತಿಗೆ ?"

"ಯಾಕೆ ? ಏನಾಯಿತು ?"

"ಹತ್ತೂ ಮುಕ್ಕಾಲು ಈಗ"

"*So, What ?* ಹೊರಗೆ ನೋಡು. ನೋಡಲ್ಲಿ ಬೆಳದಿಂಗಳ ನದಿ".

"ನಿಮಗೆ ಒಮ್ಮೆಲೆ ಪೊಯಟಿಕ್ ಅನಿಸುತ್ತಿದೆಯೆ ? ಭಾಷಣ ಬರೆದಾಯಿತೆ ?"

"ಆಗಬೇಕಾಗಿದೆ"

"ಮತ್ತೆ"

"ಏನು ಮತ್ತೆ?"

"ನಡೆಯಿರಿ"

"*Don't bother to dress*, ಚೆನ್ನಾಗಿ ಕಾಣುತ್ತಿ".

"ಚೆನ್ನಾಗಿ ಕಂಡು ಮಾಡುವುದಾದರೂ ಏನು ? ರಾತ್ರಿಯ ಈ ಹತ್ತೂ ಮುಕ್ಕಾಲಿಗೆ ?"

"*That's one way of looking at it.* ನಡೆ ಹೋಗೋಣ.

(೩)

ಇಬ್ಬರೂ ಉಸುಕಿನಲ್ಲಿ ನಡೆಯುತ್ತಾ ಹೊರಟಿದ್ದರು. ಎದುರಿಗಿನ ದೃಶ್ಯ ಅಮಾನವ ಅನ್ನಿಸುವಷ್ಟು ಸುಂದರ. ಪರಮಶುಭ್ರ ಬೆಳದಿಂಗಳು, ಹುಚ್ಚೆದ್ದು ಏರಿ ಬರುವ ತೆರೆಗಳು. ಭರತಿಯ ಘೋಷ. ಬೇಹೋಷ ಮಾಡುವ, ತಣ್ಣಗೆ ಸೂಸುವ ಗಾಳಿ ಹಾಗೂ ತೆಂಗಿನ ಗಿಡಗಳ ಗರಿಗಳ ಸಳಸಳ.

ಆದರೆ ಬೆಳದಿಂಗಳು ಅದಕ್ಕೆ ಅದರದೇ ಆದ ಶುಭ್ರ ನಿಶ್ಚಿಂತತೆ ಮತ್ತು ನಿಶ್ಚಿತತೆ. ಒಂದು ಬಿಡಿಸಿದ ಗಣಿತದಂತೆ ಇಡೀ ಜಗತ್ತು ಅದರ ಕೆಳಗೆ ಹಬ್ಬಿ ಕೊಂಡಂತಹ ಅನುಭವ.

"ಸುಲೂ, ನಾವು ದಂಡೆಯಗುಂಟ ನಡೆಯೋಣ-ತೊಯ್ದ ಉಸುಕಿನಲ್ಲಿ". ಏನೂ ಅನ್ನದೆ ಅವಳು ದಂಡೆಯ ಕಡೆಗೆ ಹೊರಳಿದಳು.

ನಡೆಯುತ್ತಿರುವಾಗ ಪ್ರೊಫೆಸರರಿಗೆ ಮಾತಾಡಬೇಕು-ಹೇಳಬೇಕು ಎಂದು ಅನಿಸುತ್ತಿತ್ತು. ಆದರೆ ಸಮುದ್ರದ ಸಪ್ಪಳ ಎಷ್ಟೊಂದಿತ್ತೆಂದರೆ ಅವರಲ್ಲಿ ಮಾತಾಡುವ ಶಕ್ತಿಯೇ ಉಳಿಯಲಿಲ್ಲ.

ಅಕಸ್ಮಾತ್ ಅವರ ಕಾಲುಗಳು ಯಾವುದರಲ್ಲೋ ಸಿಕ್ಕಂತಾಗಿ ಅವರು ನಿಂತರು. ಅವರ ಚಪ್ಪಲಿಗಳಲ್ಲಿ ಒಂದು ಒಣಗಿದ ದೊಡ್ಡ ಮಾಲೆ ಸಿಕ್ಕಿಕೊಂಡಿತ್ತು. ಒಂದು ಕ್ಷಣ ಅವರಿಗೆ ಚದುರಂಗದ ಆಟದಲ್ಲಿ ಸೋಲಿಸುವಾಗ 'ಚೆಕ್' ಎಂದು ಯಾರೋ ಅಂದಂ ತಹ ಭಾಸ. ಹೆಣದ ಮೇಲಿನ ಮಾಲೆ ಅದು. ನಡುಗುತ್ತಾ ಗಾಬರಿಯಾಗಿ ಚಪ್ಪಲಿಯನ್ನು ಝಾಡಿಸಿದರು.

ಅವಳು ತನ್ನದೇ ಗುಂಗಿನಲ್ಲಿ ತನ್ಮಯತೆಯಿಂದ ಮುಂದೆ ಹೊರಟಿದ್ದಳು.

ಅವರೂ ಬೇಗ ಬೇಗ ನಡೆಯತೊಡಗಿದರು. ಅವರ ಕಾಲುಗಳಿಗೆ ತೊಯ್ದ ಉಸುಕು ಹತ್ತುತ್ತಿತ್ತು-ಹತ್ತದಂತೆಯೂ ಇತ್ತು.

ಅವಳು ಆರೇಳು ಹೆಜ್ಜೆಗಳ ಅಂತರದಲ್ಲಿ ಮುಂದೆ ಮುಂದೆ ಇದ್ದಳು. ಅವಳ ಶುಭ್ರ ಸೀರೆ ಗಾಳಿಯಲ್ಲಿ ಫಟಫಟಿಸುತ್ತಿತ್ತು. ಯಾವುದೋ ಮಾಯಾವಿ ಆತ್ಮ ಗರ್ಜಿಸುತ್ತಾ ನಡೆದಂತೆ ಅವಳ ನಡಿಗೆ. ಗಾಳಿಯಿಂದ ಅವರ ಕಿವಿಗಳು ಬಧಿರವಾದಂತಹ ಭಾಸ. ಅವರಿಗೆ ಶ್ವಾಸೋಚ್ಛ್ವಾಸ ಕೂಡ ಕಠಿಣ ಅನ್ನಿಸತೊಡಗಿತು. ಆದರೂ ಅವಳ ಬಳಿಗೆ....ಬಳಿಗೆ....ಬಂದರು.

"ಸುಲೂ ?" ಅವಳು ನಿಂತಳು.

"ಉಸುಕಿನ ಮೇಲೆ ಹೋಗಿ ಕೂಡೋಣ".

ನಿಶ್ಶಬ್ದದ ಮುದ್ದೆಯಂತೆ ಅವಳು ಒಣಗಿದ ಉಸುಕಿನ ಕಡೆಗೆ ಹೊರಳಿದಳು. ಅವರು ಅವಳ ಹಿಂದೆ ಹಿಂದೆ. ನಂತರ ಒಂದು ಕಡೆಗೆ ಇಬ್ಬರೂ ನಿಂತರು.

(೪)

ಚಂದ್ರ ಈಗ ಅವರ ನೆತ್ತಿಯ ಮೇಲೆ ಬಂದಿದ್ದ. ಬೆಳದಿಂಗಳಿನ ಖಚಿತತೆ ಇನ್ನೂ ಸ್ಪಷ್ಟವಾಗಿತ್ತು. ಸುಣ್ಣದಂತೆ ಬಿಳಿ ಕಾಣುವ ಉಸುಕು. ಎದುರಿಗೆ ಕ್ಷಿತಿಜ. ಎದುರಿಗಿನ ಆಕಾಶ ಸ್ತಬ್ಧ ಗೋಲ ಗುಮ್ಮಟದಂತೆ. ಬಿಳಿ ಹುಚ್ಚು ಮೋಡಗಳು. ಹಿಂದೆ ತೆಂಗಿನ ಮರಗಳ ಜಾವಳದ ಸಪ್ಪಳ.

ಪ್ರೊಫೆಸರರು ಉಸುಕಿಗೆ ಬೆನ್ನು ಹಚ್ಚಿದರು. ಅವರ ದೃಷ್ಟಿ ಆಕಾಶದ ಕಡೆಗೆ. ಮೋಡಗಳು ಹುಚ್ಚೆದ್ದು ಹರಿಯುತ್ತಿದ್ದವು. ಚಂದ್ರನಿಂದ ಬೆಳಗುತ್ತಿದ್ದವು. ಹೊಳೆಯುತ್ತಿದ್ದವು. ಒಂದರೊಂದರಲ್ಲಿ ಒಂದಾಗುತ್ತಿದ್ದವು. ಬೇರೆಯಾಗುತ್ತಿದ್ದವು. ಪುನಃ ಕೂಡುತ್ತಿದ್ದವು.

ಅವಳು ಕುಳಿತೇ ಇದ್ದಳು. ಮೌನದ ಶುಭ್ರ ಪ್ರತಿಮೆಯಂತೆ. ಅವಳ ಉಸಿರಾಟವಾದರೂ ನಡೆದಿದೆಯೋ ಹೇಗೆ ಅನ್ನುವುದೂ ಗೊತ್ತಾಗದ ಹಾಗೆ! ಆದರೆ ಆ ಇಡೀ ಅಪೂರ್ವ ಬಿಳಿ ಬೆಳಕಿನಲ್ಲಿ. ತಂಪು ಶುಭ್ರತೆಯಲ್ಲಿ ಅವಳೊಬ್ಬಳೇ ಸ್ಥಿರವಾಗಿದ್ದಳು. ಅವಳ ದುಂಡು ಮಾಂಸಲ ತೊಡೆಗಳ ನೆರಳಿನಲ್ಲಿ ಅವರ ಮುಖ ಮುಚ್ಚಿತ್ತು. ಅಲ್ಲಿಯೇ ಒಂದಿಷ್ಟು ಉಷ್ಣತೆ ಇತ್ತು. ಉಷ್ಣತೆ ? ಅವರಿಗನಿಸಿತು ... ಬೆಂಕಿ ! ಮತ್ತೂ ಅವರಿಗೆ ಅನಿಸಿತು: ಈ ಶುಭ್ರ ವಸ್ತ್ರಗಳ ಅಡಿಯಲ್ಲಿ ಅವಳ ಗುಲಾಬಿ ಶರೀರ ಉಷ್ಣತೆಯಿಂದ ಧಗಧಗಿಸುತ್ತಿದೆ ಎಂದು. ಅವಳ ಮೌನದಲ್ಲಿ ಈ ಉಷ್ಣತೆ ಬೂದಿಯ ಪರದೆಯ ಕೆಳಗೆ ತಮ್ಮಲ್ಲೇ ಉರಿಯುವ ಕಿಡಿಗಳಂತೆ ಅರಳುತ್ತಿದೆ. ಅಕಸ್ಮಾತ್ ಅವರು ಅವಳ ತೊಡೆಯನ್ನು ಅಂಗೈಯಿಂದ ಒತ್ತಿದರು. ಬಟ್ಟೆಗಳ ಒಳಗಿನ ಮಾಂಸಲ ಶರೀರ ಅನುಭವಿಸಿದರು. ಆದರೆ ತಾವು ಕಲ್ಪಿಸಿಕೊಂಡಿದ್ದ ಬೆಂಕಿಯನ್ನು ಮಾತ್ರ ಅನುಭವಿಸಲಿಲ್ಲ. ಅವಳ ತೊಡೆಗಳು ಒಂದಿಷ್ಟೂ ಕಂಪಿಸಲಿಲ್ಲ. ಇಷ್ಟು ಹತ್ತಿರದಿಂದ ಅವಳು ಅಜಪುಳಾಗಿ ಭಾಸಿಸಿದರೂ ನಿಶ್ಚಲಳಾಗೇ ಇದ್ದಳು.

ಅವರಿಗೆ ಅನಿಸಿತು. ಮತ್ತೆ ಪ್ರಯತ್ನಿಸಬೇಕು. ಮಿಂಚಿನಂತೆ ಅವರು ಚಂಗನೆ ಎದ್ದರು. ತಮ್ಮ ಅಂಗೈ, ಇಡೀ ಶರೀರ ಜ್ವರದಿಂದ ತಪಿಸುತ್ತಿರುವಂತಹ ಅನಿಸಿಕೆ.

ಅವಳನ್ನು ತಮ್ಮ ಕಡೆಗೆ ಎಳೆದಾಗಲೇ ಅವಳ ಮುಖ ಅವರ ಕಡೆಗೆ ಹೊರಳಿದ್ದು. ಬೆಳದಿಂಗಳಿನಲ್ಲಿ ಅವಳ ತುಟಿಗಳು ಒಣಗಿದ ನೇರಳೇಹಣ್ಣಿನಂತೆ ಕಂಡವು. ಅವಳನ್ನು ಚುಂಬಿಸಿದಾಗ ಅವಳ ಒಂದು ಕೈ ಅವರ ಹೆಗಲ ಮೇಲೆ ಸಡಿಲಾಗಿ ಬಿದ್ದುಕೊಂಡಿತು. ಆದರೆ ಅವಳ ಕಣ್ಣುಗಳು ಮಾತ್ರ ಮುಚ್ಚಲಿಲ್ಲ.

"ಸುಲು ? ಸುಲು ?? ಸುಲು ???" ಅವರೆಂದರು. ಅವರ ಭಯ, ಅವರ ಉತ್ಕಂಠತೆ, ಅವರ ಲಾಲಸೆ ಅವರ ಸಾಮರ್ಥ್ಯದ ಹೊರಗಿನದಾಗತೊಡಗಿತ್ತು.

"ಅಂ ?" ಅವಳೆಂದಳು.

"*I want to make love to you*". ಈ ವಾಕ್ಯ ಯಾವಾಗಲೂ ಇಂಗ್ಲೀಷಿನಲ್ಲೇ ಹೇಳಬೇಕೆಂದು ನಮಗೆ ಏಕೆ ಅನಿಸುತ್ತದೆ ? ನಾವು ನಮ್ಮಿಂದ ಏನು ಮುಚ್ಚಿಡುತ್ತೇವೆ ? ಹೀಗೆಲ್ಲ ಒಂದು ಕ್ಷಣ ಯೋಚಿಸಿದರು.

"ಮನೆಗೆ ಹೋಗೋಣ ?" ಕ್ಷೀಣ ದನಿಯಲ್ಲಿ ಕೇಳಿದಳವಳು. ಅವಳ ಕೈಗಳನ್ನು ಗಟ್ಟಿಯಾಗಿ ಅವರು ಹಿಡಿದರು. ಸ್ವತಃ ಎದ್ದು ಅವಳನ್ನು ಎಬ್ಬಿಸಿದರು. ಎಳೆಯುತ್ತಲೇ ಎಂಬಂತೆ ಅವಳನ್ನು ಮನೆಯ ಕಡೆಗೆ ಕರೆದುಕೊಂಡು ಹೊರಟರು.

ಸಮುದ್ರದ ಸಪ್ಪಳ ಹಿಂದುಳಿಯಿತು.

ಬೆಳದಿಂಗಳು ಅಳಿದು ಹೋಯಿತು.

(೫)

ಬೆಡ್‌ರೂಮಿನ ದೀಪದ ಬೆಳಕಿನಲ್ಲಿ ಅವಳ ಸುಂದರತೆ ತಮ್ಮ ಸಾಮರ್ಥ್ಯದ ಸೀಮೆಯ ಒಳಗಿನ ಸುಂದರತೆಯಾಗಿ ಕಂಡಿತು. ಮತ್ತೆ ಮೊದಲಿಗಿಂತ ಹೆಚ್ಚು ಸಭ್ಯಳಾಗಿ ಕಾಣುತ್ತಿದ್ದಾಳೆ ಎಂದೂ ಅನಿಸಿತು.

ದೀಪ ಆರಿಸಿದರು.

ಬೆಳದಿಂಗಳು ಒಮ್ಮೆಲೇ ಅಂಜಿ ಸ್ಥಿರವಾಯಿತು.

ಅವಳನ್ನು ಬಳಿಗೆ ಎಳೆದರು. ಅಂಗೈ ಬಿಸಿ ಆದರೂ ವಿವಶತೆಯಿಂದ ಅವಳ ಬತ್ತಲೆ ಶರೀರದ ಮೇಲೆ ಓಡಾಡಿತು. ಅವಳ ಶರೀರ ಬಿಸಿ ಇತ್ತು. ಉಸಿರಾಟ ನಡೆದಿತ್ತು. ಆದರೂ ಮೈ ಒಂದಿಷ್ಟೂ ಕಂಪಿಸುತ್ತಿರಲಿಲ್ಲ–ಥರಥರಿಸುತ್ತಿರಲಿಲ್ಲ. ಅವರ ಬಾಹುಗಳ ಕೆಳಗೆ ಅವಳ ತುಂಬಿದ ಎದೆ ಮೇಲೆ ಕೆಳಗೆ ಆಗುವಾಗಲೂ ಅವರಿಗೆ ತಾವು ಏಕಾಕಿ–ನಿಜಕ್ಕೂ ಏಕಾಕಿ ಅನ್ನಿಸತೊಡಗಿತ್ತು. ನಂತರ ಇದೆಲ್ಲ ಅಸಹ್ಯವಾಗಿ ಅವರು ಅವಳಲ್ಲಿ ತಮ್ಮನ್ನು ಸೇರಿಸಿಕೊಂಡರು. ಗತಿಮಾನ, ಧಪಧಪಿಸುವ ತಂತಾನೆಯ ಉಷ್ಣ ಚಲನವಲನ.

"ಸುಲು ? ಸುಲು ?? ಸುಲು ???"

ಅವಳು ಏನೂ ಮಾತನಾಡಲಿಲ್ಲ. ಅವಳ ಬತ್ತಲೆ ಬಿಸಿಬಾಹುಗಳು ಸಡಿಲಾಗಿ ಅವರ ಬೆನ್ನಿನ ಮೇಲೆ ಇಳಿದವು–ಅಲ್ಲೇ ಉಳಿದವು.

ನಂತರ ಅಲಾರಂ ಗಡಿಯಾರದ 'ಟಿಕ್–ಟಿಕ್' ದೊಡ್ಡದಾಗುತ್ತಾ....ದೊಡ್ಡದಾಗುತ್ತಾ ಹೋಯಿತು.

ಕೆಳಗೆ ರಸ್ತೆಯ ಮೇಲೆ ಒಂದು ಲಾರಿ ಧಡಧಡ ಸಪ್ಪಳ ಮಾಡುತ್ತಾ ಮಾಯವಾಯಿತು. ಅದರ ಹೆಡ್‌ಲೈಟಿನ ಬೆಳಕು ಆರಿದ ಬಲ್ಬಿನ ಮೇಲೆ ಹರಿದಾಡಿತು.

"ಸುಲೂ ?"

"ಆಂ ?" ದಣಿದ ಸ್ವರದಲ್ಲಿ ಅವಳು ಅಂದಳು.

"ನಿನ್ನ.... ನಿನಗೆ ... ನಿನಗೆ ಸಮಾಧಾನವಾಗಲಿಲ್ಲ ?"

ಪ್ರೊಫೆಸರರ ಕಂಠದಲ್ಲಿಯ ಬಿಕ್ಕಳಿಕೆ ಒಂದು ಕ್ಷಣ ಕಂಠದಲ್ಲಿಯೇ ಅಡಕಾಯಿಸಿತು.

ಅವಳ ಉಸಿರಾಟ ಕಷ್ಟದಿಂದ ಜೋರು ಜೋರಾಗಿ ನಡೆದಿತ್ತು. ಅವರಿಗೆ ಕೇಳಿಸುತ್ತಿತ್ತು.

ಅವಳು ಏನೂ ಮಾತನಾಡಲೇ ಇಲ್ಲ. ಹೊರಗೆ ಬೆಳದಿಂಗಳಿನಲ್ಲಿ ಕಾಗೆಗಳು ಕಾವ್‌ಕಾವ್ ಎಂದು ಒದರುತ್ತಿದ್ದವು.

ನಂತರ ಇಲ್ಲಿಯವರೆಗೆ ಅವರ ಪ್ರಶ್ನೆಗಳಿಗೇ ಉತ್ತರ ಕೊಡುತ್ತಿದ್ದೆ ಎನ್ನುವ ರೀತಿಯಲ್ಲಿ ಹೇಳಿದಳು.

"ನನಗೆ ಯಾಕೋ ಏನೋ ಸರಿ ಅನ್ನಿಸುತ್ತಿಲ್ಲ".

"ಯಾಕೆ ? ಏನಾಗುತ್ತಿದೆ ?" ಕಿಂಚಿತ್ ಎದ್ದವರಂತೆ ಮಾಡುತ್ತಾ ಕೇಳಿದರು.

"ಏನೂ ಇಲ್ಲ, ಕೇವಲ ದಣಿದಂತೆ ಅನಿಸುತ್ತಿದೆ".

"ಹೌದು ನಾವು ಅಷ್ಟೊಂದು ನಡೆಯಬಾರದಾಗಿತ್ತು"

"ಹಾಗಲ್ಲ, ನನಗೆ ಇತ್ತಿತ್ತಲಾಗಿ ಹೀಗೇ ಅನಿಸುತ್ತಿದೆ. ನಿಮ್ಮಷ್ಟು ಉತ್ಸಾಹ ಅನಿಸುವುದಿಲ್ಲ.

"ಛಿ ! ಹುಚ್ಚಿ ? *You are still in your Prime*".

"ಎಂಥದ್ದು ?" ಅವಳು ಮಂದ ವಿಚಿತ್ರ ಸ್ವರದಲ್ಲಿ ಹೇಳಿದಳು "ನನಗಂತೂ ಇತ್ತೀಚೆಗೆ ನನ್ನ ವಯಸ್ಸಾಗಿದೆ ಎಂದು ಅನಿಸುತ್ತಿರುತ್ತದೆ".

ಯಾರೋ–ಸಾವಿರಾರು ಪ್ರೇಕ್ಷಕರ ಎದುರು–ಕಪಾಲಕ್ಕೆ ಜೋರಿನಿಂದ ಹೊಡೆದಂತೆ ಪ್ರೊಫೆಸರರಿಗೆ ಅನಿಸಿತು.

●

ವಿಕಾಸವಾದ ದರ್ಶನ

⊕ ರಾಘವೇಂದ್ರ ಪಾಟೀಲ

ಸೃಷ್ಟಿಯ ಮೂಲ ಮತ್ತು ಅದರ ಅಸ್ತಿತ್ವ ಹಾಗೂ ಮನುಷ್ಯನ ಬದುಕಿನ ಅರ್ಥವಿನ್ಯಾಸಗಳನ್ನು ಕುರಿತ ಮುಖ್ಯ ಪ್ರಶ್ನೆಗಳನ್ನು ತತ್ವಶಾಸ್ತ್ರ ಎತ್ತುತ್ತದೆ. ಈ ಪ್ರಶ್ನೆಗಳ ಉತ್ತರಕ್ಕಾಗಿ ತತ್ವಶಾಸ್ತ್ರ ಚಡಪಡಿಸುತ್ತಿರುತ್ತದೆ. ಗ್ರೀಕ್ ವೈಚಾರಿಕ ಪೈಥಾಗೊರಸ್‌ನ ಟಂಕಸಾಲೆಯಲ್ಲಿ ಮೂಡಿಬಂದ 'ಫಿಲಾಸಫಿ' ಎಂಬ ಪದ ಇಂಥ 'ಜ್ಞಾನದ ಬಗೆಗಿನ ಪ್ರೀತಿ' ಎಂಬರ್ಥ ಕೊಡುವಂಥದು. ಭಾರತೀಯ ಪರಂಪರೆಯಲ್ಲಿ 'ದರ್ಶನ' ಎಂದು ಗುರುತಿಸಲ್ಪಡುವ ಇದು ಸೃಷ್ಟಿಯ ಮೂಲಸತ್ವ ಮತ್ತು ಬದುಕಿನ ಉದ್ದೇಶಗಳ ಕಾಣ್ಕೆಯನ್ನು ನಿರೂಪಿಸುವಂಥದು.

ಸೃಷ್ಟಿಯ ಮೂಲವನ್ನು ಕುರಿತ ಪ್ರಶ್ನೆಯನ್ನು ತತ್ವಶಾಸ್ತ್ರವು ಜಡ ಮತ್ತು ಚೇತನಗಳ ಮೂಲನೆಲೆಯಲ್ಲಿ ಎದುರುಗೊಳ್ಳುತ್ತದೆ. ಆಗ ಚೈತನ್ಯವು ಜಡವನ್ನು ನಿರೂಪಿಸುತ್ತದೆನ್ನುವ ಆದರ್ಶವಾದ ಮತ್ತು ಇದಕ್ಕೆ ಪೂರ್ತಿಯಾಗಿ ವಿರುದ್ಧವಾಗಿ ಭೌತಜಗತ್ತಿನ ವ್ಯಾಪಾರಗಳು ಚೈತನ್ಯಕ್ಕೆ ಮೂಲವಾಗುತ್ತದೆನ್ನುವ ವಸ್ತುವಾದೀ ಸಿದ್ಧಾಂತಗಳು ಹುಟ್ಟಿಕೊಳ್ಳುತ್ತವೆ. ಆದಿಮಾನವನು ತನ್ನ ಸುತ್ತಲಿನ ಸೃಷ್ಟಿಯನ್ನು ಅದರ ಅಪರಿಚಿತ ನೆಲೆಯಲ್ಲಿ ಗ್ರಹಿಸಿದ್ದರಿಂದ ಅವನು ಸೃಷ್ಟಿಯನ್ನು ತನ್ನಿಂದ ಬೇರೆಯಾದ ಒಂದಂಶವೆಂದು ಗ್ರಹಿಸಿದನು. ಇಂಥ ಸೃಷ್ಟಿಯ ಗುಣಲಕ್ಷಣಗಳ ರಹಸ್ಯ ಅರಿಯುವ ಅವನ ಪ್ರಯತ್ನವಾಗಿ ಅದು ಅವನಿಗೆ ಮಾನವ ಲಕ್ಷಣ ಹೊಂದಿದಂತೆ-ಪ್ರಾಣಿ ಲಕ್ಷಣ ಹೊಂದಿದಂತೆ ತೋರುತ್ತ ಈ ಗ್ರಹಿಕೆಗಳು ಅಪರಿಪೂರ್ಣವೆನ್ನಿಸುತ್ತ ಕೊನೆಗೆ ಅವನಿಗೆ ದೈವತ್ವದ ಕಲ್ಪನೆಗಳು ಮೂಡಿಬಂದವು. ಆತ್ಮ ಮತ್ತು ದೈವತ್ವದ ಈ ಪರಿಕಲ್ಪನೆಗಳು ಮೂಡುವ ಕಾಲದಷ್ಟೊತ್ತಿಗೆ ಮಾನವ ಸಮಾಜವು ಜಮೀನುದಾರ-ಒಕ್ಕಲು ಸಂಬಂಧಗಳಲ್ಲಿ ನೆಲೆಗೊಂಡಿತ್ತು.

ಪಾಶ್ಚಾತ್ಯ ಸಮಾಜವು ಈ ಎರಡು ವರ್ಗಗಳನ್ನು (ಜಮೀನ್ದಾರ-ಒಕ್ಕಲು) ತೋರುತ್ತಿದ್ದರೆ ಇನ್ನೂ ಹಳೆಯ ನಾಗರೀಕತೆಯ ನೆಲೆಯಾದ ಭಾರತದಲ್ಲಿ ಇದೇ

ವ್ಯವಸ್ಥೆಯು ಇನ್ನಷ್ಟು ಶ್ರೇಣೀಕರಣವನ್ನು ತೋರುತ್ತ ಚಾತುರ್ವರ್ಣ್ಯ ವ್ಯವಸ್ಥೆಯಲ್ಲಿ ನೆಲೆಗೊಂಡಿತ್ತು. ಇಂಥ ಸಂದರ್ಭದಲ್ಲಿ ಸೃಷ್ಟಿಯ ಉಗಮದ ಬಗ್ಗೆ ದೈವ ಸೃಷ್ಟಿವಾದ ಅತ್ಯಂತ ಸ್ಪಷ್ಟವಾಗಿ ನಿರೂಪಿತವಾಯಿತು.

ಈ ದೈವಸೃಷ್ಟಿವಾದ ಏನು ಹೇಳುತ್ತದೆಂದರೆ–ಅಣು ರೇಣು ತೃಣ ಕಾಷ್ಟ–ಹೀಗೆ ಸರ್ವತ್ರ ವ್ಯಾಪಕವಾದ ಸರ್ವಶಕ್ತನಾದ ಭಗವಂತನು ಮನುಷ್ಯನನ್ನೂ ಸೇರಿಸಿ ಸಮಸ್ತ ಸೃಷ್ಟಿಯನ್ನು ಸೃಜಿಸಿದ್ದಾನೆ. ಬೈಬಲ್ಲಿನಲ್ಲಿ ಸೃಷ್ಟಿಕ್ರಿಯೆಯನ್ನು ಕುರಿತ ನಿರೂಪಣೆಯಲ್ಲಿ ಬರುವಂತೆ ಸರ್ವಶಕ್ತನು ಆರು ದಿನಗಳಲ್ಲಿ ಸೂರ್ಯ, ಚಂದ್ರ, ಭೂಮಿ, ನಕ್ಷತ್ರ, ನದಿ, ಮರ-ಗಿಡ-ಬಳ್ಳಿ, ಸಣ್ಣ-ದೊಡ್ಡ ಸಕಲ ಪ್ರಾಣಿಗಳು ಮತ್ತು ಮನುಷ್ಯನನ್ನು ಸೃಷ್ಟಿಸಿ, ಏಳನೆಯ ದಿನ ವಿಶ್ರಾಂತಿಗೆ ತೆರಳುತ್ತಾನೆ. ಉಪನಿಷತ್ತುಗಳೂ ಕೂಡ ಇದೇ ರೀತಿ ದೈವ ನಿರ್ಮಿತ ಸೃಷ್ಟಿಯ ಬಗ್ಗೆ ಹೇಳುತ್ತವೆ. Theory of Special Creation ಎಂದು ಕರೆಯಲ್ಪಡುವ ಈ ವಾದದ ಕೇಂದ್ರದಲ್ಲಿ ನಿರೂಪಿತವಾಗಿರುವ ಅಂಶವೆಂದರೆ ಭಗವಂತನು ಈ ಸೃಷ್ಟಿಯನ್ನು ಈಗ ಹೇಗಿದೆಯೋ ಹಾಗೆ ಸೃಷ್ಟಿಸಿದ್ದಾನೆ; ಸಸ್ಯಗಳು–ಪ್ರಾಣಿಗಳು, ಮನುಷ್ಯ ಮತ್ತು ಅವನ ಸಮಾಜ ರಚನೆ ಇವೆಲ್ಲ ಇಂದು ಹೇಗಿವೆಯೋ ಹಾಗೆ ಅವನು ಸೃಜಿಸಿದ್ದಾನೆ. ಅವು ಬದಲಾಗುವುದಿಲ್ಲ. ಅವುಗಳಲ್ಲಿ ಬದಲಾವಣೆಯನ್ನು ಕಾಣುವುದಾಗಲೀ ಅಥವಾ ಬದಲಾವಣೆಯನ್ನು ಬಯಸುವುದಾಗಲೀ ಭಗವಂತನಿಗೆ ಬಗೆಯುವ ದ್ರೋಹ. ಅಂಥ ಯೋಚನೆ ಪಾಷಂಡಿತನ. ಇದೀಗ ನಾವು ಕಾಣುವುದು ದರ್ಶನವನ್ನಲ್ಲ. ಸಮಾಜದಲ್ಲಿನ ಪಟ್ಟಭದ್ರಗಳು ತಮ್ಮ ಆಸಕ್ತಿಗಳನ್ನು ಕಾಪಾಡಿಕೊಳ್ಳಲು ಯೋಜಿಸುತ್ತಿರುವ ಕಣ್ಕಟ್ಟನ್ನು. ಜಮೀನುದಾರ ಮತ್ತು ಪುರೋಹಿತಶಾಹಿ ಯುಗಳವು ಸಮಾಜದಲ್ಲಿನ ತಮ್ಮ ಸ್ಥಾನವನ್ನು ನಿರಂತರಗೊಳಿಸಿಕೊಳ್ಳಲು ದೈವಸೃಷ್ಟಿವಾದದಂಥ ಚಿಂತನೆಯನ್ನು ಹುಟ್ಟಿಹಾಕಿರುವುದು ಸಹಜವಾಗಿ ಒಡೆದು ತೋರುತ್ತದೆ. ರಾಜತ್ವ, ಜಮೀನುದಾರ–ಗುಲಾಮ ಅಥವಾ ಚಾತುರ್ವರ್ಣ್ಯ ವ್ಯವಸ್ಥೆಯ ಮೌಲ್ಯಗಳು ಅಬಾಧಿತವಾಗಿದ್ದ ಮಧ್ಯಯುಗದಲ್ಲಿ ದೈವಸೃಷ್ಟಿವಾದವು ಅಂತಿಮ ಸತ್ಯದಂತೆ ಗೋಚರವಾಗುತ್ತಿತ್ತು.

ಇಂಥ ಬದಲಾವಣೆರಹಿತ ಸೃಷ್ಟಿಯ ಕಲ್ಪನೆ ವಸ್ತುವಾದೀ ತತ್ವದ ರೂಪದಲ್ಲಿಯೂ ಮೂಡಿಬಂದಿದೆ. ಇಂಗ್ಲಿಷ್ ಚಿಂತಕ ಹಾಬ್ಸ್ ಇಂಥ ವಾದ ಮಂಡಿಸುತ್ತಾನೆ. ಹಾಬ್ಸ್‌ನ ಚಿಂತನೆಯಂತೆ ದೇವನೆಂಬುದು ಇಲ್ಲ, ಅವಿನಾಶಿಯಾದ ಆತ್ಮವೂ ಇಲ್ಲ. ಈ ಸೃಷ್ಟಿ ಎಂಬುದು ಒಂದೇ ಒಂದು ವಸ್ತುದ್ರವ್ಯ. ಈ ವಸ್ತುದ್ರವ್ಯ ವಿವಿಧ ರೂಪಗಳಲ್ಲಿ ತಾತ್ಕಾಲಿಕವಾಗಿ ಕಾಣಿಸಿಕೊಳ್ಳುತ್ತದೆ. ವಸ್ತುದ್ರವ್ಯ ಸ್ಥಿರವಾದದ್ದಾಗಿದ್ದು ಅದು ಬದಲಾವಣೆಗೆ ಒಳಪಡುವುದಿಲ್ಲ. ಹೀಗೆ ಇತ್ಯಾದಿ.... ಹೀಗೆ ವಸ್ತು

ವಾದಿ ಹಾಬ್ಸ್ ಕೂಡ ಬದಲಾವಣೆಯ ವಿರುದ್ಧವಾಗಿ ತನ್ನ ಮತ ಚಲಾಯಿಸುತ್ತಾನೆ. ಹಾಬ್ಸ್‌ನ ಈ ಚಿಂತನೆ ದೈವಸೃಷ್ಟಿವಾದಕ್ಕಿಂತ ಹೆಚ್ಚು ಭಿನ್ನವಾದದ್ದಲ್ಲ, ಇರಲಿ.

2

ಬದಲಾವಣೆಯನ್ನು ಒಪ್ಪಿಕೊಳ್ಳದ ಮಧ್ಯಯುಗದ ಸಂದರ್ಭದಲ್ಲಿ ಬೆಳೆಯುತ್ತಿದ್ದ ಜನಸಂಖ್ಯೆಗೆ ಬೇಕಾದ ಸಾಮಗ್ರಿಗಳನ್ನು ಒದಗಿಸಲು ಇರುವಷ್ಟು ಭೂಮಿಯ ಮಹತ್ತಮ ಪ್ರಯೋಜನ ಪಡೆಯುವತ್ತ ಗಮನಕೊಡದ್ದರಿಂದ ಬೇಸಾಯಕ್ಕೆ ಒಳಪಡದ ಹೆಚ್ಚು ಹೆಚ್ಚು ನೆಲವನ್ನು ಬಳಸಿಕೊಳ್ಳುವ ಮತ್ತು ಬೇರೆ ರಾಜ್ಯದ ನೆಲವನ್ನು ಯುದ್ಧಗಳಲ್ಲಿ ಗೆದ್ದುಕೊಳ್ಳುವುದರಲ್ಲಿ ತೊಡಗಬೇಕಾಯಿತು. ಬಹುತೇಕ ನೆಲವು ಒಂದೇ ಸುಗ್ಗಿಯನ್ನುಂಟುಮಾಡುವಂಥದ್ದು; ಬಹುತೇಕ ಉಪಯುಕ್ತ ಪ್ರಾಣಿಗಳು ಒಂದೇ ಮರಿ ಈಯುವುದು. ಈ ಮಿತಿಗಳು ಮನುಷ್ಯನನ್ನು ಹೊಸ ಚಿಂತನೆ, ಹೊಸ ಸಂಶೋಧನೆಗಳತ್ತ ಪ್ರೇರೇಪಿಸಿದವು. 15ನೇ ಶತಮಾನದಿಂದ ಇಂಥ ಗಾಳಿ ಬೀಸತೊಡಗಿತು. ಜಾಗತಿಕ ವ್ಯಾಪಾರ ಮತ್ತು ಯಂತ್ರಗಳ ಆವಿಷ್ಕಾರ ಆರಂಭವಾಯಿತು. ಭೌತಶಾಸ್ತ್ರ, ರಸಾಯನಶಾಸ್ತ್ರ, ಖಗೋಲಶಾಸ್ತ್ರ, ಗಣಿತ ಮುಂತಾದ ವಿಜ್ಞಾನಗಳಲ್ಲಿ ಹೊಸ ಹೊಸ ಆವಿಷ್ಕಾರಗಳು ಸಾಧ್ಯವಾದವು. ಈ ಅಧ್ಯಯನಗಳ ಚಿಂತಕರು ತತ್ವಶಾಸ್ತ್ರಜ್ಞರೂ ಆಗಿದ್ದರು. ಇವರೆಲ್ಲರ ಚಿಂತನೆಯ ಕಾಲ ಇದೀಗ ಪುನರುತ್ಥಾನದ ಕಾಲ. ಈ ಪುನರುತ್ಥಾನದ ವಸ್ತುವಾದಿ ಚಿಂತಕರು ಸೃಷ್ಟಿಯ ಎಲ್ಲ ವ್ಯಾಪಾರಗಳನ್ನು ದೈವ ಬಂಧನದಿಂದ ಬಿಡಿಸಿ ಸೃಷ್ಟಿಯ ಕೇಂದ್ರದಲ್ಲಿ ಸ್ಥಾಪಿಸಿದರು. ಈ ವ್ಯಾಪಾರಗಳೆಲ್ಲ ಸೃಷ್ಟಿಯು ತಾನೇ ನಿರೂಪಿಸಿಕೊಂಡಿರುವ ನಿಯಮಗಳ ಅನುಸಾರ ನಡೆಯುತ್ತವೆಂದು ನಿರೂಪಿಸುತ್ತ, ದೈವಸೃಷ್ಟಿವಾದಕ್ಕೆ ಪ್ರಬಲ ವಿರೋಧ ಒಡ್ಡಿದರು. ಇದರೊಂದಿಗೇ ಜಮೀನುದಾರೀ ಸಮಾಜ ವ್ಯವಸ್ಥೆಯು ಬಿರುಕು ಬಿಡುತ್ತ ಔದ್ಯಮೀಕರಣದತ್ತ ಜಾರತೊಡಗಿತ್ತು.

ಮಧ್ಯಯುಗದ ಜೀವನ ಮತ್ತು ಸಮಾಜ ವ್ಯವಸ್ಥೆ ಮತ್ತು 15ರಿಂದ 17ನೇ ಶತಮಾನಗಳ ಪುನರುತ್ಥಾನ ಕಾಲದಲ್ಲಿ ಅವು ಅನುಭವಿಸಿದ ಸೋಲು–ಹಿಂಜರಿತಗಳು, ಮತ್ತು ವ್ಯವಸಾಯದ ಉತ್ಪಾದನೆಯ ಮಾರ್ಗವು ಬದಲಾಗುತ್ತ, ಔದ್ಯಮೀಕರಣಗೊಳ್ಳುತ್ತ ಬಂಡವಾಳಶಾಹೀ ವ್ಯವಸ್ಥೆಯು ನೆಲೆಗೊಳ್ಳುತ್ತ ಹೋದಂತೆ ಆ ಕಾಲದ ಸಾಪೇಕ್ಷ ಸತ್ಯಗಳಾಗಿ ಕಂಡು ಬಂದ ಅಂಶಗಳೆಂದರೆ—

i) ಸೃಷ್ಟಿಯಾಗಲೀ, ಮಾನವ ಸಮಾಜ ವ್ಯವಸ್ಥೆಯಾಗಲೀ ಸ್ಥಿರವಾದವುಗಳಲ್ಲ; ಜಂಗಮವಾದವುಗಳು.

ii) ಸೃಷ್ಟಿಯು ನಿರಂತರ ಬದಲಾವಣೆಯನ್ನು ಅಳವಡಿಸಿಕೊಳ್ಳುತ್ತ ಸಾಗುತ್ತದೆ.

ಈ ಅಂಶಗಳನ್ನು ಕುರಿತ ಚಿಂತನೆಯೇ ವಿಕಾಸವಾದ.

ವಿಕಾಸವಾದ ನಿರೂಪಿಸುವುದೇನೆಂದರೆ ಈ ಸೃಷ್ಟಿ ಚಲನಶೀಲವಾದದ್ದು. ಇದು ಇಂದು ಯಾವ ರೂಪದಲ್ಲಿ ಇದೆಯೋ ಅದೇ ರೂಪದಲ್ಲಿ ಇರಲಿಲ್ಲ. ಅತ್ಯಂತ ಸರಳ ರೂಪದಲ್ಲಿ ಉಗಮಗೊಂಡ ಜೀವಿಗಳು ಕ್ರಮೇಣ ತಮ್ಮನ್ನು ತಾವೇ ಬಿಚ್ಚಿಕೊಳ್ಳುತ್ತ ಹಂತ ಹಂತವಾಗಿ ಬದಲಾವಣೆಗಳನ್ನು ಒಳಗೊಳ್ಳುತ್ತ ವೈವಿಧ್ಯಮಯವಾದ ಜೀವರಾಶಿಯು ಈ ಭೂಮಿಯ ಮೇಲೆ ಬೆಳೆದುಬಂದಿದೆ. ಆದಿಕಾಲದ ಜೀವಿಗಳು ಬ್ಯಾಕ್ಟೀರಿಯಾಗಳಂತೆ, ಅಮೀಬಾಗಳಂತೆ ಅತ್ಯಂತ ಸರಳವಾದವುಗಳು. ಈ ರೀತಿಯ ಜೀವಿಗಳು ಕ್ರಮೇಣ ಬದಲಾವಣೆಗಳನ್ನು ಒಳಗೊಳ್ಳುತ್ತ ಹೆಚ್ಚು ಸಂಕೀರ್ಣವಾದ ವೈವಿಧ್ಯಮಯವಾದ ಜೀವಿಗಳ ಉಗಮವಾಗಿದೆ.

3

ವಿಕಾಸವಾದದ ಬೀಜಗಳನ್ನು ಕ್ರಿಸ್ತಪೂರ್ವ 5ನೇ ಶತಮಾನದ ಗ್ರೀಕ್ ಚಿಂತಕರಾದ ಹೆರಾಕ್ಲಿಟಸ್ ಮತ್ತು ಡೆಮಾಕ್ರಿಟಸ್‌ನ ಚಿಂತನೆಗಳಲ್ಲಿ ಕಾಣಬಹುದು. ಹೆರಾಕ್ಲಿಟಸ್ ಹೇಳುತ್ತಾನೆ–ಎಲ್ಲವೂ ಪ್ರವಾಹ–ಹರಿಯುತ್ತದೆ. ಎಲ್ಲವೂ ಬದಲಾಗುತ್ತದೆ. ಎಲ್ಲವೂ ಚಲನಶೀಲವಾದವುಗಳು. ಡೆಮಾಕ್ರಿಟಸ್ ಬದಲಾವಣೆಗಳನ್ನು ಗುರುತಿಸುತ್ತ, ಎಲ್ಲ ಬದಲಾವಣೆಗಳೂ ಸೃಷ್ಟಿಯ ಅವಶ್ಯಕತೆಗಳಿಗೆ ಅನುಸಾರವಾಗಿ ಸತತವಾಗಿ ಚಲಿಸುತ್ತಿರುವ ಪರಮಾಣುಗಳ ವೈವಿಧ್ಯಮಯವಾದ ಕೂಡಿಕೊಳ್ಳುವಿಕೆ ಮತ್ತು ಕಳಚಿಕೊಳ್ಳುವಿಕೆಯಿಂದ ಉಂಟಾಗುವಂಥವುಗಳು ಎನ್ನುತ್ತಾನೆ. ಈ ಅಣುಗಳ ಚಲನೆ ನಿರಂತರವಾಗಿದ್ದು ಅದಕ್ಕೆ ಆರಂಭವೂ ಇಲ್ಲ, ಅಂತ್ಯವೂ ಇಲ್ಲ. ಜಮೀನುದಾರೀ ಸಾಮಾಜಿಕ ವ್ಯವಸ್ಥೆಯು ನೆಲೆಗೊಳ್ಳುತ್ತಲೇ ಹೆರಾಕ್ಲಿಟಸ್ ಮತ್ತು ಡೆಮಾಕ್ರಿಟಸ್‌ರ ವಾದಗಳು ಹಿಂದಕ್ಕೆ ಸರಿಯುತ್ತ ದೈವಸೃಷ್ಟಿವಾದ ವಿಜೃಂಭಿಸಿತು. ಆದರೆ ಪುನರುತ್ಥಾನದ ನಂತರ ದೈವಸೃಷ್ಟಿವಾದ ಹಿಂಜರಿತ ಅನುಭವಿಸುತ್ತ ವಿಕಾಸವಾದಕ್ಕೆ ಮತ್ತೆ ಚಾಲನೆ ದೊರೆಯಿತು.

1809ರಲ್ಲಿ ಲ್ಯಾಮಾರ್ಕನು ಜೀವಿಗಳ ವಿಕಾಸವು ನಡೆಯುವ ರೀತಿಯನ್ನು ನಿರೂಪಿಸಲು ವಿಕಾಸವಾದಕ್ಕೆ ಸಂಬಂಧಪಟ್ಟ ಮೊಟ್ಟಮೊದಲ ಸಿದ್ಧಾಂತವನ್ನು ಮಂಡಿಸಿದನು.

ಲ್ಯಾಮಾರ್ಕ್‌ನ ಈ ಸಿದ್ಧಾಂತವು ಅಂಗಗಳು ವಿಪರೀತ ಉಪಯೋಗಕ್ಕೆ ಒಳಪಟ್ಟಲ್ಲಿ ಹೆಚ್ಚು ಸಮೃದ್ಧವಾಗಿ ಬೆಳೆಯುತ್ತ, ಸತತ ನಿರುಪಯುಕ್ತತೆಗೆ ಒಳಪಟ್ಟಲ್ಲಿ ಕ್ರಮೇಣ ನಶಿಸುತ್ತ ಕೊನೆಗೆ ಮಾಯವಾಗುತ್ತದೆಂದು ತಿಳಿಸುತ್ತದೆ. ಜೀವಿಗಳು ಈ ರೀತಿ ಬಳಕೆ_ಅವಬಳಕೆಗಳಿಂದ ಒಳಗೊಳ್ಳುವ ಬದಲಾವಣೆಗಳನ್ನು ಗಳಿಸಿಕೊಂಡ ಗುಣಲಕ್ಷಣ(Acquired Characters)ಗಳೆನ್ನುತ್ತೇವೆ. ಇಂಥ ಗಳಿಸಿಕೊಂಡ ಗುಣಲಕ್ಷಣಗಳು ಮುಂದಿನ ಪೀಳಿಗೆಗೆ ಅನುವಂಶೀಯವಾಗಿ ಸಾಗಿಸಲ್ಪಡುತ್ತವೆ. ಹೀಗೆ ಬದಲಾವಣೆಗಳನ್ನು ಒಳಗೊಳ್ಳುತ್ತ ಒಳಗೊಳ್ಳುತ್ತ ಹೋಗುವ ಮೂಲ ಜೀವಿಯು ಕೊನೆಗೆ ಒಂದು ಹೊಸ ಪ್ರಭೇಧವಾಗಿ ವಿಕಾಸಗೊಳ್ಳುತ್ತದೆ. ಆದರೆ ಪಡೆದುಕೊಂಡ ಗುಣಲಕ್ಷಣಗಳು ಅನುವಂಶೀಯವಾಗಿ ಮುಂದಿನ ಪೀಳಿಗೆಗೆ ಸಾಗಿಸಲ್ಪಡುವುದು ಸಾಧ್ಯವಿಲ್ಲದ್ದರಿಂದ ಲ್ಯಾಮಾರ್ಕನ ವಿಕಾಸ ಸಿದ್ಧಾಂತವು ಒಪ್ಪಿತವಾಗಲಿಲ್ಲ.

ಲ್ಯಾಮಾರ್ಕ್ ತನ್ನ ಸಿದ್ಧಾಂತವನ್ನು ಮಂಡಿಸಿದ ಸರಿಯಾಗಿ 50 ವರ್ಷಗಳ ನಂತರ ಬ್ರಿಟಿಷ್ ಪ್ರಕೃತಿ ವಿಜ್ಞಾನಿ ಚಾರ್ಲ್ಸ್ ಡಾರ್ವಿನ್‌ನು ಪ್ರಕೃತಿಯ ಆಯ್ಕೆಯ ತನ್ನ ಜೀವವಿಕಾಸದ ಸಿದ್ಧಾಂತವನ್ನು ಮಂಡಿಸಿದನು. ಡಾರ್ವಿನ್ 1830ರಿಂದ ಏರ್ಪಟ್ಟ ಎಂಟು ವರ್ಷಗಳ ಒಂದು ಪರ್ಯಟನದ ತಂಡದಲ್ಲಿ ಪ್ರಕೃತಿ ತಜ್ಞನಾಗಿ ಭಾಗವಹಿಸಿ ಜಗತ್ತಿನ ವಿವಿಧ ಪ್ರದೇಶಗಳಿಗೆ ಭೆಟ್ಟಿ ನೀಡಿ ಅಲ್ಲಿನ ವಾತಾವರಣದ ವೈಶಿಷ್ಟ್ಯ ಮತ್ತು ಆ ಪರಿಸರದಲ್ಲಿನ ಜೀವಿಗಳ ವೈಶಿಷ್ಟ್ಯವನ್ನು ಅಭ್ಯಸಿಸುತ್ತ ಅವೆರಡರ ನಡುವಿರುವ ಅವಿನಾ ಸಂಬಂಧವನ್ನು ಅರಿತುಕೊಂಡಿದ್ದನು. ಜೀವಿಗಳ ಅಗಾಧವಾದ ವೈವಿಧ್ಯ, ಅವು ಬೇರೆ ಬೇರೆ ಪರಿಸರದಲ್ಲಿ ತೋರುವ ಬದುಕುವ ದಾರಿಗಳ ಪರಿವರ್ತನೆಗಳು, ಪಳೆಯುಳಿಕೆಗಳ ಸೂಕ್ಷ್ಮವಾದ ಅಧ್ಯಯನ, ಜೀವಿಗಳ ದೇಹ ರಚನೆಯ ಅಧ್ಯಯನ ಇವೆಲ್ಲವುಗಳು ಡಾರ್ವಿನ್‌ನಿಗೆ ಭೂಮಿಯ ಮೇಲೆ ಜೀವವಿಕಾಸ ನಡೆದಿರುವ ಬಗ್ಗೆ ಅಗಾಧವಾದ ನಂಬಿಕೆಯನ್ನು ಹುಟ್ಟಿಸಿದವು. ಡಾರ್ವಿನ್ನನು ಸಾಕ್ಷಿಗಳನ್ನು ಮಂಡಿಸಿ ಜೀವವಿಕಾಸ ನಡೆದದ್ದನ್ನು ಸಾಬೀತುಮಾಡಿ ತೋರಿಸಿದನು. ಡಾರ್ವಿನ್‌ವರೆಗಿನ ಕಾಲಾವಧಿಯಲ್ಲಿ ಇದು ಸಾಧ್ಯವಾಗಿರಲಿಲ್ಲ.

4

ಜೀವ ಉತ್ಕ್ರಾಂತಿಯನ್ನು ಈ ಎಲ್ಲ ಜೀವಶಾಸ್ತ್ರೀಯ ಹಿನ್ನೆಲೆಯಲ್ಲಿ ಮನಗಂಡ ಡಾರ್ವಿನ್ ಈ ಉತ್ಕ್ರಾಂತಿಯ ತಂತ್ರವನ್ನು ನಿರೂಪಿಸುವಾಗ ಜೀವಶಾಸ್ತ್ರೀಯವಲ್ಲದ ಜ್ಞಾನಪರಿಕರಗಳ ಸಹಾಯ ಪಡೆದಿದ್ದಾನೆ. ಡಾರ್ವಿನ್ ಬದುಕಿದ ಕಾಲ ಬಂಡವಾಳ

ಶಾಹೀ ಯುಗ. ಲಾಭದ ಬಗೆಗಿನ ಆಸೆ ಮಾನವ ಸಮಾಜವನ್ನು ಒಡೆದು ಮಾಲೀಕ–ಕಾರ್ಮಿಕ ವರ್ಗಗಳನ್ನು ರೂಪಿಸಿಬಿಟ್ಟಿತ್ತು. ಇವೆರಡೂ ವರ್ಗಗಳು ಪರಸ್ಪರ ಕ್ರೂರವಾಗಿದ್ದವು. ಸ್ಪರ್ಧೆ ಮತ್ತು ಇನ್ನೊಬ್ಬನ ಬಗೆಗಿನ ನಿರಾರ್ದ್ರವಾದ ಭಾವನೆ ಮತ್ತು ಕ್ರೌರ್ಯಗಳು ಮಾನವನ ಸಹಜ ಸ್ವಭಾವಗಳೆನ್ನುವುದನ್ನು ಬಿಂಬಿಸುವಂತಹ ಪರಿಸ್ಥಿತಿ. ಇದಕ್ಕೆ ಹೊಂದಿಕೊಂಡು ಅದಾಗ ಮಾಲ್ಥಸ್‌ನ ಅರ್ಥಶಾಸ್ತ್ರೀಯ ಸಿದ್ಧಾಂತವೊಂದು ಮೂಡಿ ಬಂದಿತ್ತು. ಅದೆಂದರೆ–ಮಾನವ ಕುಲವನ್ನು ಸಲಹುವ ಆಹಾರಾದಿ ಪೋಷಕಗಳ ಪ್ರಮಾಣವು ಸರಳರೇಖಾಪಥದಲ್ಲಿ ಅಂದರೆ 1-2-3-4 ಈ ಕ್ರಮದಲ್ಲಿ ಹೆಚ್ಚುತ್ತ ಹೋದರೆ ಜನಸಂಖ್ಯೆಯು ವರ್ಗೀಯ ಕ್ರಮದಲ್ಲಿ ಅಂದರೆ 2-4-16-256 ಈ ಕ್ರಮದಲ್ಲಿ ಹೆಚ್ಚುತ್ತದೆ. ಡಾರ್ವಿನ್ನನಿಗೆ ಇದರಿಂದ ಜನಸಂಖ್ಯೆ ಮತ್ತು ಪೋಷಕಗಳ ಪ್ರಮಾಣಗಳ ನಡುವಿನ ಅಗಾಧವಾದ ವ್ಯತ್ಯಾಸ ತಿಳಿಯುತ್ತ ಬಂಡವಾಳಶಾಹೀ ಯುಗದ ಸ್ಪರ್ಧೆಯ ಹಿನ್ನೆಲೆ ಇನ್ನಷ್ಟು ಸ್ಪಷ್ಟವಾಯಿತು. ಡಾರ್ವಿನ್ ಆ ಕಾಲದ ಸಾಮಾಜಿಕ ಪರಿಸ್ಥಿತಿ ಒದಗಿಸಿದ ಚಿಂತನೆಗೆ ಅನುಗುಣವಾಗಿ ಜೀವವಿಕಾಸದ ತಂತ್ರವನ್ನು ನಿರೂಪಿಸುವ ಸಿದ್ಧಾಂತವನ್ನು ಮಂಡಿಸಿದನು.

ಡಾರ್ವಿನ್ನನ ಜೀವಉತ್ಕ್ರಾಂತಿ ಸಿದ್ಧಾಂತದ ಮುಖ್ಯಾಂಶಗಳ ಸಾರ ಸಂಗ್ರಹಿಸುವುದಾದರೆ—

ಜೀವಿಗಳು ವಿಪರೀತ ರತಿಯನ್ನು ತೋರಿಸುತ್ತವೆ. ಈ ಮೂಲಕ ಅಗಾಧವಾದ ಸಂತಾನೋತ್ಪತ್ತಿಯಿಂದ ಜೀವಿಗಳ ಸಂಖ್ಯೆ ವಿಪರೀತವಾಗಿ ಹೆಚ್ಚಾಗುತ್ತದೆ. ಅಡಿಗರ ಭೂಮಿಗೀತದ 'ಬಿದಿರು ಮೆಣೆಯ ಮೇಲೆ ಕುಳಿತು ಸಾಗುವ ವೇಳೆ–ಹೊರಬರಳು ; ಅವಳಿಗಿನ್ನೊಂದು ಹೆರಿಗೆ' ಸಾಲುಗಳು ಸೃಷ್ಟಿಯ ಈ ವಿಪರೀತ ರತಿಯನ್ನು ತುಂಬಾ ಚೆನ್ನಾಗಿ ವಿವರಿಸುತ್ತವೆ. ಈ ವಿಪರೀತ ಸಂತಾನೋತ್ಪತ್ತಿಯ ಪರಿಣಾಮವಾಗಿ ಜೀವಿ ಜೀವಿಗಳಲ್ಲಿ ಆಹಾರ ಮತ್ತು ಲೈಂಗಿಕಜೊತೆಗಾಗಿ ಸ್ಪರ್ಧೆ ಏರ್ಪಡುತ್ತದೆ; ಜೀವಿಗಳು ಪರಸ್ಪರ ಏರಾಟ ತೋರುತ್ತ ಬದುಕುಳಿಯಲು ಸ್ಪರ್ಧಿಸುತ್ತವೆ. ಈ ಸ್ಪರ್ಧೆಯಲ್ಲಿ ಗೆಲ್ಲಲು--ಗೆದ್ದು ಬದುಕಲು ಜೀವಿಗಳು ಹೊಸ ಹೊಸ ಬದಲಾವಣೆಗಳನ್ನು ಒಳಗೊಳ್ಳುತ್ತವೆ. ವಿವಿಧ ಬದಲಾವಣೆಗಳನ್ನು ಧರಿಸಿ ಸ್ಪರ್ಧಿಸಿದ ಜೀವಿಗಳ ಸಂತೆಯಲ್ಲಿ ಸೃಷ್ಟಿಯು ಅತ್ಯಂತ ಬಲಿಷ್ಠವಾದ ಕೆಲವನ್ನು ಆರಿಸಿ ಉಳಿಸಿಕೊಳ್ಳುತ್ತದೆ. ಅವು ಬದುಕುತ್ತವೆ. ದುರ್ಬಲವಾದ ಉಳಿದವುಗಳು ಅಳಿದು ಹೋಗುತ್ತವೆ. ಹೀಗೆ ಸಮರ್ಥ ಬದಲಾವಣೆಗಳನ್ನು ಅಳವಡಿಸಿಕೊಳ್ಳುತ್ತ ಹೋಗುವ ಜೀವಿಗಳಲ್ಲಿ ಪರಿವರ್ತನೆಗಳು ಒಟ್ಟುಗೂಡುತ್ತ ಒಟ್ಟುಗೂಡುತ್ತ ಕೊನೆಗೆ ಅವು ಮೂಲ ಜೀವಿಗಳಿಂದ ತುಂಬ ಭಿನ್ನವಾದ ಹೊಸ ಪ್ರಭೇದವಾಗಿ ಬೆಳೆಯುತ್ತವೆ.

5

ಡಾರ್ವಿನ್ನನ ವಿಕಾಸವಾದದ ನಿರೂಪಣೆಯಲ್ಲಿ ಅಂದಿನ ಸಾಮಾಜಿಕ ಸಂದರ್ಭ ಭಾಗವಹಿಸಿದ್ದಂತೆ ಮುಂದೆ ಈ ಸಿದ್ಧಾಂತವು ಸಾಮಾಜಿಕ ರಾಜಕೀಯ ಸಿದ್ಧಾಂತಗಳ ನಿರೂಪಣೆಯಲ್ಲಿ, ಮಾನವಶಾಸ್ತ್ರ, ಮಾನಸಿಕ ಶಾಸ್ತ್ರಗಳ ಬೆಳವಣಿಗೆಯಲ್ಲಿ ಅಗಾಧವಾದ ಪ್ರಭಾವವನ್ನು ಬೀರಿತು. ಡಾರ್ವಿನ್ Natural Selection and Origin of New Species ಪುಸ್ತಕದ ಮೂಲಕ ತನ್ನ ಸಿದ್ಧಾಂತವನ್ನು ಮಂಡಿಸಿದ ಒಂಭತ್ತು ವರ್ಷಗಳ ನಂತರ ಮಾರ್ಕ್ಸ್ ಸಾಮಾಜಿಕ, ಆರ್ಥಿಕ ರಾಜಕೀಯ ವಿನ್ಯಾಸಗಳ ಕುರಿತ ತನ್ನ ವಾದವನ್ನು ಮಂಡಿಸಿದನು. ಡಾರ್ವಿನ್ ವಾದವು ಅತ್ಯಂತ ಸ್ಪಷ್ಟವಾಗಿ ನಿರೂಪಿಸಿದ ಸ್ಪರ್ಧೆ ಮತ್ತು ಬದುಕುಳಿಯಲು ಹೋರಾಟ. ಈ ಅಂಶಗಳು ಮಾರ್ಕ್ಸ್‌ನು ತನ್ನ ಸಿದ್ಧಾಂತ ನಿರೂಪಿಸುವಲ್ಲಿ ಗುಣಾತ್ಮಕ ಪ್ರಭಾವ ಬೀರಿದವು. ಬಲಿಷ್ಠವಾದವು ಬದುಕುಳಿಯುತ್ತವೆನ್ನುವ ಮಾತು ಕಾರ್ಮಿಕರು, ಶೋಷಿತರು ತಮ್ಮ ದೌರ್ಬಲ್ಯವನ್ನು ಸಂಘಟನೆಯ ಮೂಲಕ ಪರಿಹರಿಸಿಕೊಳ್ಳುತ್ತ ಬಲಿಷ್ಠರಾಗ ಬೇಕೆನ್ನುವ ಸೂಚನೆ ಕೊಡುತ್ತ ಸಮತಾವಾದದ ರಾಜಕೀಯ ಸಿದ್ಧಾಂತದ ಹುಟ್ಟಿಗೆ ನೀರೆರೆಯಿತು. ಇದಲ್ಲದೆ ಫ್ರಾಯ್ಡನು ಗ್ರಹಿಸುವ ಕಾಮಕೇಂದ್ರೀಕೃತವಾದ ಮಾನವನ ಮಾನಸಿಕ ವಿನ್ಯಾಸಕ್ಕೆ ಕೂಡ ಡಾರ್ವಿನಿಸಂ ಪ್ರೇರಣೆ ನೀಡಿದೆ. ಫ್ರಾಯ್ಡನ ಈಡಿಪಸ್ ಕಾಂಪ್ಲೆಕ್ಸ್ ವಾದವು ತಂದೆ ಮಗನ ನಡುವೆ ಸ್ತ್ರೀಯ (ಹೆಂಡತಿ-ತಾಯಿ) ಪ್ರೀತಿಗಾಗಿ ಏರ್ಪಡುವ ಸ್ಪರ್ಧೆಯ ಗ್ರಹಿಕೆ ಹೊಂದಿರುವಂಥದು.

6

ಇವೆಲ್ಲವುಗಳಾಚೆಗೆ ಜೀವ ವಿಕಾಸ ತತ್ವದಿಂದ ನಾವು ವರ್ತಮಾನದಲ್ಲಿ ಪಡೆಯ ಬೇಕಾದ ಪ್ರೇರಣೆಗಳ ಬಗ್ಗೆ ಯೋಚಿಸುವುದು ತುಂಬ ಅವಶ್ಯವಾದದ್ದು. ಮುಖ್ಯ ವಾಗಿ ವಿಕಾಸವನ್ನು ಪೂರ್ಣವಾಗಿ ಒಳ್ಳಿತದರತ್ತಲಿನ ಪರಿವರ್ತನೆ ಮಾತ್ರ ಎಂದು ಗ್ರಹಿಸುವುದು ತಪ್ಪು. ವಿಕಾಸವು ನಿರಪೇಕ್ಷವಾದದ್ದು. ಅದು ಪುರೋಗಾಮಿಯೂ ಅಲ್ಲ, ಪ್ರತಿಗಾಮಿಯೂ ಅಲ್ಲ, ಅದು ಅದರಷ್ಟಕ್ಕೆ ನಡೆಯುತ್ತಲಿದೆ. ಜೀವಿಗಳ ಸಾಪೇಕ್ಷದಲ್ಲಿ ಮಾತ್ರ ಅದನ್ನು ನಾವು ಪ್ರಗತಿ ಅಥವಾ ಪ್ರತಿಗಾಮಿ ಎಂದು ಗುರುತಿಸ ಬಹುದು. ವಿಕಾಸದ ಕ್ರಮದಲ್ಲಿ ಟಿಸಿಲು ಟಿಸಿಲಾದ ಭರ್ಜರೀ ಕೊಂಬುಗಳನ್ನು ಪಡೆದ ಸಾರಂಗಕ್ಕೆ ಅವೇ ಕೊಂಬುಗಳೇ ಮಾರಕವಾದವುಗಳಾಗಿ ಅವು ಸುಲಭವಾಗಿ ಬೇಟೆ ಗಳಾಗುವಂತಾಗುತ್ತವೆ. ಹಾಗೆಯೇ ವಿಕಾಸದ ಕ್ರಮದಲ್ಲಿ ಜೀವಿಗಳು ದ್ವಂದ್ವಗಳ ಒಂದು ಅಡಕೊತ್ತಿಗೆ ಸಿಗುವ ಪರಿಯನ್ನು ನಾವು ಗಮನಿಸಬೇಕು. ಸುಲಭವಾಗಿ ಬದಲಾವಣೆ ಹೊಂದಲಾರೆನೆನ್ನುವ ಜೀವಿಗಳ ಸನಾತನವಾದ ರೀತಿಯು ಭ್ರೂಣದ

ಬೆಳವಣಿಗೆ ಮತ್ತು ಅವುಗಳ ಜೀನುಗಳ ಸರೋವರ; ಮತ್ತು ಬದಲಾವಣೆಗಳನ್ನು ಆಳವಡಿಸಿಯೇ ತೀರುತ್ತೇನೆನ್ನುವ ಪರಿಸರ ಮತ್ತು ಅದಕ್ಕೆ ಸುಲಭವಾಗಿ ಪ್ರತಿಸ್ಪಂದಿಸುವ ದೈಹಿಕ ವಿನ್ಯಾಸ ಇವೆರಡರ ನಡುವಿನ ಡಯಲೆಕ್ಟಿಕ್ಸ್‌ನ್ನು ಅರ್ಥಮಾಡಿಕೊಳ್ಳದೇ ಬದಲಾವಣೆ ಎಲ್ಲ ಒಳ್ಳೆಯದೆನ್ನುತ್ತ ಪ್ರವಾಹಕ್ಕೆ ಸಿಕ್ಕಿಕೊಳ್ಳುವ ರೀತಿ ಆತ್ಮಘಾತುಕವಾದುದು. ಇಷ್ಟರ ಮೇಲೆ ಬದಲಾವಣೆಗಳಿಗೆ ಕಡಿವಾಣ ಹಾಕುವ ಭ್ರೂಣದ ಬೆಳವಣಿಗೆಯಂತಹ ಬೀಗವು ಮಾನವ ಸಮಾಜರಚನೆಯಲ್ಲಿ ಸೇರಿಕೊಂಡಿಲ್ಲ. ಇದರಿಂದ ಜೀವಿಗಳ ಸಂದರ್ಭದಲ್ಲಿ ಏರ್ಪಡುವ ಸ್ಥಿರ–ಚರಗಳ ನಡುವಿನ ಡಯಲೆಕ್ಟಿಕ್ಸ್ ಮನುಷ್ಯನ ಸಾಮಾಜಿಕ, ಸಾಂಸ್ಕೃತಿಕ ಸಂದರ್ಭದಲ್ಲಿ ಏರ್ಪಡುವುದಿಲ್ಲ. ಡಾರ್ವಿನಿಸಂ ಅಥವಾ ಜೀವವಿಕಾಸ ಎಂದ ಕೂಡಲೇ 'ಮಂಗನಿಂದ ಮಾನವ' ಎನ್ನುವ ಸರಳ ಪರಿಕಲ್ಪನೆಯಲ್ಲಿ ಸಿಕ್ಕಿಬೀಳುವ ನಾವು ಜೀವವಿಕಾಸದ ಹಿಂದೆ ಕೆಲಸಮಾಡುತ್ತಿರುವ ಡಯಲೆಕ್ಟಿಕ್ಸ್‌ನ್ನು ಅರ್ಥಮಾಡಿಕೊಳ್ಳದೇ ಹೋಗುತ್ತೇವೆ. ಇದು ಬದಲಾವಣೆಗಾಗಿನ ನಮ್ಮ ಅಜಾಗರೂಕ ಉತ್ಸಾಹದಂತೆ ತೋರುತ್ತದೆ. ಇಂಥ ರೀತಿ ನಮ್ಮ ಇದುವರೆಗಿನ ನಮ್ಮ ಅನುಭವವನ್ನು ತೃಣವಾಗಿ ಪರಿಗಣಿಸುತ್ತದೆ. ಹೀಗಾಗದೇ ಹಳೆಯ ಅನುಭವ ಮತ್ತು ಹೊಸಬದಲಾವಣೆಗಳ ನಡುವಿನ ಸರಸ ಸಂಘರ್ಷ ಸಾಧ್ಯವಾದರೆ ವಿಕಾಸದ ದರ್ಶನದ ನಿಜವಾದ ಲಾಭ ದೊರೆತಂತೆನಿಸುತ್ತದೆ. ●

ನಾವು ಮನುಷ್ಯರ ಏಕರೂಪೀ–ಬಹುಶಃ ತಾಯಂದಿರ ಅಥವಾ ಜಾಣ ತಂದೆಯರ–ಕಸಿ ಮಡಿಗಳನ್ನು ಸೃಷ್ಟಿಸಬೇಕೆ ? ಕೂಡದು. ನನ್ನ ದೃಷ್ಟಿಯಲ್ಲಿ ವಿಭಿನ್ನತೆಯೇ ಜೀವದ ಉಸಿರಾಗಿದ್ದು, ನಮ್ಮ ಚಪಲ ಅಥವಾ ವಂಶವಾಹಿನಿಯ ಚಪಲಕ್ಕನುಗುಣವಾದ ರೂಪವೊಂದಕ್ಕಾಗಿ, ನಾವದನ್ನು ತೊರೆಯಬಾರದು. ಈ ರೀತಿಯ ಜೀವಸಂಸ್ಕರಣೆ ಒಂದು ರೂಪದ್ದೇ ಸ್ಥಿರೀಕರಣವಾಗಿದ್ದು, ಅದು ಇಡೀ ಸೃಷ್ಟಿಕ್ರಿಯೆಗೆ–ಎಲ್ಲಕ್ಕಿಂತ ಹೆಚ್ಚಾಗಿ ಮಾನವ ಸೃಷ್ಟಿಕ್ರಿಯೆಗೆ–ವಿರುದ್ಧ ನಿಂತಂತಾಗುತ್ತದೆ, ವಿಕಾಸಕ್ರಿಯೆಯ ರಹಸ್ಯ ವಿವಿಧತೆಯಲ್ಲಿ ಅಡಗಿದ್ದು ವಿಭಿನ್ನತೆಯನ್ನು ಸೃಷ್ಟಿಸುವುದೂ ಅದೇ ; ಎಲ್ಲ ಪ್ರಾಣಿಗಳಿಗಿಂತ ಮಾನವ ಹೆಚ್ಚು ಸೃಷ್ಟ್ಯಾತ್ಮಕವಾಗಿರುವುದು ಅತ ವಿವಿಧತೆಯ ಅತ್ಯಂತ ದೊಡ್ಡ ಸುವಾಹಕ ಹಾಗೂ ಅಭಿವ್ಯಕ್ತಿಯಾಗಿರುವುದರಿಂದಲೇ, ಆದುದರಿಂದ ನಮ್ಮನ್ನು ಜೈವಿಕವಾಗಿ, ಭಾವನಾತ್ಮಕವಾಗಿ ಅಥವಾ ಬೌದ್ಧಿಕವಾಗಿ ಏಕರೂಪಿ ಮಾಡುವುದೆಂದರೆ ಯಾವ ವಿಕಾಸಶಕ್ತಿ ಮನುಷ್ಯನನ್ನು ತನ್ನ ಅತ್ಯುನ್ನತ ಅಭಿವ್ಯಕ್ತಿಯನ್ನಾಗಿಸಿಕೊಂಡಿದೆಯೋ ಅದಕ್ಕೆ ದ್ರೋಹ ಬಗೆದಂತೆ.

—ಜೆ. ಬ್ರೊನೊವಸ್ಕಿ, ತನ್ನ The Ascent of Man ಪುಸ್ತಕದಲ್ಲಿ

ನಮ್ಮ ಇತಿಹಾಸ:

ಒಂದು ಸಂಸದೀಯ ಸಂವಾದ

ನಮ್ಮ ಶಾಸನಸಭೆಗಳಲ್ಲಿ ವಿದ್ವದ್ವಿಷಯಗಳ ಬಗ್ಗೆ ಚರ್ಚೆ ನಡೆಯುವುದೇ ಅಪರೂಪ. ಆಗೊಮ್ಮೆ ಈಗೊಮ್ಮೆ ಅಂತಹ ಚರ್ಚೆ ಆರಂಭವಾದರೂ ಅದು, ಆಡಳಿತ–ವಿರೋಧ ಪಕ್ಷಗಳ ನಡುವಣ ವಾದ–ವಿವಾದವಾಗಿ ಮಾರ್ಪಟ್ಟು ಕೊನೆಗೆ ಅರ್ಥಹೀನವಾಗಿ ಲೋಕಾಭಿರಾಮ ಶೈಲಿಯಲ್ಲಿ ಮುಕ್ತಾಯ ಗೊಳ್ಳುವುದು ವಾಡಿಕೆ. ಈ ಹಿನ್ನೆಲೆಯಲ್ಲಿ ಸಮಾಜವಾದಿ ಚಿಂತಕ ಡಾ॥ ರಾಮಮನೋಹರ ಲೋಹಿಯಾ ಅವರು 1966ರ ಏಪ್ರಿಲ್ 26ರಂದು ಲೋಕಸಭೆಯಲ್ಲಿ, ಇತಿಹಾಸ ಗ್ರಂಥವೊಂದರ ಬಗ್ಗೆ ಆರಂಭಿಸಿದ ಚರ್ಚೆ ಗಮನಾರ್ಹವೆನ್ನಿಸುತ್ತದೆ. ಈ ಚರ್ಚೆ ಭಾರತೀಯ ಇತಿಹಾಸ, ಸಾಮ್ರಾಜ್ಯ ಶಾಹೀ ಇತಿಹಾಸ ಪ್ರಜ್ಞೆಯ ಮೂಸೆಯಲ್ಲಿ ಹೇಗೆ ವಕ್ರವಾಗಿ ಪ್ರತಿಬಿಂಬಿತವಾಗಿದೆ ಎಂಬ ಅಂಶದ ಬಗ್ಗೆಯಲ್ಲದೆ, ನಮ್ಮ ಪ್ರತಿಷ್ಠಿತ ಬೌದ್ಧಿಕ ಸಮುದಾಯ ಕೂಡಾ ಗೊತ್ತಿದ್ದೋ ಗೊತ್ತಿಲ್ಲದೆಯೋ ಈ ಸೂಕ್ಷ್ಮ ಸಾಮ್ರಾಜ್ಯಶಾಹೀ ದಾಳಿಯ ಬಗ್ಗೆ ಎಷ್ಟು ಅಜಾಗರೂಕತೆಯಿಂದ, ಉದಾಸೀನತೆಯಿಂದ ಹಾಗೂ ಭೋಳೆಯಾಗಿ ವರ್ತಿಸುತ್ತಿದೆ ಎಂಬುದರ ಮೇಲೆಯೂ ಬೆಳಕು ಚೆಲ್ಲುತ್ತದೆ. 26–4–1966 ರಂದು ಆರಂಭವಾದ ಈ ಚರ್ಚೆಯನ್ನು, ಕನ್ನಡ ಸಾಹಿತ್ಯ ಕ್ಷೇತ್ರದಲ್ಲಿ ಈಗ ಚಾಲ್ತಿಗೆ ಬಂದಿರುವ ವಸಾಹತುಶಾಹಿ ಮನಸ್ಸನ್ನು ಚಾರಿತ್ರಿಕ ಪರಿಭಾಷೆಯ ಮೂಲಕ ಪಳಗಿಸಬಯಸುವ ವಿಮರ್ಶಾ ಪ್ರಯೋಗಗಳ ಹಿನ್ನೆಲೆಯಲ್ಲಿ, ಇಂದಿಗೂ ಪ್ರಸ್ತುತವೆಂಬ ನಂಬಿಕೆಯಿಂದ ಇಲ್ಲಿ ಸಂಪಾದಿಸಿ ಪ್ರಕಟಿಸುತ್ತಿದ್ದೇವೆ. –ಸಂ.

26–4–1966:

ರಾಮಮನೋಹರ ಲೋಹಿಯಾ: ಮಾನ್ಯ ಸಭಾಧ್ಯಕ್ಷರೇ, ಇಂದಿನ ಚರ್ಚೆ ಮಾನವ ಜನಾಂಗದ ಇತಿಹಾಸ ಬರೆಯುವ ಉದ್ದೇಶದಿಂದ ಯುನೆಸ್ಕೋ ನಿಯೋಜಿಸಿರುವ ಅಂತಾರಾಷ್ಟ್ರೀಯ ಇತಿಹಾಸಕಾರರ ಆಯೋಗ ಹಾಗೂ ಈ ಆಯೋಗ ಪ್ರಕಟಿಸಿರುವ ಪುಸ್ತಕಕ್ಕೆ ಸಂಬಂಧಿಸಿದೆ. ಇದು ಮಾನವ ಜನಾಂಗದ ಪ್ರಕ್ಷೇಪಿತ ಇತಿಹಾಸದ ಮೊದಲ ಸಂಪುಟವಾಗಿದ್ದು ಪೂರ್ವೇತಿಹಾಸ ಹಾಗೂ ನಾಗರೀಕತೆಯ ಆರಂಭ ಘಟ್ಟಗಳ ಬಗೆಗೆ ಪ್ರಸ್ತಾಪ ಮಾಡುತ್ತದೆ. ಈ ಪುಸ್ತಕವನ್ನು ಆಯೋಗ ಪ್ರಕಟಿಸಿರುವುದಾದರೂ ಈ ಪುಸ್ತಕದಲ್ಲಿ ಏನಿದೆಯೋ ಅದರ ಹೊಣೆಯನ್ನು ವಿಶ್ವ ಸಂಸ್ಥೆ, ಯುನೆಸ್ಕೋ ಹಾಗೂ ಭಾರತ ಸರ್ಕಾರ ಹೊರಬೇಕಾಗುತ್ತದೆ. ಡಾ॥ ರಾಧಾಕೃಷ್ಣನ್ ಈ ಆಯೋಗದ ಪ್ರತಿನಿಧಿ ಸದಸ್ಯರು.

ಇಂತಹ ವಿದ್ವದ್ವಿಷಯದ ಬಗ್ಗೆ ಲೋಕಸಭೆ ಚರ್ಚೆ ಮಾಡುತ್ತಿರುವುದು ಬಹುಶಃ ಇದೇ ಮೊದಲು. ಆದುದರಿಂದ ಸರ್ಕಾರ ಎಂದಿನಂತೆ ಚರ್ಚೆಯ ಕೆಲವು

ಸಣ್ಣ ಅಂಶಗಳಿಗೆ ಉತ್ತರ ಕೊಟ್ಟು ಸುಮ್ಮನಾಗದೆ ಕೆಲವು ಮೂಲಭೂತ ಅಂಶಗಳ ಬಗ್ಗೆ ಚರ್ಚೆಗೆ ಸಿದ್ಧವಾಗಬೇಕೆಂದು ನಾನು ಬಯಸುತ್ತೇನೆ.

ಇತಿಹಾಸವನ್ನು ಓದುವುದರಲ್ಲಿ ಅಥವಾ ಬರೆಯುವುದರಲ್ಲಿ ತಪ್ಪಾದಾಗ ಅದು ಅನರ್ಥಕಾರೀ ಪರಿಣಾಮಗಳಿಗೆ ಎಡೆಮಾಡಿಕೊಡುತ್ತದೆ. ಏಕೆಂದರೆ ಇತಿಹಾಸವೆಂದರೆ ನಮ್ಮ ಭೂತವನ್ನು ಅರ್ಥಮಾಡಿಕೊಳ್ಳುವ ಪ್ರಕ್ರಿಯೆಯಾಗಿದ್ದು, ಪೂರ್ಣ ಅಥವಾ ಅರ್ಧ ನಿಜಗಳು ಅಥವಾ ಸುಳ್ಳುಗಳು ನಮ್ಮ ವರ್ತಮಾನ ಹಾಗೂ ಭವಿಷ್ಯವನ್ನು ನಿರ್ಧರಿಸುವಂತಾಗಿಬಿಡುತ್ತವೆ. ನಿನ್ನೆ ಕುರಿತ ನಮ್ಮ ಗ್ರಹಿಕೆ ತಪ್ಪಾಗಿದ್ದರೆ ಇಂದು ಮತ್ತು ನಾಳೆಯನ್ನು ಕಾಣುವ ನಮ್ಮ ಕಣ್ಣುಗಳು ಮಸುಕಾಗಿಬಿಡುತ್ತವೆ. ಒಂದು ಉದಾಹರಣೆ ಕೊಡಬೇಕೆಂದರೆ, ಮಧ್ಯಯುಗೀನ ಭಾರತದಲ್ಲಿ ದೇವಾಲಯಗಳನ್ನು ಲೂಟಿಮಾಟಿ ಧ್ವಂಸಗೊಳಿಸಲಾಗಿದೆ. ಆದರೆ ಇತಿಹಾಸಕಾರನು ಮುಸ್ಲಿಮರು ಹಿಂದೂ ದೇವಾಲಯಗಳನ್ನು ಧ್ವಂಸಮಾಡಿದರು ಎಂದಷ್ಟೇ ಹೇಳಿದರೆ, ಅದು ನಿಜಸಂಗತಿ ಯಾಗಿದ್ದರೂ ಅರ್ಧ ಸತ್ಯ ಮಾತ್ರವೆನಿಸತ್ತದೆ. ಏಕೆಂದರೆ, ಅದು ಇತಿಹಾಸದ ಒಂದು ಪಾರ್ಶ್ವವನ್ನಷ್ಟೇ ತೋರಿಸಿ ಸಿಟ್ಟನ್ನು ಉತ್ಪಾದಿಸುತ್ತದೆ. ಸಮಗ್ರ ದೃಷ್ಟಿ ತಳೆಯಬೇಕಾದರೆ ನಾವು ನಮ್ಮ ಪೂರ್ವಜರು ಹೇಗೆ ಧ್ವಂಸ–ದಾಳಿಗಳನ್ನು ತಡೆಯ ಲಾಗದಷ್ಟು ಅಸಮರ್ಥರಾಗಿದ್ದರು ಎಂಬುದನ್ನೂ ಹೇಳಬೇಕಾಗುತ್ತದೆ. ಇಂತಹ ಇತಿಹಾಸ ದೃಷ್ಟಿಕೋನ ಸಿಟ್ಟಿಗೆ ಬದಲಾಗಿ ದುಃಖವನ್ನು ಹುಟ್ಟಿಸುತ್ತದೆ. ಆಗ, ಹಿಂದೆ ಹಿಂದೂಗಳೇ ಆಗಿದ್ದು ಆ ಮಧ್ಯಯುಗೀನ ಧ್ವಂಸ-ದಾಳಿಗಳಿಗೆ ಸಂಬಂಧಿಸಿಯೇ ಇರದ ಇಂದಿನ ಮುಸ್ಲಿಮರ ಬಗ್ಗೆ ನಮ್ಮ ಮನೋಭಾವ ಕೊಂಚ ವಿಶಾಲವಾಗುತ್ತದೆ.

ನಾನು ಪ್ರಸ್ತಾಪಿಸಲಿರುವ ಪ್ರಸ್ತುತ ಪುಸ್ತಕದಲ್ಲಿನ ತಪ್ಪುಗಳು, ಮೊದಲ ನೋಟಕ್ಕೆ ಬಹು ಮುಖ್ಯ ಅನಿಸದೇ ಹೋಗಬಹುದು; ಆದರೆ ಭಾರತೀಯ ಇತಿಹಾಸ ಕುರಿತಂತೆ ಇಲ್ಲಿನ ಮತ್ತು ಹೊರಗಿನ ಇತಿಹಾಸಕಾರರಿಗೆ ಇರುವ ತಪ್ಪು ಗ್ರಹಿಕೆಗಳು ಎಷ್ಟು ಘೋರ ಎಂಬುದನ್ನು ನಾನಿಲ್ಲಿ ಕೆಲವು ಉದಾಹರಣೆಗಳೊಂದಿಗೆ ವಿವರಿಸ ಬಯಸುವೆ. ಮೊದಲಾಗಿ, ಭಾರತದಲ್ಲಿ ಏನಾದರೂ, ಅದು ಇನ್ನಾವುದೋ ದೇಶದ ಅಥವಾ ನಾಗರೀಕತೆಯ ಅನುಕರಣೆಯಾಗಿರಬೇಕೆಂದೆನ್ನುಕೊಳ್ಳುವುದು. ಅದು ಚೀನಾ ಅಥವಾ ಈಜಿಪ್ಟ್ ಅಥವಾ ಉರ್ ಅಥವಾ ಚಾಲ್ಡಿಯಾ ಅಥವಾ ಮತ್ತೆಲ್ಲಿಂದಲೋ ಬಂದಿದೆ ಎನ್ನುವುದು. ಪ್ರಸ್ತುತ ಪುಸ್ತಕದಲ್ಲಿ ಲಿಯೊನಾರ್ಡ್ ವೂಲಿ ಎನ್ನುವವರು, ಸಾಂಚಿಯ ಮಹಾನ್ ಸ್ತೂಪದ ಉತ್ತರ ದ್ವಾರವನ್ನು ನೋಡಿದಾಗ ಅದು ಚೀನಾದ ವಾಸ್ತುಶಿಲ್ಪದಿಂದ ಸ್ಫೂರ್ತಿ ಪಡೆದಿದೆ ಎಂದೆನ್ನಿಸದಿರದು ಎಂದಿದ್ದಾರೆ. ಆದರೆ ವಿಚಿತ್ರ

ವೆಂದರೆ ಈ ಹೇಳಿಕೆಯನ್ನು ಪ್ರಶ್ನಿಸಿರುವವರು ಆಯೋಗದ ಭಾರತೀಯ ಸದಸ್ಯರಾಗಲೀ ಅಥವಾ ಡಾ॥ ರಾಧಾಕೃಷ್ಣನ್‌ರಾಗಲಿ ಅಲ್ಲ, ರಷ್ಯಾದ ಇತಿಹಾಸಕಾರ ಪ್ರೊ॥ ಇಲ್ಮಿನ್ ಅವರು. ಶ್ರೀ ವೂಲಿ ಅವರು ಒಂದು ಸಣ್ಣ ಟಿಪ್ಪಣಿ ಬೇರೆ ಬರೆದು 'ಇದು ಅನ್ನಿಸಿಕೆ ಅಷ್ಟೆ, ಇದಕ್ಕೆ ಪುರಾವೆಯೇನೂ ಇಲ್ಲ; ಆದರೆ ಅನ್ನಿಸಿಕೆಯನ್ನು ಇಲ್ಲಿ ದಾಖಲಿಸುವುದು ಸೂಕ್ತ' ಎಂದಿದ್ದಾರೆ.

ಇತಿಹಾಸವನ್ನು ಬರೆಯುತ್ತಿರುವುದು ಹೀಗೆ. ಸಾಂಚಿಯ ಸ್ತೂಪಕ್ಕೆ ಚೀನಾ ಸ್ಫೂರ್ತಿ ಎಂದು ಶ್ರೀ ವೂಲಿ ಹೇಳುತ್ತಾರೆ. ಅದನ್ನು ರಷ್ಯಾದ ಇತಿಹಾಸಕಾರ ಪ್ರಶ್ನಿಸುತ್ತಾರೆ. ನಂತರ ಪ್ರೊ॥ ವೂಲಿ ಪುರಾವೆ ಇಲ್ಲವಾದರೂ ದಾಖಲಿಸಲರ್ಹವಾದ ಅನ್ನಿಸಿಕೆ ಎನ್ನಿಸಿದ್ದರಿಂದಾಗಿ ತಾವು ಇದನ್ನು ಬರೆಯುತ್ತಿರುವುದಾಗಿ ತಿಳಿಸುತ್ತಾರೆ.... **(ಈ ನಡುವೆ ಇತರೆ ಸದಸ್ಯರ ಕೂಗಾಟ)**.... ಇತಿಹಾಸಕಾರರು-ಭಾರತೀಯ ಮತ್ತು ವಿದೇಶಿ ಇಬ್ಬರೂ-ತಲೆ ತುಂಬಾ ಸಗಣಿ ತುಂಬಿ ಕೊಂಡಿರುವವರು. ನಮ್ಮದೇನೂ ಇಲ್ಲವೇ ಇಲ್ಲ, ಇಲ್ಲಿ ಎಲ್ಲವೂ ಹೊರಗಿನವರ ಅನುಕರಣೆ ಅಥವಾ ಪ್ರಭಾವದಿಂದ ಆಗಿರುವಂಥದು ಎಂದು ನಾವು ನಮ್ಮ ಮಕ್ಕಳ ಮನಸ್ಸಿಗೆ ತುಂಬುತ್ತಿದ್ದೇವೆ. ಈ ಇತಿಹಾಸಕಾರರು ಏನೆಲ್ಲ ಅಸಂಗತವಾಗಿ ವಾದ ಮಾಡಬಲ್ಲರು.... ಈ ಪುಸ್ತಕದಲ್ಲಿ **'ಪಾಕಿಸ್ತಾನದ ಐದು ಸಾವಿರ ವರ್ಷಗಳು'** ಎಂಬ ಪುಸ್ತಕದ ಪ್ರಸ್ತಾಪ ಇದೆ !

ಓರ್ವ ಮಾನ್ಯ ಸದಸ್ಯರು: ಹುಚ್ಚು.

ಮತ್ತೋರ್ವ ಮಾನ್ಯ ಸದಸ್ಯರು: ಇದು ಹುಚ್ಚಲ್ಲ, ಕುಚೇಷ್ಟೆ.

ರಾಮ ಮನೋಹರ ಲೋಹಿಯಾ: ನಾನು ಇಂತಹ ಶಬ್ದಗಳನ್ನು ಬಳಸಲಾರೆ. ಆದರೆ ಇಲ್ಲಿ ನಾವು ಗಮನಿಸಬೇಕಾದ್ದೆಂದರೆ, ಪಾಕಿಸ್ತಾನಕ್ಕೆ ತಾನೊಂದು ಪುರಾತನ ಹಾಗೂ ಚಾರಿತ್ರಿಕ ದೇಶ ಎಂದು ನಂಬುವಂತೆ ಮಾಡುವ ವಿದೇಶೀ ಬರಹಗಾರರ ಹುನ್ನಾರ. ಭಾರತ-ಪಾಕಿಸ್ತಾನಗಳಿಗೂ ಹಿರಿದಾಗಿದ್ದ ಪ್ರದೇಶವೊಂದರ ನಾಗರೀಕತೆಯ ಭಾಗವಾಗಿದ್ದ ಹರಪ್ಪಾ ಮತ್ತು ಮೊಹೆಂಜೋದಾರೋಗಳನ್ನು ಪಾಕಿಸ್ತಾನಕ್ಕೆ ತಳುಕು ಹಾಕುವ ಮೂಲಕ ಅವರು ಭಾರತದ ವಿಭಜನೆಯ ಬೇರುಗಳನ್ನು ಬಲಗೊಳಿಸಬಯಸುತ್ತಾರೆ. ಇದೇನು ಇತಿಹಾಸವೋ, ಕಲೆಯೋ ಅಥವಾ ಮತ್ತೇನೋ? ಇದು ಕಳೆದ 20 ಲಕ್ಷ ವರ್ಷಗಳ ಇಂಗ್ಲೆಂಡಿನ ಅಥವಾ ಭಾರತದ ಕಳೆದ 3,000,000,000 ವರ್ಷಗಳ ಇತಿಹಾಸ ಬರೆದಂತೆ. ಯಾಕೆಂದರೆ ಇದು, ಭಾರತವೂ ಒಂದು ಭಾಗವಾಗಿರುವ ಈ ಭೂಮಿಯ ವಯಸ್ಸು !

ಈ ಇತಿಹಾಸ ಪುಸ್ತಕದಲ್ಲಿ, ಭಾರತದ ಕೋಮುವಾದಿಗಳಿಗೆ ಬಹುಶಃ ಗೊತ್ತಿಲ್ಲದ ಮತ್ತೊಂದು ಸಂಗತಿ ಇದೆ. ಋಗ್ವೇದ ಎಷ್ಟು ಹಳೆಯದು ಎಂಬ ವಾದದ ವಿವರಗಳಿಗೆ ನಾನು ಹೋಗಬಯಸುವುದಿಲ್ಲ. ಆದರೆ 3000 ವರ್ಷಗಳ ಹಿಂದೆ

ಭಾರತದಲ್ಲಿ ಹೇಳಿಕೊಳ್ಳುವಂತಹ ಕಾವ್ಯ ಸೃಷ್ಟಿಯಾಗಿರಲಿಲ್ಲ ಎಂದರೆ ನಾನು ಒಪ್ಪಲಾರೆ. ಸಂಗೀತದ ಮಟ್ಟಿಗೆ ಈ ಮಾತು ನಿಜವಿರಬಹುದು; ಈ ಪುಸ್ತಕ ಪುರಾತನ ಈಜಿಪ್ಟ್ ಹಾಗೂ ಚೀನಾಗಳ ಕಾವ್ಯದ ಪ್ರಸ್ತಾಪ ಮಾಡುತ್ತದೆ ಆದರೆ, ಯಾವುದೇ ಆಧಾರಗಳು ಲಭ್ಯವಿಲ್ಲ ಎಂಬ ಕಾರಣದಿಂದಾಗಿ ಪುರಾತನ ಭಾರತದ ಕಾವ್ಯದ ಬಗ್ಗೆ ಬರೆಯಲಾಗದು ಎನ್ನುತ್ತದೆ. ಋಗ್ವೇದದ ಬಗ್ಗೆ ಹೇಳುತ್ತಾ ಈ ಪುಸ್ತಕ ಆರ್ಯರು ಭಾರತಕ್ಕೆ ಕ್ರಿ.ಪೂ. 1500ರಲ್ಲಷ್ಟೇ ಬಂದರು ಎಂದು ತಿಳಿಸುತ್ತದೆ.

ಆರ್ಯ, ಅನಾರ್ಯ, ದ್ರಾವಿಡ ಮುಂತಾದ ಭಾರತದ ವಿಭಜನೆಯೇ ಒಂದು ಪುರಾಣ ಕತೆ. ಇದಕ್ಕಾಗಿ ಶ್ರೀ ಭಗಲಾರನ್ನು ನಾನು ದೂರುವುದಿಲ್ಲ. ಯಾಕೆಂದರೆ ಇಲ್ಲಿ ಇದೊಂದು ಆಲೋಚನಾ ಪ್ರವೃತ್ತಿಯೇ ಆಗಿಬಿಟ್ಟಿದೆ. ಆರ್ಯರು ಭಾರತಕ್ಕೆ 3500 ವರ್ಷಗಳ ಹಿಂದೆ ಬಂದರು ಮತ್ತು ಋಗ್ವೇದವನ್ನು ಬರೆಯಬಲ್ಲ ಭಾಷಾ ದಕ್ಷತೆ ಬೆಳೆಸಿಕೊಳ್ಳಲು ಅವರಿಗೆ ಸುಮಾರು 500-700 ವರ್ಷಗಳು ಬೇಕಾದವು ಎಂದು ಈ ಪುಸ್ತಕ ಹೇಳುತ್ತದೆ. ಅಂದರೆ ಈ ಪುಸ್ತಕದ ಪ್ರಕಾರ ಋಗ್ವೇದ ಬರೆಯಲ್ಪಟ್ಟದ್ದು 2800 ವರ್ಷಗಳ ಹಿಂದೆ.

ಶ್ರೀ ಎಂ. ಎಸ್. ಅಣೆ: ಇಲ್ಲ, 6000 ವರ್ಷಗಳ ಹಿಂದೆ.

ರಾಮಮನೋಹರ ಲೋಹಿಯಾ: ಅದನ್ನು ನೀವು ಹೇಳಿಕೊಳ್ಳುವುದು. ಆದರೆ ಇದನ್ನು, ಈ ಪ್ರಕಟಣೆಗೆ ಜವಾಬ್ದಾರರಾಗಿರುವ ಶ್ರೀ ಭಗಲಾ ಅಥವಾ ಡಾ॥ ರಾಧಾ ಕೃಷ್ಣನ್‌ರವರಿಗೆ ಹೇಳಬಲ್ಲಿರಾ ? ಈ ಪುಸ್ತಕ, ಋಗ್ವೇದ ಅಷ್ಟೇನೂ ಪುರಾತನವಲ್ಲ ಎಂದು ಹೇಳಿ ಋಗ್ವೇದೀಯ ಕಾವ್ಯಕ್ಕೆ ಜಾಗ ಕೊಟ್ಟಿಲ್ಲ.

ವಿವರವಾದ ಮೀಮಾಂಸೆಗೆ ನಾನು ತೊಡಗುವುದಿಲ್ಲ. ಏಕೆಂದರೆ ಋಗ್ವೇದದ ಪುರಾತನತೆಗೆ ಅನೇಕ ಇತರೆ ಆಧಾರಗಳಿವೆ. ಆದರೆ ಕೌಸಾಂಬಿ ಉತ್ಖನನದ ಪ್ರೊ॥ ಗೋವರ್ಧನರಾಯ್ ಅವರ ಮಾತುಗಳ ಕಡೆ ನಿಮ್ಮ ಗಮನ ಸೆಳೆಯಬಯಸುವೆ. ನಾನು ಅವರಿಗೊಂದು ಲೇಖನ ಬರೆಯಲು ಕೋರಿದ್ದು ಅದನ್ನು ಅವರು ನನಗೆ ಕಳುಹಿಸಿದ್ದಾರೆ. ಇದರಲ್ಲಿ ತೀರಾ ತಾಂತ್ರಿಕ ವಿಷಯಗಳಿವೆ. ವಸ್ತುಗಳ ವಯಸ್ಸನ್ನು ಕಂಡು ಹಿಡಿಯಬಲ್ಲ ರೇಡಿಯೋ-ಕಾರ್ಬನ್ ಪ್ರಕ್ರಿಯೆ ಎಂಬ ಹೊಸ ತಂತ್ರವನ್ನೀಗ ರೂಪಿಸಲಾಗಿದ್ದು, ಇದು ಕೌಸಾಂಬಿ ಉತ್ಖನನದ ಕಾಲದಲ್ಲಿ ಲಭ್ಯವಿರಲಿಲ್ಲ. ಈಗ ಈ ತಂತ್ರವನ್ನು ಕುಂಬಾರಿ ಮಡಕೆಗಳ ಮೇಲೆ ಪ್ರಯೋಗಿಸಿದ್ದು, ಅವುಗಳ ಕಾಲವನ್ನು ಕ್ರಿ.ಪೂ. 2035ರಿಂದ ಕ್ರಿ.ಶ. 640ರ ವರೆಗೆ ಎಂದು ಗುರುತಿಸಲಾಗಿದೆ. ಈ ಉತ್ಖನನಗಳು ವಿದೇಶೀ ವಿದ್ವಾಂಸರ ಮೇಲೆ ಯಾವ ಪ್ರಭಾವವನ್ನೂ ಬೀರಿದಂತಿಲ್ಲ

ಹಾಗೂ ದೇಶೀಯ ವಿದ್ವಾಂಸರೂ ಇದಕ್ಕೆ ಹೆಚ್ಚು ಮಹತ್ವ ಕೊಟ್ಟಿಲ್ಲ. ನೀವು ಇಷ್ಟ ಪಟ್ಟರೆ ನಾನು ಈ ಟಿಪ್ಪಣಿಯನ್ನು ನಿಮಗೆ ಕಳಿಸುವೆ. ನೀವು ಅದನ್ನು ಸದನದ ಮುಂದಿಟ್ಟು, ವಿಶ್ವಸಂಸ್ಥೆಯೊಂದಿಗೆ ಮಾತುಕತೆ ಆರಂಭಿಸಲು ಸರ್ಕಾರಕ್ಕೆ ನೆರವಾಗ ಬಹುದಾಗಿದೆ.

ಸಭಾಧ್ಯಕ್ಷರು: ನೀವು ಇನ್ನೊಂದು ನಿಮಿಷದಲ್ಲಿ ಮುಗಿಸಬೇಕು.

ರಾಮಮನೋಹರ ಲೋಹಿಯಾ: ಮುಗಿಸಲು ನನಗೆ ಇನ್ನೈದು ನಿಮಿಷಗಳು ಬೇಕಾಗಬಹುದು. ಬೇಗ ಮುಗಿಸಬಯಸುವೆ. ಹರಪ್ಪ ನಾಗರೀಕತೆಯ ಬಗ್ಗೆ ಈ ಪುಸ್ತಕ ಹೇಳುವುದನ್ನು ಕೇಳಿ: 'ಬಲೂಚಿ ಗಿರಿಪರ್ವತ ಪ್ರದೇಶದ ದಾಳಿಕೋರರಿಂದ ನಗರಗಳನ್ನು ರಕ್ಷಿಸಲು ಕೋಟೆಗಳನ್ನು ಇಷ್ಟೊಂದು ಬಲಪಡಿಸುವ ಅಗತ್ಯವಿರಲಿಲ್ಲ; ಬಹುಶಃ ಸುತ್ತಲಿನ ಗ್ರಾಮಾಂತರ ಜನರನ್ನು ನಿವಾರಿಸಿಕೊಳ್ಳುವ ಉದ್ದೇಶವಿರ ಬಹುದು. ಅಂದರೆ, ಆಳುವವರು ಹಾಗೂ ಪ್ರಜೆಗಳು ಬೇರೆ ಬೇರೆ ಮೂಲದವ ರಾಗಿದ್ದು, ಅಲ್ಲಿನ ಮೂಲನಿವಾಸಿಗಳನ್ನು ಗುಲಾಮಗಿರಿಗೆ ಈಡುಮಾಡಲಾಗಿತ್ತು ಎಂದು ಊಹಿಸಬಹುದು'.

ಇದು ಗ್ರಂಥಕರ್ತ ಹೇಳುವ ಮಾತುಗಳು. ಇದರ ವಿರುದ್ಧ, ತಮ್ಮ ದೇಶ ದೊಳಗೇ ರಷ್ಯಾರರ ಬಗ್ಗೆ ಗಟ್ಟಿಯಾಗಿ ಮಾತಾಡಲಾಗದ ಸೋವಿಯೆತ್ ಇತಿಹಾಸ ಕಾರರು ಎತ್ತಿರುವ ವಿವಾದಕ್ಕೆ ನಾನು ಹೆಚ್ಚೇನೂ ಸೇರಿಸಬಯಸುವುದಿಲ್ಲ. ಆದರೂ, ಪುರಾತನ ಭಾರತೀಯ ಇತಿಹಾಸ ಕುರಿತಂತೆ ಪಾಶ್ಚಿಮಾತ್ಯ, ನಿರ್ದಿಷ್ಟವಾಗಿ ಬ್ರಿಟಿಷ್ ಇತಿಹಾಸಕಾರರಿಗಿಂತ ಹೆಚ್ಚಿನ ಮಟ್ಟದ ಅರಿವು ತೋರ್ಪಡಿಸಿರುವ ಇವರಿಗೆ ನಾನು ತಲೆಬಾಗಿ ವಂದಿಸುವೆ.

'ಆಳುವ ವರ್ಗ ವಿದೇಶೀ ಮೂಲದ್ದು ಎಂಬುದಕ್ಕೆ ಯಾವುದೇ ನಿರ್ಣಾಯಕ ಪುರಾವೆ ದೊರೆತಿಲ್ಲವೆಂದು ಪ್ರೊ॥ ಐ.ಎಂ. ದ್ಯಿಕೋನೋವ್ ಹಾಗೂ ಪ್ರೊ॥ ಜಿ.ಎಫ್. ಇಲ್ಯಿನ್ ಹೇಳುತ್ತಾ, ಮಧ್ಯಯುಗದಲ್ಲಿನ ಜರ್ಮನಿಯ ವರ್ಗೀಯ ಕೋಟೆಗಳಂತೆ ಇವನ್ನು ಕಟ್ಟಿರಬಹುದು ಎನ್ನುತ್ತಾರೆ'. ಆದರೆ ಸರ್ ಲಿಯೋನಾರ್ಡ್ ವೂಲಿ ವಿದೇಶೀ ಮೂಲವನ್ನು ಸಮರ್ಥಿಸಲು ಕೋಟೆಗಳೊಳಗೆ ಹಳೆಯ ಸಂಸ್ಕೃತಿಯ ಪಾಳಿನ ಮೇಲೆ ಹೊಸ ಸಂಸ್ಕೃತಿಯೊಂದು ಚಾಲೂ ಇರುವುದು ಕಾಣುತ್ತದೆಂದು ವಾದಿಸಿದ್ದಾರೆ. ಇಂತಹುದೇ ಅಧ್ಯಯನಗಳನ್ನು ಜರ್ಮನಿ, ರಷ್ಯಾ ಅಥವಾ ಇಂಗ್ಲೆಂಡ್‌ಗಳಿಗೆ ಸಂಬಂಧಿಸಿದಂತೆ ಮಾಡಿದರೆ ಅಲ್ಲಿಯೂ, ಒಂದು ಸಂಸ್ಕೃತಿಯ ವಿವಿಧ ಶಾಖೆಗಳು ಒಂದರೊಡನೊಂದು ಸೆಣೆಸಿ ಅವುಗಳಲ್ಲೊಂದು ಮಿಕ್ಕೆಲ್ಲವನ್ನೂ ನಾಶಮಾಡಿ ಬೆಳೆಯುವ ಪ್ರವೃತ್ತಿಯನ್ನು ಯಾರಾದರೂ ಕಾಣಬಹುದು. ಸಮಾಜದಲ್ಲಿ ಹೊಸ ಪ್ರವೃತ್ತಿಗಳು

ವಿಕಾಸಗೊಳ್ಳುವುದು ಹೀಗೆಯೇ. ಆದರೆ ಈ ಇತಿಹಾಸಕಾರರು ಭಾರತೀಯ ಸಮಾಜದ ಒಡಲಿಂದ ಹೊಸ ಪ್ರವೃತ್ತಿಗಳು ಮೂಡುವ ಸಾಧ್ಯತೆಯನ್ನೇ ತಿರಸ್ಕರಿಸುತ್ತಾರೆ. ಅವರು ಭಾರತೀಯ ಇತಿಹಾಸಕಾರರ, ಅತ್ಯಂತ ದೊಡ್ಡವರನ್ನೂ ಬಿಡದೆ, ಮನಸ್ಸನ್ನು ಎಷ್ಟು ಅಚ್ಚುಕಟ್ಟಾಗಿ ಆಳುತ್ತಾರೆಂದರೆ, ಭಾರತೀಯ ಇತಿಹಾಸಕಾರರು ಕೂಡಾ ಭಾರತೀಯ ಸಂಸ್ಕೃತಿಯ ನವನವೀಕರಣ ವಿದೇಶೀಯನ ದೈಹಿಕ ಸಂಪರ್ಕವಿಲ್ಲದೆ ಅಸಾಧ್ಯವಾಗಿತ್ತು ಎಂದು ನಂಬುತ್ತಾರೆ. ಈ ವಿದೇಶೀಯ ಆಫ್ಘನ್ ಅಥವಾ ಮೊಘಲ್ ಅಥವಾ ಬ್ರಿಟಿಷ್ ಅಥವಾ ಇನ್ಯಾವನೋ ಆಗಿರಬಹುದು.

ಇದು ನಮ್ಮ ಭಾಷಣಗಳನ್ನೂ ಭ್ರಷ್ಟಗೊಳಿಸಿದೆ. ಆಗಾಗ್ಗೆ ನಾವು, ಭಾರತ ತನ್ನ ಆಕ್ರಮಣಕಾರರನ್ನು ತನ್ನೊಳಕ್ಕೆ ಸಂಯೋಜಿಸಿಕೊಳ್ಳುವುದರಲ್ಲಿ ಅನನ್ಯವಾಗಿದೆ ಎಂಬ ಮಾತನ್ನು ಕೇಳುತ್ತೇವೆ. ನಮ್ಮದು ನಿರಂತರ ಸಂಶ್ಲೇಷಣೆಯಲ್ಲಿ ತೊಡಗಿರುವ, ಏಕತೆ ಮತ್ತು ವಿವಿಧತೆಗಳ ದೇಶ ಎಂಬ ಭಾಷಣಗಳನ್ನು ಬಿಗಿಯುತ್ತಿರುತ್ತೇವೆ. ಇದು ಬರೀ ಬೊಗಳೆ ಮಾತ್ರವಲ್ಲ, ಇಂತಹ ಮಾತುಗಳು ಮನಸ್ಸನ್ನು ವಿಷಮಯ ಮಾಡುತ್ತವೆ ಮತ್ತು ಇಚ್ಛಾಶಕ್ತಿಯನ್ನು ಕುಂದಿಸುತ್ತವೆ. ಇಂತಹ ನಂಬಿಕೆ ಇಂದಿನ ಆಕ್ರಮಣಗಳನ್ನು ತಡೆಯದಂತೆ ಮನಸ್ಸನ್ನು ಸಿದ್ಧಗೊಳಿಸುತ್ತದೆ. ನಾವು ವಿಶಾಲ ಮನಸ್ಸಿನವರು ಹಾಗೂ ಪ್ರಗತಿಪರರು, ಹೀಗಾಗಿ ಆಕ್ರಮಣಕ್ಕೊಳಗಾಗುವುದರಿಂದ ನಾವು ಕಳೆದುಕೊಳ್ಳುವುದಾದರೂ ಏನು ? ಅಂತಿಮವಾಗಿ ನಮ್ಮ ಸಂಸ್ಕೃತಿಯಲ್ಲಿನ ಸಂಶ್ಲೇಷಣಾಶಕ್ತಿ ವಿದೇಶೀ ವಿಜೇತನನ್ನು ನಮ್ಮದೇ ಅಂಗಭಾಗವನ್ನಾಗಿ ಮಾರ್ಪಡಿಸಿಬಿಡುತ್ತದಲ್ಲ. ಈ ತರಹದ ಆಲೋಚನೆಯನ್ನು ನಾವು ಈ ಕೂಡಲೇ ನಿಲ್ಲಿಸಬೇಕಾಗಿದೆ. ಸಂಯೋಜನೆ ಯಾವಾಗಲೂ ಎರಡು ರೀತಿಯದ್ದಾಗಿರುತ್ತದೆ–ಗುಲಾಮಿಕೆಯದು ಅಥವಾ ಯಜಮಾನಿಕೆಯದು. ಕಳೆದೊಂದು ಸಾವಿರ ವರ್ಷಗಳ ಭಾರತದ ಇತಿಹಾಸ ಮೊದಲನೆ ರೀತಿಯ ಸಂಯೋಜನೆಯನ್ನಷ್ಟೇ ನಮಗೆ ಕಲಿಸಿರುವುದು. ವಿದೇಶೀ ಇತಿಹಾಸಕಾರರನ್ನಷ್ಟೇ ದೂಷಿಸಿ ಫಲವಿಲ್ಲ. ಭಾರತೀಯ ಇತಿಹಾಸಕಾರರು ಕೂಡ ಇದೇ ಕೊಚ್ಚೆಯಲ್ಲಿ ಹೊರಳಾಡುತ್ತಿದ್ದಾರೆ. ಇತಿಹಾಸ ಅಧ್ಯಯನದ ನಮ್ಮ ಎರಡು ಚಾವಡಿಗಳೂ–ಒಂದು ಡಾ॥ ತಾರಾಚಂದರದ್ದು, ಇನ್ನೊಂದು ಡಾ॥ ಮಜುಂದಾರರದ್ದು–ವಿವಿಧತೆಯಲ್ಲಿ ಏಕತೆ ಹಾಗೂ ಸಂಯೋಜನೆಯ ಪರಿಕಲ್ಪನೆಗೆ ಸೇರಿದವುಗಳೇ ಆಗಿವೆ. ಅವರೆಲ್ಲರ ಗಮನ ಭಾರತ ಸಾರತಃ ಏನು ಎಂಬುದನ್ನು ಅರಿಯುವ ದಿಕ್ಕಿನಲ್ಲಿ ಹರಿಯದೆ ವಿವಿಧತೆಯಲ್ಲಿ ಚದುರಿ ಹೋಗಿದೆ.

ಹೊಸ ಸಾಂಸ್ಕೃತಿಕ ಒಲವುಗಳಿಗೆ ರಾಜಾರಾಂ ಮೋಹನರಾಯ್ ಅಥವಾ ಮಾನ್‌ಸಿಂಗ್ ಅಥವಾ ಘಜ್ನಿ ಅಥವಾ ಘೋರಿ ಕಾರಣರಾದರು ಎನ್ನುತ್ತಾರೆ. ಆದರೆ ಇಂತಹ ನವೀಕರಣಗಳು ಆ ನಂತರದ ವಿದೇಶೀ ದಾಳಿಯನ್ನು ಕಿಂಚಿತ್ತಾದರೂ

ತಡೆಯಲಾರದವು. ಆದುದರಿಂದ ಭಾರತ ಸರ್ಕಾರ ಈ ಸಮಸ್ಯೆಗಳನ್ನು ತುಂಬ ಗಂಭೀರವಾಗಿ ಪರಿಗಣಿಸಬೇಕಾಗಿದೆ. ಇಂದು ಅರ್ಧ ತಾಸಿನ ಚರ್ಚೆ ಮಾತ್ರ ಇದೆ. ಆದರೆ ಈ ಬಗ್ಗೆ ಎರಡು ಮೂರು ದಿನಗಳಾದರೂ ಚರ್ಚೆಯಾಗಬೇಕು. ಯಾಕೆಂದರೆ, ನಾಗಾಗಳ, ಮಿಜೊಗಳ, ಕಾಶ್ಮೀರದ, ಆದಿವಾಸಿಗಳ ಹಾಗೂ ಇಂತಹುದೇ ಹಲವಾರು ಸಮಸ್ಯೆಗಳ ಅಂತರ್ಯದಲ್ಲಿ ನಮ್ಮ ಚರಿತ್ರೆಯನ್ನು ಈ ರೀತಿ ತಪ್ಪಾಗಿ ನಿರೂಪಿಸುವ, ಜನರನ್ನು ಆರ್ಯರು, ಅನಾರ್ಯರು, ದ್ರಾವಿಡರು ಹಾಗೂ ಮಂಗೋಲರೆಂದು ವಿಭಜಿಸುವ ವಿಷವಿದೆ. ಈ ಇಡೀ ಸಿದ್ಧಾಂತಶಿಲ್ಪವನ್ನು ಭಾಷಿಕ ಅಂತರಗಳ ದುರ್ಬಲ ಆಧಾರದ ಮೇಲೆ ಕಟ್ಟಲಾಗಿದೆ.

ಇದೆಲ್ಲದರ ಪರಿಣಾಮ ನಮ್ಮೆದುರಿಗೇ ಇದೆ. ಇಂತಹ ಬರಹಗಳನ್ನು ಜಾಗತಿಕ ಸಂಸ್ಥೆಯೊಂದು ಪ್ರಾಯೋಜಿಸಿದೆ. ಶ್ರೀ ಛಗಲಾ ಉತ್ತರಕೊಡಲು ಪ್ರಯತ್ನಿಸದಿರಲಿ.

ಶ್ರೀ ಸರಾಫ್: ಮಾನ್ಯ ಸದಸ್ಯರು ಮಂತ್ರಿಗಳ ಉತ್ತರವನ್ನು ಆಲಿಸಬೇಕು.

ರಾಮಮನೋಹರ ಲೋಹಿಯಾ: ನನಗೆಂದೇ ಉತ್ತರ ಬೇಕಿಲ್ಲ. ಅವರು ಭಾರತದಲ್ಲಿನ ಇತಿಹಾಸ ಹಾಗೂ ಗಣಿತಶಾಸ್ತ್ರದ ಅಧ್ಯಯನದ ಬಗ್ಗೆ ಏನಾದರೂ ಮಾಡಬೇಕೆಂದು ಬಯಸುವೆ. ಇಂದಿನ ಭಾರತದ ಪ್ರಗತಿ ಅಥವಾ ಅವನತಿ ಈ ಎರಡು ಬಹುಮುಖ್ಯ ಶಾಸ್ತ್ರಗಳ ಅಧ್ಯಯನವನ್ನವಲಂಬಿಸಿದೆ. ಚರಿತ್ರೆ ಎಂದರೆ ಈಗಾಗಲೇ ನಾನು ಸೂಚಿಸಿರುವಂತೆ, ನಮ್ಮ ಭೂತವನ್ನು ಗ್ರಹಿಸುವುದು. ಭೂತ ಕುರಿತ ನಮ್ಮ ಗ್ರಹಿಕೆ ತಪ್ಪುಗಳಿಂದ ಕೂಡಿದೆ. ನಮ್ಮ ಮಕ್ಕಳಿಗೆ ಇದನ್ನೇ ಉಣಿಸಿದರೆ ದೇಶ ಸುಖ ಸಮೃದ್ಧಿಗಳನ್ನು ಕಾಣಲಾರದು. ಗಣಿತ ಇಂದಿನ ಎಲ್ಲ ವೈಜ್ಞಾನಿಕ ಬೆಳವಣಿಗೆಗೆ ಆಧಾರ. ಅದು ಮನುಷ್ಯನನ್ನು–ರಷ್ಯನರು ಹಾಗೂ ಅಮೆರಿಕನರನ್ನು–ಚಂದ್ರನಿಗೆ ಕೊಂಡೊಯ್ಯಬಲ್ಲುದು. ಇತಿಹಾಸ ಹಾಗೂ ಗಣಿತ–ಈ ಎರಡೂ ನಮ್ಮ ವಿಶ್ವವಿದ್ಯಾಲಯಗಳಲ್ಲಿ ಸತ್ತೇ ಹೋಗಿವೆ. ಈ ಕ್ಷೇತ್ರಗಳಲ್ಲಿ ಸುಧಾರಣೆಯಾಗಬೇಕೆಂದು ನಾನು ಕೋರುವೆ.

ಶಿಕ್ಷಣ ಮಂತ್ರಿಗಳು (ಶ್ರೀ ಎಂ.ಸಿ. ಛಗಲಾ): ಸಭಾಧ್ಯಕ್ಷರೇ, ರಾಜಕೀಯ ಸಮರದ ಏಳು ಬೀಳುಗಳ ನಡುವೆ ಇತಿಹಾಸದ ಪ್ರಶ್ನೆ ಕುರಿತು ಚರ್ಚೆ ಮಾಡುವ ಮೂಲಕ ನಾವೀಗ ತಾತ್ವಿಕ ಜಿಜ್ಞಾಸೆಯಲ್ಲಿ ಆಸಕ್ತಿ ತೋರುತ್ತಿರುವುದು ನಿಜವಾಗಿಯೂ ತುಂಬ ಮುದ ಕೊಡುವ ವಿಚಾರ. ಈ ಪ್ರಶ್ನೆಯನ್ನು ಎತ್ತಿದ ಡಾ॥ ಲೋಹಿಯಾ ಅವರಿಗೆ ನಾನು ತುಂಬ ಋಣಿಯಾಗಿರುವೆ. ಏಕೆಂದರೆ ಆಗಾಗ್ಗೆಯಾದರೂ ನಾವು ಈ ರಾಜಕೀಯ ಮೇಲಾಟಗಳನ್ನು ಮೀರಿ ನಿಂತು, ಇತಿಹಾಸ, ಸಂಸ್ಕೃತಿ ಹಾಗೂ ಕಲೆಗಳಂತಹ ತುಂಬಾ ಮುಖ್ಯವಾದ ವಿಷಯಗಳ ಬಗ್ಗೆ ಆಲೋಚಿಸುವುದು ತುಂಬ ಅಗತ್ಯ.

ಮೇ–ಜೂನ್ ೧೯೭೦/೭೧

ಡಾ॥ ಲೋಹಿಯಾ ಈ ಪ್ರಶ್ನೆ ಕೇಳಿದ್ದಾರೆ: ಇತಿಹಾಸವೆಂದರೇನು? ಇದೊಂದು ಮೋಹಕ ಪ್ರಶ್ನೆಯಾಗಿದ್ದು, ಇತಿಹಾಸದಲ್ಲಿ ಆಸಕ್ತಿ ಇರುವ ಯಾರಾದರೂ ಇದಕ್ಕೆ ಉತ್ತರ ಕೊಡಬಯಸುತ್ತಾರೆ. ಇತಿಹಾಸವೆಂದರೆ ಭೂತವನ್ನು ಪುನರ್ಕಲ್ಪಿಸುವುದು, ಆದರೆ ಅದು ಪುನರ್ಕಲ್ಪಿಸುವುದಷ್ಟೇ ಅಲ್ಲ. ಇತಿಹಾಸಕಾರ ಭೂತದ ನಿಜ ಸಂಗತಿಗಳನ್ನು ಬರೆಯುವುದಷ್ಟನ್ನೇ ಮಾಡುವುದಿಲ್ಲ. ಇತಿಹಾಸಕಾರ ಭೂತಕಾಲದ ಮೌಲ್ಯೀಕರಣ ಕೂಡಾ ಮಾಡುತ್ತಾನೆ. ಆತ ಭೂತವನ್ನು ಅರ್ಥೈಸುತ್ತಾನೆ. ಭೂತವನ್ನು ಕುರಿತು ತೀರ್ಪು ನೀಡುತ್ತಾನೆ. ನಿಜ ಸಂಗತಿಗಳನ್ನು ಹಾಗೂ ದಿನಾಂಕಗಳನ್ನು ದಾಖಲಿಸುವಲ್ಲಿ ಕೂಡಾ ಆತ ತನ್ನ ಆಯ್ಕೆಯನ್ನು ಪ್ರದರ್ಶಿಸುತ್ತಾನೆ. ಆತ ಕೆಲವು ನಿಜಸಂಗತಿಗಳನ್ನು ದಾಖಲಿಸದೆಯೇ ಇರಬಹುದು. ಹೀಗಾಗಿ ಇತಿಹಾಸಕಾರನ ಪಾತ್ರ ಬಹು ಮುಖ್ಯವಾದದ್ದು. ಇತಿಹಾಸವನ್ನು ಭೂತ ಸಂಗತಿಗಳ ಯಾದಿ ಮಾತ್ರವೆಂದು ತಿಳಿಯುವುದು ತಪ್ಪು. ಇತಿಹಾಸಕಾರ ಎಷ್ಟು ದೊಡ್ಡವನೋ ಆತನ ವ್ಯಾಖ್ಯಾನ ಸಹ ಅಷ್ಟು ದೊಡ್ಡದಾಗಿರುತ್ತದೆ.

ಈ ವ್ಯಾಖ್ಯಾನ ಯಾವಾಗಲೂ ಭಿನ್ನವಾಗಿರುತ್ತವೆ ಎಂಬುದನ್ನು ಡಾ॥ ಲೋಹಿಯಾ ಅವರಿಗೆ ನಾನು ತಿಳಿಸಬಹುದೇ ? ಒಂದೇ ಸಂಗತಿಗಳನ್ನಿಟ್ಟುಕೊಂಡು ಓರ್ವ ಇತಿಹಾಸಕಾರ ಒಂದು ರೀತಿಯಲ್ಲಿ ಅರ್ಥೈಸಿದರೆ ಇನ್ನೋರ್ವ ಇತಿಹಾಸಕಾರ ಇನ್ನೊಂದು ರೀತಿಯಲ್ಲಿ ಅರ್ಥೈಸಬಹುದು. ಬಹಳಷ್ಟು ಸಲ ಈ ವ್ಯಾಖ್ಯಾನ ನಮಗೆ ಒಪ್ಪಿಗೆಯಾಗದಿರಬಹುದು; ಆದರೆ ನಾನು ಹೇಳಿದಂತೆ, ಆತ ತನ್ನ ವೃತ್ತಿಗೆ ಪ್ರಾಮಾಣಿಕನಾಗಿದ್ದರೆ ಸಂಗತಿಗಳನ್ನು ತನ್ನದೇ ಬೆಳಕಿನಲ್ಲಿ ಅರ್ಥೈಸುವುದು ಆತನ ಹಕ್ಕು.

ಇದನ್ನು ಹೇಳಿ ನಾನು ಎಲ್ಲಕ್ಕಿಂತ ಮೊದಲು, ನನ್ನ ಮಾನ್ಯ ಗೆಳೆಯ ಡಾ॥ ಲೋಹಿಯಾ ಅವರ ಮನಸ್ಸಿನಲ್ಲಿರುವ ತಪ್ಪು ಗ್ರಹಿಕೆಯನ್ನು ನಿವಾರಿಸಬಹುದೇ ? History of Mankind : Cultural and Scientific Development ಈ ಇತಿಹಾಸ ಗ್ರಂಥದ ಜವಾಬ್ದಾರಿಯನ್ನು ಮೊದಲಾಗಿ ವಿಶ್ವಸಂಸ್ಥೆ, ಎರಡನೆಯದಾಗಿ ಯುನೆಸ್ಕೋ ಮತ್ತು ಮೂರನೆಯದಾಗಿ ಭಾರತ ಸರ್ಕಾರ ಹೊರಬೇಕಾಗಿದೆ ಎಂದು ಅಭಿಪ್ರಾಯಪಟ್ಟಿದ್ದಾರೆ. ಇದು ಇಡಿಯಾಗಿ ತಪ್ಪಾದ ಹೇಳಿಕೆ. ಏಕೆಂದು ನಾನು ವಿವರಿಸುವೆ.

ಏನಾಯಿತೆಂದರೆ, ಯುನೆಸ್ಕೋ ತನ್ನ ಪ್ರಕಾರ ಜಗತ್ತಿನ ಅತ್ಯಂತ ಗಣ್ಯರೆಂದೆನಿಸಿಕೊಂಡ ಇತಿಹಾಸಕಾರರ ಆಯೋಗವೊಂದನ್ನು ನೇಮಿಸಿತು. ಅಲ್ಲದೆ ಈ ಇತಿಹಾಸದ ಬರವಣಿಗೆಗೆ ಯುನೆಸ್ಕೋ ಅಲ್ಲ, ಆ ಅಂತಾರಾಷ್ಟ್ರೀಯ ಆಯೋಗವೇ ಹೊಣೆಯೆಂಬುದೂ ಸ್ಪಷ್ಟ- ಯುನೆಸ್ಕೋದ ಮಹಾನಿರ್ದೇಶಕರು ಈ ಸಂಪುಟದ ಮುನ್ನುಡಿ

ಯಲ್ಲಿ ಹೇಳಿರುವ ಮಾತುಗಳನ್ನಾಧರಿಸಿ ನಾನು ಈ ಮಾತುಗಳನ್ನಾಡುತ್ತಿದ್ದೇನೆ ಅಲ್ಲಿ ಹೀಗಿದೆ: 'ಈ ಇತಿಹಾಸದ ಗ್ರಂಥಕಾರ ಯುನೆಸ್ಕೋ ಅಲ್ಲ; 1950ರಿಂದಲೂ ಈ ಸಾಹಸವನ್ನು ಸಂಪೂರ್ಣ ಬೌದ್ಧಿಕ ಸ್ವಾತಂತ್ರ್ಯದೊಂದಿಗೆ ನಿರ್ದೇಶಿಸುತ್ತಿರುವುದು ಅಂತಾರಾಷ್ಟ್ರೀಯ ಆಯೋಗ'.

ಶ್ರೀ ಶಿವಮೂರ್ತಿಸ್ವಾಮಿ (ಕೊಪ್ಪಳ): ಈ ಅಂತಾರಾಷ್ಟ್ರೀಯ ಆಯೋಗವನ್ನು ನೇಮಿಸಿದುದರ ಹಿಂದಿರುವ ಅಧಿಕಾರ ಯಾವುದು ?

ಶ್ರೀ ಎಂ. ಸಿ. ಛಗಲಾ: ಯುನೆಸ್ಕೋ ಯಾವುದೇ ಆಯೋಗವನ್ನು ನೇಮಿಸ ಬಹುದು. ಅವರು ಹಲವಾರು ಆಯೋಗಗಳನ್ನು ನೇಮಿಸುತ್ತಾರೆ.

ರಾಮಮನೋಹರ ಲೋಹಿಯಾ: ಅವರು ಎಂದರೆ ಯಾರು ? ಆಯೋಗವನ್ನು ನೇಮಿಸಿದವರ್ಯಾರು ?

ಶ್ರೀ ಎಂ. ಸಿ. ಛಗಲಾ: ಮುನ್ನುಡಿ ಹೀಗೆ ಮುಂದುವರೆಯುತ್ತದೆ: 'ಈ ಕೃತಿಯ ಸಂಪೂರ್ಣ ಗೌರವ ಸಲ್ಲಬೇಕಾದ್ದು ಆಯೋಗಕ್ಕೆ, ಆಯೋಗಕ್ಕೆ ಮಾತ್ರ. ತನ್ನ ವೈಜ್ಞಾನಿಕ ಕೆಲಸಕಾರ್ಯಗಳ ಜವಾಬ್ದಾರಿ ಕೂಡಾ ಇದರದ್ದೇ'. ಹೀಗಾಗಿ ಗೌರವ, ಅಗೌರವಕ್ಕೆ ಅರ್ಹವೆನಿಸಿದರೆ ಅಗೌರವ ಕೂಡಾ, ಸಲ್ಲಬೇಕಾದ್ದು ಇಡಿಯಾಗಿ ಆಯೋಗಕ್ಕೆ. ಅಷ್ಟೇ ಅಲ್ಲ, ಈ ಗ್ರಂಥದ ಮೊದಲ ಸಂಪುಟದ ಮುನ್ನುಡಿಯಲ್ಲಿ ಈ ಆಯೋಗದ ಅಧ್ಯಕ್ಷರಾದ ಪ್ರೊ॥ ಕಾರ್ನೈರೋ, ಗ್ರಂಥದ ಪೂರ್ಣ ಪಾಠದ ಹೊಣೆ ಗ್ರಂಥಕರ್ತ–ಸಂಪಾದಕರದ್ದೇ ಎಂಬ ನಿಲುವು ತಳೆದಿದ್ದಾರೆ.

ಏನಾಯಿತೆಂದು ನಿಮಗೆ ತಿಳಿಸುವೆ. ಈ ಆಯೋಗದಲ್ಲಿ ಮೂವರು ಭಾರತೀಯರಿದ್ದರು. ಡಾ॥ ಭಾಭಾ, ಮಜುಂದಾರ್ ಹಾಗೂ ಸರ್ದಾರ್ ಪಣಿಕ್ಕರ್. ಪೂರ್ಣ ಪಾಠ ತಯಾರಾದೊಡನೆ ಅದನ್ನು ಈ ದೇಶದ ರಾಷ್ಟ್ರೀಯ ಆಯೋಗಕ್ಕೆ ಕಳುಹಿಸಲಾಯಿತು; ಹಾಗೇ ಎಲ್ಲ ರಾಷ್ಟ್ರೀಯ ಆಯೋಗಗಳಿಗೂ ಕಳುಹಿಸಲಾಗಿತ್ತು. ನಾವು ಈ ಪಾಠವನ್ನು ಪ್ರಾಕ್ತನ ಇಲಾಖೆಯ ಮಹಾನಿರ್ದೇಶಕ ಪ್ರೊ॥ ಮಜುಂದಾರ್ ಹಾಗೂ ಸಹ ಮಹಾ ನಿರ್ದೇಶಕ ಶ್ರೀ ಲಾಲ್ ಅವರಿಗೆ ಸಲ್ಲಿಸಿದೆವು. ಈ ಗಣ್ಯರು ಪಾಠ ಕುರಿತ ತಮ್ಮ ಟೀಕೆ–ಟಿಪ್ಪಣಿಗಳನ್ನು ಸಿದ್ಧಪಡಿಸಿದರು. ಇವರು ಈ ಗ್ರಂಥ ಕರ್ತರ ಕೆಲವು ವ್ಯಾಖ್ಯಾನಗಳ ಬಗ್ಗೆ ಕಟುವಾಗಿಯೇ ಟೀಕೆ ವ್ಯಕ್ತಪಡಿಸಿದ್ದಾರೆ.

ಆದರೆ ಈ ಗ್ರಂಥಕರ್ತರನ್ನು ಸುಮ್ಮನೆ ದೂಷಿಸಬಾರದು. ಏಕೆಂದರೆ ಇವರು ತಮ್ಮ ಪಾಠದಲ್ಲಿ ತಮ್ಮ ನಿಲುವುಗಳಿಗೇ ಅಂಟಿಕೊಂಡಿದ್ದರೂ, ಪ್ರೊ॥ ಮಜುಂದಾರ್ ಹಾಗೂ ಇತರರ ಟೀಕೆ ಟಿಪ್ಪಣಿಗಳನ್ನು ಅನುಬಂಧವಾಗಿ ಪುಸ್ತಕದಲ್ಲಿ ಸೇರಿಸಿದ್ದಾರೆ. ಇದರಿಂದಾಗಿ ಈ ಇತಿಹಾಸವನ್ನು ಓದುವ ಯಾರಿಗಾದರೂ ಗ್ರಂಥಪಾಠದ ಜೊತೆಗೆ

ಆ ಬಗ್ಗೆ ಇರುವ ಭಿನ್ನನಿಲುವುಗಳೂ ಗೊತ್ತಾಗುತ್ತದೆ. ಆದ್ದರಿಂದ ಶಿಕ್ಷಣ ಇಲಾಖೆಯ ಜವಾಬ್ದಾರಿಯ ಪ್ರಶ್ನೆ ಎಲ್ಲಿ ಬರುತ್ತದೆ ? ಡಾ॥ ರಾಮಮನೋಹರ ಲೋಹಿಯಾ ಅವರು ಋಗ್ವೇದದ ಕಾಲದ ಪ್ರಶ್ನೆ ಎತ್ತಿದ್ದಾರೆ. ಋಗ್ವೇದದ ಕಾಲ 1200 ವರ್ಷಗಳಿಗಿಂತ ಹಿಂದೆ ಹೋಗುವುದಿಲ್ಲವೆಂದು ಈ ಗ್ರಂಥಕರ್ತ ಅಭಿಪ್ರಾಯಪಡುತ್ತಾನೆಂಬುದನ್ನು ನಾನು ಒಪ್ಪಿಕೊಳ್ಳುವೆ. ಇದು ನಾವೆಲ್ಲ ತಿಳಿದಿರುವುದಕ್ಕೆ ಹಾಗೂ ತೀವ್ರವಾಗಿ ಭಾವಿಸಿರುವುದಕ್ಕೆ ವಿರುದ್ಧವಾಗಿದೆ–ಋಗ್ವೇದ, ಬಹು ಪುರಾತನ ಗ್ರಂಥವೆಂದು ನಾವು ತಿಳಿದಿದ್ದೇವೆ ಹಾಗೂ ನಮ್ಮ ಸಂಸ್ಕೃತಿಯ ಶ್ರೇಷ್ಠ ಪ್ರತೀಕಗಳಲ್ಲೊಂದೆಂದು, ನಮ್ಮ ಸಾಹಿತ್ಯ ಮತ್ತು ಕಾವ್ಯಕ್ಕೆ ಸಲ್ಲಿಸಲಾಗಿರುವ ಅಪೂರ್ವ ಕೊಡುಗೆಯೆಂದು ಭಾವಿಸಿದ್ದೇವೆ. ಈ ಗ್ರಂಥದಲ್ಲಿ ಕೂಡಾ ಈ ಸಂಬಂಧ ನಮ್ಮ ಅಭಿಪ್ರಾಯವೇನೆಂಬುದನ್ನು ಟಿಪ್ಪಣಿಯಲ್ಲಿ ಕೊಡಲಾಗಿದೆ. ನಾನು ಈ ಹಿಂದೆ ಹೇಳಿದಂತೆ, ಈ ತಪ್ಪನ್ನು ಗ್ರಂಥಕರ್ತರ ಗಮನಕ್ಕೆ ತರಲಾಗಿದೆ ಹಾಗೂ ತಪ್ಪನ್ನು ಕುರಿತ ಟೀಕೆಯನ್ನು ಟಿಪ್ಪಣಿಗಳಲ್ಲಿ ಸೇರಿಸಲಾಗಿದೆ.

ಡಾ॥ ರಾಮಮನೋಹರ ಲೋಹಿಯಾ ಅವರು **'ಪಾಕಿಸ್ತಾನದ ಐದು ಸಾವಿರ ವರ್ಷಗಳು'** ಎಂಬ ಪುಸ್ತಕದ ಬಗ್ಗೆ ಪ್ರಸ್ತಾಪಿಸಿದ್ದಾರೆ. ಪಾಕಿಸ್ತಾನ ಅಸ್ತಿತ್ವಕ್ಕೆ ಬಂದು 19 ವರ್ಷಗಳಾಗಿವೆ. ನಾನು ಭದ್ರತಾ ಸಮಿತಿಯಲ್ಲಿ ಹೇಳಿದಂತೆ ಈ 19 ವರ್ಷಗಳ ಮುನ್ನ ಇದ್ದ ಏಕೈಕ ಸಂಸ್ಕೃತಿ ಭಾರತೀಯ ಸಂಸ್ಕೃತಿ; ಏಕೈಕ ಇತಿಹಾಸ ಭಾರತೀಯ ಇತಿಹಾಸ ಹಾಗೂ ಇದ್ದ ಏಕೈಕ ಹಿನ್ನೆಲೆ ಭಾರತೀಯ ಹಿನ್ನೆಲೆ. ಯಾವ ಪಾಕಿಸ್ತಾನಿಯೂ 19 ವರ್ಷಗಳಿಗೂ ಹಿಂದಕ್ಕೆ ತನ್ನದೆಂಬ ದೇಶವನ್ನು ಕಾಣಲಾರ. ಆತನೇನಾದರೂ ಹಾಗೆ ಪ್ರಯತ್ನಪಟ್ಟರೆ ಆತನಿಗೆ ಕಾಣುವುದು ಭಾರತೀಯ ಸಂಸ್ಕೃತಿ, ಇತಿಹಾಸ ಹಾಗೂ ಭಾರತೀಯ ಪೂರ್ವಜರಷ್ಟೆ. ಆದ್ದರಿಂದ ಯಾವನೇ ಇತಿಹಾಸಕಾರ 5 ಸಾವಿರ ವರ್ಷಗಳ ಪಾಕಿಸ್ತಾನದ ಮಾತನಾಡುವುದು ಹಾಸ್ಯಾಸ್ಪದವಾಗುತ್ತದಷ್ಟೆ. ಇಂತಹ ಪುಸ್ತಕವನ್ನು ಯಾರು ಬರೆದಿದ್ದಾರೋ ಗೊತ್ತಿಲ್ಲ. ನಾನಂತೂ ಆ ಪುಸ್ತಕ ನೋಡಿಲ್ಲ.

ರಾಮಮನೋಹರ ಲೋಹಿಯಾ: ನೀವು ಬಯಸಿದರೆ ವಿವರ ಕೊಡುವೆ: R.E.M. Wheeler. 1950ರಲ್ಲಿ ಲಂಡನ್‌ನಲ್ಲಿ ಪ್ರಕಟವಾದ ಈ ಪುಸ್ತಕದ ಪೂರ್ಣ ಶೀರ್ಷಿಕೆ: Five Thousand Years of Pakisthan – An Archaeolgical Out-line. ಈತನೊಬ್ಬ ಬಹುದೊಡ್ಡ ಪ್ರಾಚ್ಯವಸ್ತು ಸಂಶೋಧಕ, ಸಾಮಾನ್ಯನಲ್ಲ, ಈತ ನಿಮಗೆ ಏನೆಲ್ಲಾ ಕಲಿಸಬಲ್ಲ. ಇಂದೇ ನೀವು ನನಗೆ ಉತ್ತರಕೊಡಬೇಕಿಲ್ಲ. ಸಮಯ ತೆಗೆದುಕೊಳ್ಳಿರಿ. ಇನ್ನೊಂದು ದಿನ ಇದೇ ವಿಷಯದ ಬಗ್ಗೆ ವಿವರವಾದ ಚರ್ಚೆ ನಡೆದರೆ ನಮಗೆ ತುಂಬಾ ಸಂತೋಷ.

ಶ್ರೀ ಕಪೂರ್‌ಸಿಂಗ್: ಈತನನ್ನು ಬಹಳ ವರ್ಷಗಳ ಕಾಲ ನಾವು ಇಲ್ಲೇ ಇಟ್ಟು ಕೊಂಡಿದ್ದೆವು. ವಿಭಜನೆಯ ನಂತರ ಕೂಡ ಈತ ಇಲ್ಲೇ ಇದ್ದ. ಈಗ ಪಾಕಿಸ್ತಾನದ ಐದು ಸಾವಿರ ವರ್ಷಗಳೆಂಬ ಪುಸ್ತಕ ಬರೆದಿದ್ದಾನೆ. ಈತ ಇಲ್ಲಿ ಪ್ರಾಚ್ಯವಸ್ತು ಸಂಶೋಧನಾಲಯದ ಮಹಾನಿರ್ದೇಶಕನಾಗಿದ್ದ. ಅವನೇ ಈತ.

ಶ್ರೀ ಎಂ. ಸಿ. ಛಗಲಾ: ನಮ್ಮ ಪುರಾತನ ನಾಗರೀಕತೆಯ ಬಗ್ಗೆ ನಮಗೆ ಹೆಮ್ಮೆ ಇದೆ. ಇದು ಸಾವಿರಾರು ವರ್ಷಗಳಷ್ಟು ಹಿಂದಕ್ಕೆ ಹೋಗುತ್ತದೆ. ನಮ್ಮ ಜನರೇ ನಮ್ಮದೇ ಇತಿಹಾಸ ಬರೆಯಲು ಹಾಗೂ ನಮ್ಮ ಭೂತಕಾಲದ ವ್ಯಾಖ್ಯಾನ ಮಾಡಲು ಇದು ಸಕಾಲ ಎಂಬ ಮಾತನ್ನು ನಾನು ಒಪ್ಪುತ್ತೇನೆ.

29-4-1966

ರಾಮಮನೋಹರ ಲೋಹಿಯಾ: ಮೊನ್ನೆ ನಾನು ಆರಂಭಿಸಿದ ಚರ್ಚೆಗೆ ಉತ್ತರ ಕೊಡಲು ನನಗೆ ಅವಕಾಶ ದೊರೆಯಲಿಲ್ಲ. ಹೀಗಾಗಿ ನಾನು ಆಭಾರಮನ್ನಣೆ ಮಾಡ ಲಾಗಲಿಲ್ಲ ಮತ್ತು ದೇಶೀಯ ಹಾಗೂ ವಿದೇಶೀಯ ಇತಿಹಾಸಕಾರರನ್ನು ಕುರಿತಂತೆ ಕೊಂಚ ಗೊಂದಲ ಉಂಟಾಯಿತು. ಈಗ ನಾನು ಒಂದು ವೈಯಕ್ತಿಕ ವಿವರಣೆ ನೀಡಬಯಸುವೆ.

ಮೊದಲಾಗಿ ನಾನು ಈ ಯುನೆಸ್ಕೋ ಪ್ರಕಟಣೆಯಲ್ಲಿ ಸೇರಿಹೋಗಿರುವ ತಪ್ಪುಗಳ ಬಗ್ಗೆ ತಮ್ಮ ಮುಂದಿನ ಪುಸ್ತಕ **'ಭಾರತೀಯ ಕಲಾ'**ದಲ್ಲಿ–ಇದರ ಹಸ್ತಪ್ರತಿಯನ್ನು ನಾನು ನೋಡಿರುವೆ–ವಿವರವಾಗಿ ಬರೆಯುತ್ತಿರುವ ಶ್ರೀ ವಿನಾಯಕ ಪುರೋಹಿತ ಅವರಿಗೆ ಕೃತಜ್ಞತೆ ಸಲ್ಲಿಸುವೆ.

ಪ್ರಶ್ನೆ ಇಲ್ಲಿ ದೇಶೀ-ವಿದೇಶೀ ಇತಿಹಾಸಕಾರನದಲ್ಲ ; ದೃಷ್ಟಿಕೋನದ್ದು. ರಷ್ಯಾದ ಇತಿಹಾಸಕಾರರಾದ ಪ್ರೊ॥ ದ್ಯಿಕೊನೋವ್ ಹಾಗೂ ಪ್ರೊ॥ ಇಲ್ಯಿನ್, ಪುಸ್ತಕದಲ್ಲಿನ ಎರಡು ಗಂಭೀರ ತಪ್ಪುಗಳ ಬಗ್ಗೆ–ಹರಪ್ಪಾದಲ್ಲಿ ವಿದೇಶೀ ಆಳ್ವಿಕೆ ಹಾಗೂ ಪಾಟಲೀಪುತ್ರದ ವಾಸ್ತುಶಿಲ್ಪದ ಹಿಂದೆ ವಿದೇಶೀ ಪ್ರೇರಣೆ–ಟಿಪ್ಪಣಿಗಳನ್ನು ಬರೆದಿದ್ದಾರೆ. ಡಾ॥ ಮಜುಂದಾರ್ ಋಗ್ವೇದ ಕುರಿತ ತಪ್ಪಿನ ಬಗ್ಗೆ ಟಿಪ್ಪಣಿ ಬರೆದಿದ್ದಾರೆ. ಆದರಿದು ಅಭಿಪ್ರಾಯ ಮಾತ್ರವಾಗಿದೆ; ಈಗ ಕೌಸಾಂಬಿ ಉತ್ಖನನ ಗಳಿಂದ ಇದಕ್ಕೆ ಪುರಾವೆಯೂ ದೊರೆತಿದೆ. ಕೌಸಾಂಬಿಯನ್ನು ಯಾವುದೇ ರೀತಿಯಲ್ಲಿ ಸಿಂಧೂನದಿ ನಾಗರೀಕತೆಯ ಭಾಗವೆಂದು ಪರಿಗಣಿಸಲಾಗುವುದಿಲ್ಲ; ಅದು ವೈದಿಕ ನಾಗರೀಕತೆಯ ಭಾಗವಾಗಿದ್ದು 3500 ವರ್ಷಕ್ಕೂ ಹಿಂದಿನ ಕಾಲಕ್ಕೆ ಸೇರುತ್ತದೆ. ಈ ಸಂಬಂಧದಲ್ಲಿ ನಾನು ಡಾ॥ ಗೋವರ್ಧನ್ ರಾಯ್ ಶರ್ಮಾ ಅವರ ಟಿಪ್ಪಣಿಯನ್ನು

ಸದನಕ್ಕೆ ಸಲ್ಲಿಸಲು ನಿಮ್ಮ ಅನುಮತಿ ಕೋರಿದ್ದು, ಈಗಾಗಲೇ ಅದು ನಿಮ್ಮನ್ನು ತಲುಪಿದೆ.

ಭಾರತೀಯ ಇತಿಹಾಸಶಾಸ್ತ್ರ ರೋಗಗ್ರಸ್ತವಾಗಿದೆ. ನಮ್ಮ ಪುರಾತನ ಸಂಸ್ಕೃತಿ ಇತಿಹಾಸಶಾಸ್ತ್ರಕ್ಕೆ ಕಾವ್ಯದ ರೂಪ ಕೊಟ್ಟಿದೆ. ಫರಿಶ್ತಾನಿಂದ ಹಿಡಿದು ವಿನ್ಸೆಂಟ್ ಸ್ಮಿತ್‌ವರೆಗೆ ಇತಿಹಾಸದ ವಿದೇಶೀ ಮೋಜುಗಾರರು ಭಾರತದ ಮೇಲಿನ ಪ್ರತಿಯೊಂದು ಆಕ್ರಮಣವನ್ನೂ ಅನಿವಾರ್ಯ ಹಾಗೂ ಪ್ರಯೋಜನಕಾರಿಯೆಂದು ಅರ್ಥೈಸಿದ್ದಾರೆ. ಎಲ್ಲಾ ದೇಶೀಯ ಇತಿಹಾಸಕಾರರೂ, ವಿದ್ವತ್ಪ್ರಪಂಚದಲ್ಲಿ ಗಣ್ಯರೆನಿಸಿಕೊಂಡವರು, ಈ ವಿದೇಶೀಯರ ಛಾಯಾನುಯಾಯಿಗಳು. ಈ ಹಳೇ ಜಾಡನ್ನು ಬಿಟ್ಟು ಯಶಸ್ವಿಯಾಗಿ ಹೊರಬಂದಿರುವ ಒಬ್ಬ ದೇಶೀಯ ಇತಿಹಾಸಕಾರನನ್ನೂ ನಾನು ಕಾಣೆ.

ಪ್ರಶ್ನೆ ಯುನೆಸ್ಕೋ ಪ್ರಕಟಣೆಯದು ಮಾತ್ರವಲ್ಲ. ಭಾರತ ಸರ್ಕಾರ ಪ್ರಕಟಿಸಿರುವ **'1857'** ಎಂಬ ಪುಸ್ತಕ ಇನ್ನಷ್ಟು ದೋಷಪೂರ್ಣವಾಗಿದೆ, ಸುಳ್ಳುಗಳಿಂದ ಕೂಡಿದೆ ಹಾಗೂ ವಿದ್ವದ್ಹೀನವಾಗಿದೆ. ಭಾರತದ ಎಲ್ಲ ಇತಿಹಾಸ ಶಾಸ್ತ್ರಜ್ಞರದೂ ಒಂದೇ ಮನೋಭಾವ-ಅಲ್ಲೊಂದು ಇಲ್ಲೊಂದು ವಿವರದ ಬಗ್ಗೆ ಭಿನ್ನಾಭಿಪ್ರಾಯವಿರಬಹುದಷ್ಟೆ.

ಈಗ ಸವಕಲು ದಾರಿಯನ್ನು ಬಿಟ್ಟು ಬರಬಲ್ಲ ಇತಿಹಾಸಜ್ಞರ ಅಗತ್ಯವಿದೆ.

ಸದನದಲ್ಲಿ ಸಾದರಪಡಿಸಲು ನಿರಾಕರಿಸಲ್ಪಟ್ಟ ಲೋಹಿಯಾ ಅವರ ಹೇಳಿಕೆಯ ಭಾಗಗಳು:

ಈ ರೋಗಗ್ರಸ್ತ ಮನೋಭಾವ ಅಥವಾ ಸಂಪ್ರದಾಯದ ಎದ್ದು ಕಾಣುವ ಲಕ್ಷಣಗಳೆಂದರೆ:

೧) ನಗಣ್ಯ ಹಾಗೂ ಮೇಲ್ಮೈ ಬದಲಾವಣೆಗಳಿಗೆ ನವೋದಯ ಎಂದು ಕರೆಯುವುದು. ಪ್ರತಿ ವಿದೇಶೀ ಆಕ್ರಮಣಕಾರನ ಸಂಪರ್ಕವನ್ನೂ, ಅದು ಮುಂದಿನ ಆಕ್ರಮಣಕಾರನಿಂದ ಅಲ್ಪಕಾಲದಲ್ಲೇ ನಾಶವಾಗುವುದಾದರೂ, ನವೋದಯವೆಂದು ಗುರುತಿಸುವುದು. ಡಾ॥ ತಾರಾಚಂದ್ ಹಾಗೂ ಡಾ॥ ಮಜುಂದಾರ್ ಯಾವ ಆಕ್ರಮಣಗಳು ನವೋದಯವನ್ನುಂಟುಮಾಡಿದವು ಎಂಬ ಪ್ರಶ್ನೆಯ ಬಗ್ಗೆ ಮಾತ್ರ ಪರಸ್ಪರ ವಿರೋಧಾಭಿಪ್ರಾಯ ವ್ಯಕ್ತಪಡಿಸುತ್ತಾರೆ.

೨) ಯಜಮಾನ ಮತ್ತು ಗುಲಾಮರಿಬ್ಬರ ಸಂಯೋಜನೆಯಲ್ಲೂ ಏಕಪ್ರಕಾರವಾದ ಲಕ್ಷಣಗಳನ್ನು ಗುರುತಿಸುವುದು.

೩) ವಿನ್ಸೆಂಟ್ ಸ್ಮಿತ್‌ರ ವಿವಿಧತೆಯಲ್ಲಿ ಏಕತೆಯ ಘೋಷಣೆಯಿಂದ ಇವರು ಎಷ್ಟು ಮರುಳಾಗಿದ್ದಾರೆಂದರೆ, ವಿವಿಧತೆಯನ್ನು ಹುಡುಕುವ ಅವರ ಹೆಣಗಾಟದಲ್ಲಿ ಏಕತೆ ಮಾಯವಾಗಿರುತ್ತದೆ.

ಈ ರೋಗ ಈಗ ಇತಿಹಾಸ ಶಾಸ್ತ್ರಜ್ಞರ ಸಾಮರ್ಥ್ಯವನ್ನು ಮೀರಿಹೋಗಿದೆ. ರಾಜಕಾರಣ ಮಾತ್ರ ಈ ತೊಂದರೆಯನ್ನು ನಿವಾರಿಸಬಲ್ಲುದು. ವಿದೇಶೀ ಆಳ್ವಿಕೆಗಳು ಫರಿಶ್ತಾ ಮತ್ತು ವಿನ್ಸೆಂಟ್ ಸ್ಮಿತ್ ಹಾಗೂ ಅವರ ದೃಷ್ಟಿಕೋನಗಳನ್ನು ರೂಪಿಸಿದ್ದಕ್ಕೆ ಸಂವಾದಿಯಾಗಿ ದೇಶೀಯ ಆಡಳಿತವೀಗ ಇತಿಹಾಸವಾದದ ಹೊಸ ದರ್ಶನವೊಂದನ್ನು ರೂಪಿಸಬೇಕಾಗಿದೆ. ಆದರೆ ಇಂದು ಇತಿಹಾಸವೆನ್ನುವುದು ಅಧಿಕೃತ ಅಥವಾ ಮೇಲ್ಮೈ ರಾಷ್ಟ್ರೀಯ ಅಥವಾ ಹುಸಿ ಅಥವಾ ವ್ಯಕ್ತಿಪೂಜೆ ವ್ಯಸನಿಯಾಗಿಬಿಟ್ಟಿದೆ. 'ಪ್ರಖ್ಯಾತ ಇತಿಹಾಸಕಾರ' ಎಂಬ ಹೆಸರಿನಡಿ ಮಂತ್ರಿವರ್ಯರು ಹಳೇ ಸಂಪ್ರದಾಯಕ್ಕೇ ಅಂಟಿಕೊಂಡಿದ್ದು ನನಗೆ ವಿಷಾದವೆನಿಸಿದೆ. ಈ ಪ್ರಖ್ಯಾತ ಇತಿಹಾಸಕಾರರು ಸಾಗುತ್ತಿರುವುದೂ ಹಳೇ ಜಾಡಿನಲ್ಲೇ.

ಶಿಕ್ಷಣ ಮಂತ್ರಿ (ಶ್ರೀ ಎಂ. ಸಿ. ಛಗಲಾ): ಡಾ॥ ಲೋಹಿಯಾ ಅವರ ಹೇಳಿಕೆಯ ಕೊನೆಯ ಭಾಗ, ಇಂದಿನ ಅರ್ಧ ತಾಸಿನ ಚರ್ಚಾ ವಿಷಯಕ್ಕೆ ಹೊರತಾಗಿದ್ದು, ನಾನು ಅನಿವಾರ್ಯವಾಗಿ ಮತ್ತೆ ಮಾತನಾಡಬೇಕಿದೆ. **'1857 ಭಾರತ'** ಪುಸ್ತಕದ ಲೇಖಕರು ಅತ್ಯಂತ ಗಣ್ಯ ವ್ಯಕ್ತಿಯಾಗಿದ್ದು ಅವರ ಮೇಲೆ ಡಾ॥ ಲೋಹಿಯಾ ಗಂಭೀರ ಆರೋಪಗಳನ್ನು ಮಾಡಿದ್ದಾರೆ. ಆ ವ್ಯಕ್ತಿ ಈಗ ನಮ್ಮೊಂದಿಗಿಲ್ಲ.

ಶ್ರೀ ಎನ್.ಜಿ. ರಂಗಾ: ಸರ್ಕಾರದ ಆದೇಶದ ಮೇಲೇ ಅವರು ಪುಸ್ತಕ ಬರೆದಿರುವುದು.

ಶ್ರೀ ಎಂ.ಸಿ. ಛಗಲಾ: ಈ ಪುಸ್ತಕಕ್ಕೆ ಮೌಲಾನಾ ಆಜಾದರು ಮುನ್ನುಡಿ ಬರೆದಿದ್ದು ಅದರ ಒಂದು ಅಧ್ಯಾಯವನ್ನು ಓದುವೆ.

ಶ್ರೀ ರಂಗಾ: ಆಗಲೇ ಈ ಪುಸ್ತಕದ ಬಗ್ಗೆ ನಾವು ಆಕ್ಷೇಪಿಸಿದ್ದೆವು.

ಶ್ರೀ ಎಂ. ಸಿ. ಛಗಲಾ: ನನ್ನ ಮಾತುಗಳನ್ನು ಮುಗಿಸಲು ಶ್ರೀ ರಂಗಾ ಅವರು ಅವಕಾಶಕೊಡಬೇಕೆಂದು ಕೋರುವೆ.

ಶ್ರೀ ರಂಗಾ: ನೀವು ಈಗ ಶಿಕ್ಷಣ ಮಂತ್ರಿಗಳಾಗಿದ್ದೀರಾ. ಇದಕ್ಕಿಂತ ಬಹಳ ಮುಂಚೆ ನೀವು ಉಪಸಭಾಧ್ಯಕ್ಷರಾಗಿದ್ದಾಗ ಈ ಪುಸ್ತಕದ ಬಗ್ಗೆ ಚರ್ಚೆ ನಡೆದು ಸದನದ ಅನೇಕ ಸದಸ್ಯರು ತಮ್ಮ ಅಭಿಪ್ರಾಯ ವ್ಯಕ್ತಪಡಿಸಿದ್ದಾರೆ.

ಮಾನ್ಯ ಸಭಾಧ್ಯಕ್ಷರು: ಅರ್ಧ ತಾಸಿನ ಚರ್ಚೆಯ ನಂತರ ಡಾ॥ ಲೋಹಿಯಾ ವೈಯಕ್ತಿಕ ವಿವರಣೆ ನೀಡಬಯಸಿದರು. ಈಗ ಸಚಿವರು ಅದರ ಮೇಲೆ ಒಂದೆರಡು ಮಾತುಗಳನ್ನಾಡಬಯಸುತ್ತಾರೆ.

ಮೇ–ಜೂನ್ ೧೯೬೦/೩೩

ರಾಮಮನೋಹರ ಲೋಹಿಯಾ: ಅಂದು ನನ್ನನ್ನು ಮಾತನಾಡಲು ಬಿಟ್ಟಿದ್ದರೆ ಇಂದು ಇವರು ಈ ರೀತಿ ಮಾತನಾಡಲು ಸಾಧ್ಯವಾಗುತ್ತಿರಲಿಲ್ಲ. ನಿಯಮ ಉಲ್ಲಂಘಿಸಿ ಅಂದು ನನಗೆ ಅವಕಾಶ ಕೊಡಲಿಲ್ಲ.

ಶ್ರೀ ಎಂ.ಸಿ. ಛಗಲಾ: ಮೌಲಾನಾ ಆಜಾದ್ ಹೇಳಿರುವುದನ್ನು ಕೇಳಿ: 'ಪ್ರಸ್ತುತ ಪುಸ್ತಕ ಭಾರತ ಸರ್ಕಾರದ ಸೂಚನೆ ಮೇರೆಗೆ ಡಾ॥ ಸೇನ್ ಮಾಡಿದ ಪ್ರಯತ್ನದ ಫಲ'.

ಶ್ರೀ ರಂಗಾ: ನಮ್ಮ ದೂರಿನ ತಿರುಳೇ ಅದು.

ಶ್ರೀ ಎಂ. ಸಿ. ಛಗಲಾ: ಅವರು ಮುಂದುವರಿದು ಹೇಳುತ್ತಾರೆ: "ನಾನು ಕೊಟ್ಟ ಏಕಮಾತ್ರ ಸೂಚನೆ ಎಂದರೆ ನಿಜವಾದ ಇತಿಹಾಸಕಾರನ ದೃಷ್ಟಿಕೋನದಿಂದ ಅವರು ಬರೆಯಬೇಕೆಂಬುದಷ್ಟೆ". ಇದನ್ನು ನಾನು ಒತ್ತಿ ಹೇಳುವೆ.

ರಾಮಮನೋಹರ ಲೋಹಿಯಾ: ಸಮಾಧಾನದಿಂದ ಮಾತಾಡಿ, ಶ್ರೀ ಛಗಲಾ, ಸಂಯಮ ಕಳೆದುಕೊಳ್ಳಬೇಡಿ.

ಶ್ರೀ ಎಂ.ಸಿ. ಛಗಲಾ: ನಂತರ ಅವರು ಹೀಗೆನ್ನುತ್ತಾರೆ: "ಈ ಸಾಮಾನ್ಯ ಸೂಚನೆ ಯಾಚೆಗೆ ಅವರ ಕೆಲಸದಲ್ಲಿ ಹಸ್ತಕ್ಷೇಪ ಮಾಡುವ ಅಥವಾ ಪ್ರಭಾವ ಬೀರುವ ಯಾವ ಪ್ರಯತ್ನವನ್ನೂ ಮಾಡಲಾಗಿಲ್ಲ. ಆದ್ದರಿಂದ ಘಟನೆಗಳ ಆಯ್ಕೆ ಹಾಗೂ ವ್ಯಾಖ್ಯಾನದ ಜವಾಬ್ದಾರಿ ಸಂಪೂರ್ಣ ಅವರದ್ದೇ. ಅವರ ಯಾವುದೇ ಅಭಿಪ್ರಾಯ ಪ್ರಕಟಣೆಗೆ ಭಾರತ ಸರ್ಕಾರ ಯಾವುದೇ ರೀತಿಯಲ್ಲೂ ಬದ್ಧವಾಗಿಲ್ಲ". ಪುಸ್ತಕದ ಪ್ರತಿಯೊಂದು ನನ್ನ ಬಳಿ ಇದ್ದು ಬಿಡುವಾದಾಗ ಡಾ॥ ಲೋಹಿಯಾ ಓದಬಹುದು. 1857ರ ಬಗೆಗೆ ವಿಭಿನ್ನ ದೃಷ್ಟಿಕೋನಗಳನ್ನುಳ್ಳ ವಿವಿಧ ಇತಿಹಾಸಕಾರರ ಅಭಿಪ್ರಾಯಗಳನ್ನು ನಾನು ಕ್ರೋಢೀಕರಿಸಿದ್ದೇನೆ. ಸಾವರ್ಕರ್ ಹೇಳುವುದೇನೆಂದರೆ....

ಶ್ರೀ ನಾಥ್ ಪೈ: ನೀವೇಕೆ ಸಾವರ್ಕರರ ಪುಸ್ತಕವನ್ನು ಮರುಮುದ್ರಿಸಬಾರದು ? ಭಗತ್‌ಸಿಂಗ್ ಹಾಗೂ ನೇತಾಜಿ ಸುಭಾಷ್ ಚಂದ್ರಬೋಸರು ಅದನ್ನು ಮರುಮುದ್ರಿಸಿದ್ದರು.

ಶ್ರೀ ಎಂ. ಸಿ. ಛಗಲಾ: ಹಾಗಲ್ಲ.

ರಾಮಮನೋಹರ ಲೋಹಿಯಾ: ಈ ಇತಿಹಾಸಕಾರ ಸಂಪೂರ್ಣ ತಪ್ಪುದಾರಿ ಹಿಡಿದಿದ್ದಾನೆ.

ಮಾನ್ಯ ಸಭಾಧ್ಯಕ್ಷರು: ಅವರು ಸರಿ ಇರಬಹುದು ಅಥವಾ ಮತ್ತೊಬ್ಬರು ಸರಿ ಇರಬಹುದು. ನೀವು ಹೇಳುವುದು ಮತ್ತು ಮಂತ್ರಿ ಹೇಳುವುದು ಎರಡೂ ದಾಖಲೆಗಳಿಗೆ ಸೇರುತ್ತದೆ. ಅವರು ಮಾತು ಮುಗಿಸಲಿ. ವಿವಾದ ಸೃಷ್ಟಿಸುವುದು ಬೇಡ.

ರಾಮಮನೋಹರ ಲೋಹಿಯಾ: ವಿವಾದ ಸೃಷ್ಟಿಸುತ್ತಿರುವುದು ನಾವಲ್ಲ, ಅವರು.

ಶ್ರೀ ಎಂ.ಸಿ. ಛಗಲಾ: ಕೊನೆಯದಾಗಿ, ಆದರೆ ಮುಖ್ಯವಾಗಿ, ಇನ್ನೂ ನಮ್ಮೊಡನೆ ಇರುವ ಈ ದೇಶದ ಸುವಿಖ್ಯಾತ ಇತಿಹಾಸಕಾರ ಶ್ರೀ ಮಜುಂದಾರರೂ-ಡಾ॥ ಲೋಹಿಯಾ ಕೂಡ ಸ್ವಯಂ ಸಮರ್ಥನೆಗಾಗಿ ಇವರನ್ನು ಉಲ್ಲೇಖಿಸಿದ್ದಾರೆ-ಇದೇ ನಿಲುವನ್ನು ವ್ಯಕ್ತಪಡಿಸಿದ್ದಾರೆ. ನನ್ನ ಬಳಿ ಈಗ ಪಂಡಿತ್ ಜವಾಹರಲಾಲ್ ನೆಹರೂ ಅವರೂ ತಮ್ಮ 'ಡಿಸ್ಕವರಿ ಆಫ್ ಇಂಡಿಯಾ'ದಲ್ಲಿ ಡಾ॥ ಸೇನರು ತಳೆದಂತ ನಿಲುವನ್ನೇ ತಳೆದಿರುವ ಉಲ್ಲೇಖವಿದೆ.

ಶ್ರೀ ಹರಿವಿಷ್ಣು ಕಾಮತ್: ಅದೇ ಕೊನೆಮಾತಲ್ಲ.... **(ಕೂಗಾಟ)**

ಶ್ರೀ ಸಿ. ಕೆ. ಭಟ್ಟಾಚಾರ್ಯ (ರಾಯ್‌ಗಂಜ್): ಸ್ವಾಮಿ, ಈ ಸ್ಥಿತಿಯಲ್ಲಿ ಚರ್ಚೆಯನ್ನು ಗ್ರಹಿಸುವುದೇ ನಮಗೆ ಕಷ್ಟವಾಗಿದೆ.... **(ಕೂಗಾಟ)**

ಮಾನ್ಯ ಸಭಾಧ್ಯಕ್ಷರು: ಮಾನ್ಯ ಶಿಕ್ಷಣ ಮಂತ್ರಿಗಳ ಭಾಷಣ ಮುಗಿಯಿತೇ ?

ಶ್ರೀ ಎಂ. ಸಿ. ಛಗಲಾ: ಹೌದು ಸ್ವಾಮಿ.

ಕಾಲಪ್ರವಾಹದ ಪ್ರತಿಯೊಂದು ಕ್ಷಣವೂ ಚರಬಿಂದು ಹೇಗೋ ಹಾಗೆ, ಅಚರಬಿಂದು ಕೂಡಾ. ಕ್ಷಣದ ಈ ಎರಡು ರೂಪಗಳ ಬಗ್ಗೆ ಮನುಷ್ಯ ಒಂದು ಇನ್ನೊಂದೆಂದು ಭ್ರಮಿಸುವ ತಪ್ಪನ್ನು ಈ ತನಕ ಮಾಡುತ್ತಾ ಬಂದಿದ್ದಾನೆ. ಆದರೆ ಕ್ಷಣವೆನ್ನುವುದು ನಂತ-ಅನಂತಗಳೆರಡೂ ಹೌದು. ಅದು ನಂತವಾದಾಗ ಇತಿಹಾಸದ ಕ್ಷೇತ್ರಕ್ಕೆ ಸೇರುತ್ತದೆ; ಅಲ್ಲಿ ಸಜ್ಜಾಗಿ ನಿಂತಿರುವ ಶಕ್ತಿಗಳನ್ನು ಗುರುತಿಸಿ ಉತ್ತೇಜಿಸುತ್ತದೆ ಅಥವಾ ನಿಶ್ಚೇಷ್ಟಿತಗೊಳಿಸುತ್ತದೆ. ಅದು ಅನಂತವಾದಾಗ ಕಲೆ-ಸಾಹಿತ್ಯಗಳ, ಧರ್ಮ-ತತ್ವಜ್ಞಾನಗಳ ಕ್ಷೇತ್ರಕ್ಕೆ ಸೇರುತ್ತದೆ. ಇತಿಹಾಸವೆಂಬುದು ಬದುಕಿನ ಮಹಾ ಗದ್ಯವಾದರೆ ಆಖ್ಯಾನಗಳೂ, ಪುರಾಣಕಥೆಗಳೂ ಅದರ ಕಾವ್ಯ; ಕೇವಲ ವಾಸ್ತವಿಕ ಘಟನೆಗಳಲ್ಲೇ ತೊಡರಿಕೊಂಡಿರುವ ಇತಿಹಾಸದ ವಿವರಣೆ ಕೇವಲ ಏಕಪಕ್ಷೀಯ. ಮಾನವನ ನಿಯುತಿಯನ್ನು ಇತಿಹಾಸದ ಅನಿತ್ಯವಾದ ಕ್ಷಣಗಳಲ್ಲಿ ಮಾತ್ರವಲ್ಲ, ಎಂದೂ ಸಂಭವಿಸದ ಆದರೆ ಈ ಸಂಭವನೀಯತೆಯನ್ನೂ ಮೀರಿ ಕಾವ್ಯವಾಗಿರುವ ಕ್ಷಣದ ಅವಿನಾಶಿ ನಿತ್ಯತೆಯಲ್ಲೂ ಓದಬೇಕು. ಇತಿಹಾಸದ ಪರಿಧಿಯೊಳಗಡೆ ಬದುಕಲು ಮನುಷ್ಯ ಕಲಿಯಬೇಕಾದರೆ ಅವನು ಅದರಾಚೆ ಬದುಕುವ ಅಗತ್ಯವೂ ಅಷ್ಟೇ ಇದೆ.

—ಡಾ॥ ರಾಮಮನೋಹರ ಲೋಹಿಯಾ, 'ಇತಿಹಾಸ ಚಕ್ರ'ದಲ್ಲಿ

ಸುಮ್ಮನಿರುವ ಸುಮ್ಮಾನ : ತಾವೋ ಪದ್ಯಗಳು

● ಎಸ್. ಮಂಜುನಾಥ್

ಚೀನಾಕ್ಕೆ ಬೌದ್ಧಧರ್ಮ ಬರುವ ಮುನ್ನ ಅಲ್ಲಿನ ಜನ ಅನುಸರಿಸುತ್ತಿದ್ದುದು ಕನ್‌ಫ್ಯೂಶಿಯಸ್‌ವಾದ ಹಾಗೂ ತಾವೋವಾದಗಳನ್ನೊಳಗೊಂಡ ಧರ್ಮವನ್ನು. ಕನ್‌ಫ್ಯೂಶಿಯಸ್‌ವಾದ ಧರ್ಮದ ಲೌಕಿಕಸ್ತರದ ಧ್ವನಿಯಾದರೆ ತಾವೋವಾದ ಲೋಕೋತ್ತರಸ್ತರದ ಧ್ವನಿ. 'ತಾವೋ'ದ ಸರಳಾರ್ಥ ದಾರಿ ಎಂದು. 'ಯಿನ್' ಮತ್ತು 'ಯಾಂಗ್'ಗಳೆಂಬ ವಿರೋಧ. ಆದರೆ ಪೂರಕವಾದ (ಹೆಣ್ಣು–ಗಂಡು) ಗುಣಗಳ ತಿರುಗುವ ಚಕ್ರದ ಸಂಕೇತದ ಮೂಲಕ ತಾವೋವಾದ ಜಗತ್‌ನಿಯಮದ ರಹಸ್ಯ ಅರಿಯು ವೆಡೆಗೆ ದಾರಿ ತೋರುತ್ತದೆ. ಈ ಜಗತ್ತು ನಿರಂತರ ಚಲನೆ ಮತ್ತು ಸ್ಥಿತ್ಯಂತರಗಳ ಪ್ರಕ್ರಿಯೆಯಾಗಿದ್ದು, ಮನುಷ್ಯ ಈ ಪ್ರಕ್ರಿಯೆಯ ಒಂದು ಅವಿಭಾಜ್ಯ ಅಂಗವಾಗಿ ನೆಮ್ಮದಿ ಪಡೆವ ಕೌಶಲ್ಯವನ್ನು ತಾವೋ ಬೋಧಿಸುತ್ತದೆ. ಇದನ್ನು ಉಪನಿಷತ್ತುಗಳು ಹೇಳುವ ಬ್ರಹ್ಮಜ್ಞಾನ ಅಥವಾ ಬೌದ್ಧಧರ್ಮ ಹೇಳುವ ಅಷ್ಟಾಂಗ ಮಾರ್ಗಕ್ಕೆ ಹೋಲಿಸಬಹುದು. ಮೊದಲು ಲಾವೊತ್ಸೆ, ನಂತರ ಚುವಾಂಗ್‌ತ್ಸೆ ಈ ಸಂಪ್ರದಾಯದ ಗುರುಗಳೆನಿಸಿಕೊಂಡವರು. ಇವರಿಬ್ಬರ ಆಯ್ದ ಕೆಲವು ವಚನಗಳ ಕನ್ನಡ ರೂಪಾಂತರಗಳನ್ನು ಇಲ್ಲಿ ಕೊಡುತ್ತಿದ್ದೇವೆ. –ಸಂ.

ಲಾವೊತ್ಸೆ

೧. ಆದಿ ತಾವೋ

ಕಣ್ಣಿಟ್ಟು ನೋಡಲೂ ಕಾಣದಾದ ರೂಪು
ನಿರೂಪವೆಂದೆನಿಸಿತ್ತು
ಕಿವಿಯಿಟ್ಟು ಕೇಳಲೂ ಕೇಳದಾದ ಶಬ್ದ
ನಿಶ್ಶಬ್ದವೆಂದೆನಿಸಿತ್ತು
ಮೈಮುಟ್ಟಿ ನೋಡಲೂ ದೊರೆಯದ ಇರುವು
ಇಲ್ಲವೆಂದೆನಿಸಿತ್ತು
ಈ ಮೂರು ಸೂಕ್ಷ್ಮಗಳೂ ಬುದ್ಧಿಯಿಂದ ಹಿಂದೆ
ಸಂಧಿಸಿ ಬೆರೆತು ಒಂದಾಗಿತ್ತು.

ಅದು ಮೂಡಿ ಬೆಳಗಲ್ಲ
ಅದು ಮುಳುಗಿ ಇರುಳಲ್ಲ
ಮೂಡಲು ಮುಳುಗದು
ಎಂದೆಂದೂ ಹಾಡುವುದು
ಹಾಡು ಮೌನಕ್ಕೆ ಮರಳುವುದು.

ನಿರೂಪದ ರೂಪ ಅದು
ಬಯಲಿನ ಬಣ್ಣ ಅದು
ಕೈಗೆ ಸಿಕ್ಕದ ಗಾಳಿಸುಳಿ

ಎದುರಾಗಲು ಅದರ ಮೋರೆ ಕಾಣೆ
ಹಿಂಬಾಲಿಸಲು ಅದರ ಬೆನ್ನು ಕಾಣೆ.

೨. ಶೂನ್ಯದ ಉಪಯುಕ್ತತೆ

ಹನ್ನೆರಡು ಕೋಲುಗಳು ಗುಂಭದಲ್ಲೊಂದು
ಚಕ್ರದ ಉಪಯುಕ್ತತೆ
ಅವುಗಳಿಲ್ಲದಿರುವಿಕೆಯಿಂದ
ಕಪ್ಪು ಮಣ್ಣಾಗುವುದು ಕುಂಭೆ
ಅದರ ಉಪಯುಕ್ತತೆ
ಇರದ ಟೊಳ್ಳೊಳಗಿಂದ
ಮರವ ಕೆತ್ತಿದರೆ ಕದ ಕಿಟಕಿಗಳು
ಖಾಲಿಜಾಗವೇ ಅವುಗಳುಪಯುಕ್ತತೆ

ಲಾಭವಾಗುವುದು ನಮಗೆ ವಸ್ತುಗಳ ಇರುವಿಕೆಯಿಂದ
ಉಪಯೋಗವಾಗುವುದು ಇಲ್ಲದಿರುವಿಕೆಯಿಂದ.

೩. ಮರವಿನ ಮುದ

ಹೂನಗಲೂ ಕಲಿತಿರದ ಹಸುಗೂಸಿನ ಹಾಗೆ
ನನ್ನ ಮನ ಖಾಲಿ ಖಾಲಿ–ಎಂಥ ಮರುಳ ನಾನು !
ಎಲ್ಲರಲ್ಲೂ ಸಮೃದ್ಧಿ

ಮೇ-ಜೂನ್ ೧೯೬೦/೩೯

ನನ್ನಲ್ಲಿ ಮಾತ್ರ ಕೊರತೆ
ಎಲ್ಲರಲ್ಲೂ ಸ್ಪಷ್ಟತೆ
ನನ್ನಲ್ಲಿ ಮಾತ್ರ ಮಂಕು
ತಲೆ ತುಂಬ ಗೊಂದಲ !
ಎಲ್ಲರಿಗೂ ತಮ್ಮದೇ ಗುರಿ
ನಾನೊಬ್ಬನೇ ಮೂರ್ಖ, ಎಡವಟ್ಟ !
ತಾಯಿ ಕೈತುತ್ತೆ ದೊಡ್ಡದೆಂದೆಣಿಸುವವ
ನಿಜಕ್ಕೂ ಏನೊಂದೂ ತಿಳಿಯದವ.

೪. ಹಳ್ಳಿ ಸ್ವರ್ಗ

ಸ್ವರ್ಗದ ಹಳ್ಳಿಯೆಂಬುದು
ಮರ್ತ್ಯದ ಹಳ್ಳಿ
ಅಲ್ಲಿ ಜನರು
ಕತ್ತಿ ಗುರಾಣಿಗಳಿದ್ದರೂ
ಬಳಸಲು ಅರಿಯರು
ದೂರದೂರುಗಳಿಗೆ ಸಾಗಲು
ಬೇಸರಿಸುವರು
ಸಾವು ಲಘು ಸಂಗತಿಯೇನು
ಎಂದು ಕೇಳುವರು.

ಕುಣಿಕೆ ಹಗ್ಗದ ಬಳಕೆಗೆ
ಹಿಂದಿರುಗುವರು
ಊಟದಲ್ಲಿ ರುಚಿ
ಉಡುಪಲ್ಲಿ ಚೆಲುವು
ಕಾಣುವರು
ಉಂಡು ನಗುವರು ಮನೆಯಲ್ಲಿ
ಅಳುವುದು ಬಾಳ ರೀತಿಯಲ್ಲಿ

ಆ ರಾಜ್ಯವೆಂಬುದು
ಈ ರಾಜ್ಯದ ಕಣ್ಣಳತೆಯಲ್ಲಿ

ಹೋ–ಜೂನ್ ಗ್ರೀರ್/೪೩

ಆ ರಾಜ್ಯದ ಕೋಳಿ ಕೂಗು
ಕೇಳುವುದು ಇಲ್ಲಿ
ಈ ರಾಜ್ಯದ ನಾಯಿ ಬೊಗಳು
ಕೇಳುವುದು ಅಲ್ಲಿ
ಆದರೂ ಒಂದು ರಾಜ್ಯದ ಜನರು
ಮತ್ತೊಂದು ರಾಜ್ಯವನ್ನೆಂದಿಗೂ ನೋಡದೆ
ಬಾಳಿ ಮುದಿಯಾಗಿ ಅಳಿಯುವರು
ಹಳ್ಳಿ ಸ್ವರ್ಗದಲ್ಲಿ.

೫. ಸುಮ್ಮನಿರುವ ಸುಮ್ಮಾನ

ನಯದೊಳಗಿನ ನಯವು
ಕಠಿಣದೊಳಗಿನ ಕಠಿಣವನು
ಭೇದಿಸುವುದು
ಅವಕಾಶವೇ ಇಲ್ಲದ್ದನ್ನು
ವಸ್ತುವೇ ಅಲ್ಲದ್ದು
ಹೋಗುವಂತೆ
ಸುಮ್ಮನಿರುವ ಸುಮ್ಮಾನ
ಪದರಹಿತ ಬೋಧ
ಯಾವುದು ತಾನೆ ಸಮ ಇವುಗಳಿಗೆ ?

ಚುವಾಂಗ್‌ತ್ಸೆ

೧. ಗಾಳಿ ಹೇಳಿದ್ದು

ಒಂಟಿ ಕಾಲಿನ ಕುಪ್ಪಳಿಸುವ ಪ್ರಾಣಿಯೊಂದು
ಸಾವಿರ ಕಾಲಿನ ಹುಳವ ಕೇಳಿತು:
'ನನ್ನ ನಡಿಗೆ ಎಷ್ಟು ಸರಳ ! ನಿನಗೋ
ಕಾಲು ಸಾವಿರ—ಹೇಗೆ ನಿನ್ನ ಪಾಡು ?'
'ನನ್ನ ಪಾಡು'—ಹುಳವೆಂದಿತು 'ನೋಡಿಲ್ಲವಾ ನೀನು
ಮನುಷ್ಯ ಉಗುಳುವುದನ್ನು; ದಪ್ಪ ಹನಿ ಮಣಿಗಳ ಹಾಗೆ

ತುಂತುರು ಹಿಮದ ಹಾಗೆ
ಎಲ್ಲವೂ ಒಟ್ಟಿಗೇ ಅಗಣಿತ
ಸುರಿಯುವುದನ್ನು;
ಸಹಜಯಂತ್ರ ಚಲಿಸಿದಾಗ
ಕಾಲುಗಳೆಂತು ಉರುಳುವುವೋ
ನನಗೇ ನಿಜಕ್ಕೂ ಗೊತ್ತಿಲ್ಲ'

ಹುಳ ಕೇಳಿತು ಹಾವನ್ನ: ನನ್ನ ನಡಿಗೆಗೆ ಸಾವಿರ ಕಾಲು
ಆದರೂ ಕಾಲಿಲ್ಲದ ನಿನ್ನ ವೇಗ
ನನಗಿಲ್ಲ ಯಾಕೆ ?'
'ಕಾಲು ನನಗ್ಯಾಕೆ ?'
ಹಾವೆಂದಿತು
'ನನಗೆ ನನ್ನ ಸ್ವಾಭಾವಿಕ ಚಲನೆ'

ಹಾವು ಗಾಳಿ ಕೇಳಿತು: 'ಗಾಳಿರಾಯ
ನನಗಾದರೋ ಒಂದು ಬೆನ್ನುಮೂಳೆ;
ಬೆನ್ನೇ ಇರದ ನೀನು
ಉತ್ತರ ಸಮುದ್ರದಲ್ಲೆದ್ದು ದಕ್ಷಿಣ ಸಮುದ್ರದಲ್ಲಿಳಿದು
ಬಂದು ಹೋಗುವುದು ಹೇಗೆ ?'

'ನಿಜ, ಉತ್ತರ ದಕ್ಷಿಣ ಸಮುದ್ರಗಳು ನನ್ನ ನಿಲ್ದಾಣಗಳು
ವೃಕ್ಷಗಳ ಬುಡ ಉಚ್ಚಾಟಿಸುವ ಬಲಾಢ್ಯ ; ಆದರೇನು
ಬೆರಳ ತೂರಿದರೆ ಹರಿದುಹೋಗುವೆ'
ತೀರ ದುರ್ಬಲ ನಾನು.
ಅಂತಿಮ ಪರಾಕ್ರಮ ಸಂತನದಷ್ಟೇ
ಆತ ನನ್ನನ್ನು ಮೀರಿ
ಬೆಳಕ ಮೀರಿ
ಮನಸ ಬೀರಿ
ಸಾಗಬಲ್ಲ, ಅದಕ್ಕೇ ನಾನಂದಿದ್ದು
ಅಂತಿಮ ಜಯ ಸಂತನದಷ್ಟೇ.

೨. ಅಂಕದ ಹುಂಜ

ಅಂಕಕ್ಕೆ ಹುಂಜ ತಯಾರಾಗಿದೆಯಾ
ಇನ್ನೂ ಇಲ್ಲ ಇನ್ನೂ ಇಲ್ಲ

ಮುಂಗೋಪವಿದೆ ಮೈತುಂಬ ರೋಷವಿದೆ
ಹುಂಜ ತಯಾರಾಗಿಲ್ಲ

ಸದ್ದಿಗೆ ಕೆರಳತ್ತೆ ನೆರಳಿಗೆ ಜಿಗಿಯುತ್ತೆ
ಬಿಲ್‌ಕುಲ್ ತಯಾರಾಗಿಲ್ಲ

ಕಣ್ಣಲ್ಲಿ ಕಿಡಿಯಿದೆ ಮೈಯಲ್ಲಿ ಉರಿಯಿದೆ
ಸುತಾರಾಂ ತಯಾರಾಗಿಲ್ಲ

ಅಂಕಕ್ಕೆ ಹುಂಜ ತಯಾರಾಗಿದೆಯಾ ತಯಾರಾಗಿದೆಯಾ
ತಯಾರಾಗಿದೆ ಈಗ ತಯಾರಾಗಿದೆ:

ಬೇರೆ ಹುಂಜಗಳು ಮೊಳಗುವಾಗಲೂ ಕಿವುಡಂತಿರತ್ತೆ
ನೋಡಿದರೆ ಕದಲದೆ ಮರದ ಹುಂಜದಂತಿದೆ.

ಈಗ ಅದರ ಸ್ವಭಾವ ಇಡಿಯಾಗಿದೆ
ಅದರಿದಿರು ಈಗ ಯಾವುದು ತಾನೆ ನಿಲ್ಲುತ್ತದೆ?
ಅದರ ನೋಟಕ್ಕೇ ಉಳಿದ ಕೋಳಿಗಳು ಬೆದರಿ ಓಡುತ್ತವೆ ! ●

**ಅಜ್ಞಾನವೆಂಬ ತೊಟ್ಟಿಲೊಳಗೆ ಜ್ಞಾನವೆಂಬ ಶಿಶುವ ಮಲಗಿಸಿ
ಸಕಲವೇದಶಾಸ್ತ್ರಗಳೆಂಬ ನೇಣಕಟ್ಟಿ ಹಿಡಿದು ತೂಗಿ
ಜೋ ಜೋ ಎಂದು ಜೋಗುಳವಾಡುತ್ತಿದ್ದಾಳೆ ಭ್ರಾಂತಿಯೆಂಬ ತಾಯಿ
ತೊಟ್ಟಿಲು ಮುರಿದು, ನೇಣು ಹರಿದು, ಜೋಗುಳ ನಿಂದಲ್ಲದೆ
ಗುಹೇಶ್ವರನೆಂಬ ಲಿಂಗವ ಕಾಣಬಾರದು.**

—ಅಲ್ಲಮ ಪ್ರಭು

ಎರಡು ಮೃತ್ಯುಗೀತೆಗಳು

◉ ಅರವಿಂದ ನಾಡಕರ್ಣಿ

೧. ಕರೆ ಬರಲಿ

ಎಲ್ಲಿ ಹೋದರೂ ಇದರ
ಕರಿನೆರಳು ಇದ್ದೇ ಇದೆ
ಮೃತ್ಯು ದೂರ ಎಂದಾಗ ಹತ್ತಿರ
ಬಂದಾಗ ಶ್ಯಾಮಲ ಕೋಮಲ
ಮತ್ತ ಮತ್ತೆ ಕಾಣುವ ಇಚ್ಛೆ.
ಆಯುಷ್ಯ ತುಂಬ ಡವಡವಿಸಿದ ಎದೆ
ಶಾಂತ ಯಾವ ಕಿರಿಕಿರಿಯೂ ಇಲ್ಲ
ಗದ್ದಲದ ಹೊರಾಂಗಣದಿಂದ
ಗರ್ಭಗುಡಿ ಹೊಕ್ಕಂತೆ. ಮಧ್ಯಾಹ್ನದ
ನಿಗಿನಿಗಿ ಕಿಚ್ಚಿನಿಂದ
ಕಣ್ಣು ಸಾಂತ್ವನಿಸುವ ಹೊನ್ನಪ್ರಭೆ
ಸೇರಿದಂತೆ. ಮುರಲಿನಾದ ಅದು

ಅದೇ ಅಭಯ, ಲಯ.
ಹಾಗೆ ಭಯವೇಕೆ ನನಗೆ
ಸಾವಿರ ಸೋಲುಗಳ ಕತ್ತಲಲ್ಲೂ
ಬೆಳಕ ಕಳಕೊಂಡಿಲ್ಲ. ಈಗ
ಈ ನೆಲದ ಬಾಡಿಗೆಯವಧಿ ಮುಗಿದಾಗ
ಖಾಲಿಮಾಡದೇ ಕೂಡುವದೇ
ನೆಪಗಳ ಜಪಮಾಲೆ ಸರಿಸುತ್ತ
ಮಾಲೀಕನು ಕೇಳುವವನೇ—

ಹೋಗುತ್ತೇನೆ—ತಣಿಸಿದ
ಸಸ್ಯ ದನ ಜನಗಳಿರಾ, ಹೊತ್ತ
ಬಸ್ಸು ರೈಲು ವಿಮಾನಗಳಿರಾ, ಉದ್ಧರಿಸಿದ
ಕಾವ್ಯ ಸಂಸ್ಕೃತಿ ಕಾಲೇಜುಗಳಿರಾ
ಬಾಂಬು ಹಂತಕ ಜಜ್ಜುಗಳಿರಾ
ಹೋಗುತ್ತೇನೆ—ಟಾ.... ಟಾ....
ಕರೆ ಬರುತ್ತದೆ.... ಬರಲಿ.

ಹೇಗೆ ಬರುವದೆಂದು ಹ್ಯಾಗೆ
ಹೇಳಲಿ ನಾನು ?
ಹಾರ್ನುಬಾರಿಸಿ ಬರುವದೇ ಮೃತ್ಯು
ಕರೆಗಂಟೆ ಒತ್ತಿ ಕರೆಯುವುದೇ ಮೃತ್ಯು
ಹಾಂ.... ಬರಬಹುದು—
ಹೂಮಾಲೆ ಹಿಡಿದು
ಅಹಮ್ಮಿನ ಅಜವಿಲಾಪಕ್ಕೆ ನಾಂದಿ
ಪ್ರಕೃತಿಯ ಮೋಹಾವೇಶದಲ್ಲಿ
ಶಾಪಶರವಾಗಿ
ಅಂತಃಶತ್ರುಗಳ ಕುಸ್ತಿ
ವಿಕ್ರಮದಲ್ಲಿ ವಕ್ರಬಾಣವಾಗಿ
ಆಲಸ್ಯದ ವಿಶ್ರಾಂತಿಯಲ್ಲಿ
ಶಬರ ಕೂರಂಬಾಗಿ
ಹೇಗೆ ಬಂದರೂ ಸರಿ
ನಾದದಲ್ಲಿದ್ದವಗೆ ಎಲ್ಲವೂ
ಮುರಲಿ. ಅದೂ ಬರಲಿ.

ಮೇ-ಜೂನ್ ೧೯೫೦/೪೫

೨. ಹೆದರಿಸದಿರು ಮೃತ್ಯು

ಹೆದರಿಸದಿರು ಮೃತ್ಯು; ನಿನ್ನ
ಕಪ್ಪುಕೋಡಿನ ಬಾವುಟ ಕಾಣುತ್ತದೆ
ಆಗಾಗ ಕೇಳುತ್ತಿದೆ ಘುರುಕಿ.
ನಿನ್ನ ದಂಡ ತಾಕಿ ಬಿದ್ದವರನ್ನು
ಕಂಡಿದ್ದೇನೆ ಮೈ ತಟ್ಟಿ. ನೀ ಬರುವದಂತೂ
ಖಂಡಿತ ಅಂತೆಯೇ ನಾ ಇದ್ದದ್ದೂ
ಖಂಡಿತ ಅಲ್ಲವೇ ?

ಚಿಮುಟೆಯಿಂಡ ಒಂದಡಿಪಿಂಡದ ಜೀವ
ಪಂಚಭೂತದ ಪೀಠಕ್ಕೆ ಕಾಲಿರಿಸಿದಾಗಲೇ
ಬದುಕು ಅಖಂಡಿತ. ಈ ಮಹಾಸತ್ಯಕ್ಕೆ
ದೇವದುಂಧುಭಿಗಳೂ ಮೊಳಗುತ್ತಿವೆ.
ಎದೆಹಾಲಧಾರೆಯಲಿ ಒಂದಡಿ ಸಾವಿರಮಡಿ
ಬೆಳೆದು ಹುರಿಮೀಸೆಯ ತರುಣ ಕಡಲ
ಲಂಘಿಸುತ್ತಾನೆ. ಎದೆಮನಬುದ್ಧಿಗಳಾಶ್ರಮದಲ್ಲಿ
ಧ್ಯಾನಸ್ಥನಾಗುತ್ತಾನೆ. ಉಷೆಯಿಂದ
ನಿಶೆಯನಕ ಅವನ ಧಾವಂತಮುದ್ರೆ
ಥಳಥಳಿಸುವವು ರಾತ್ರಿನಕ್ಷತ್ರಗಳಂತೆ
ಚಿಲ್ಲರೆ ಸತ್ಯಗಳು ನಾಚಿ ಮರೆಯಾಗುತ್ತಿವೆ ಈ
ಸ್ಥಾಯೀ ದೃಶ್ಯದ ನೆಳಲಲ್ಲಿ. ನೀ ಬರುವದು
ಅದೇ ನೆಳಲಿಂದ ಅಲ್ಲವೇ ಮೃತ್ಯು ?

ಹಾಗೆ ಹಿಂದೂ ಒಂದೆರಡು ಸಲ ಮುತ್ತಲು
ಯತ್ನಿಸಿದ್ದೆ. ಒದ್ದಾಡಿದ ಜೀವ ಮತ್ತೆ ಎದ್ದಿತ್ತು
ಆದ್ದರಿಂದ ಹೇಳುತ್ತೇನೆ—
ಈ ಮೈಯಲ್ಲಿ ರಕ್ತಕಣಕಣದ
ಸಂಜೀವನೀ ಬಿಂದು ಸೋರಿಹೋದಾಗ
ಕರೆಗಂಟೆ ಬಾರಿಸು. ನಿನ್ನೊಡನೆ ನಗುತ್ತ
ಬರುವೆ ನಿನ್ನಪಂಚಭೂತಗಳ ಬೂದಿಸೀಮೆಗೆ—
ಫಕ್ಕನೆ ಬಂದು ಎಳೆದರೂ
ಎವೆ ಮುಚ್ಚುವಾಗ ಆ ಸ್ಥಾಯೀದೃಶ್ಯದ ಬೆರಗು
ಕಣ್ಣತುಂಬಾ.

ಕರ್ನಾಟಕ ಸಾಹಿತ್ಯ ಅಕಾಡೆಮಿಯ ಪ್ರಕಟಣೆಗಳು

1	ಸಣ್ಣಕತೆ 1987	ರೂ. 10
2	ಕವಿತೆ 1984	3
3	ವಿಮರ್ಶೆ 1988	10
4	ಕವಿತೆ 1987	5
5	ಕವಿತೆ 1988	7
6	ಸಾಹಿತ್ಯ ವಿಮರ್ಶೆ 1987	15
7	ಪ್ರಬಂಧ 1987	15
8	ಮಕ್ಕಳ ಸಾಹಿತ್ಯ 1987	5
9	ಮಕ್ಕಳ ಸಾಹಿತ್ಯ 1988	5
10	ಯುವ ಕಾವ್ಯ–1	5
11	ಯುವ ಕಾವ್ಯ–2	5
12	ದಶವಾರ್ಷಿಕ ಕವಿತೆ (ಕನ್ನಡ)	12
13	ದಶವಾರ್ಷಿಕ ಇಂಗ್ಲಿಷ್ ಕವಿತೆ	10
14	ದಶವಾರ್ಷಿಕ ಪ್ರಬಂಧ	16
15	ದಶವಾರ್ಷಿಕ ವಿಮರ್ಶೆ	16
16	ದಶವಾರ್ಷಿಕ ಸಣ್ಣಕತೆ	16
17	ರಾಷ್ಟ್ರಪ್ರೇಮಿ ಕವಿ ಇಕ್ಬಾಲ್	5
18	ರಾಷ್ಟ್ರೀಯತೆ ಮತ್ತು ಆಧುನಿಕ ಕನ್ನಡ ಸಾಹಿತ್ಯ	8
19	ಟಿ.ಎಸ್. ಎಲಿಯಟ್ ಮತ್ತು ಕನ್ನಡ ನವ್ಯ ಕಾವ್ಯ ಸಂದರ್ಭ	12
20	ಹೊಸಗನ್ನಡ ಸಾಹಿತ್ಯದಲ್ಲಿ ಮಹಾಕಾವ್ಯ ಪರಂಪರೆ	ರೂ. $6\frac{1}{2}$
21	ಕನ್ನಡದಲ್ಲಿ ವಿನೋದ ಸಾಹಿತ್ಯ	8
22	ಸಾಹಿತ್ಯ ಮತ್ತು ಸಾಮಾಜಿಕ ನಿಲುವುಗಳು	8
23	ಆಧುನಿಕ ಕನ್ನಡ ಕಾವ್ಯ ಉತ್ತರ ಕರ್ನಾಟಕ ಕೊಡುಗೆ	12
24	ಕನ್ನಡ ಮರಾಠಿ ಸಾಹಿತ್ಯ ಬಾಂಧವ್ಯ	6
25	ಸ್ವಾತಂತ್ರ್ಯ ಸಮರದ ಗೇಯ ಗೀತೆಗಳು	10
26	ಕೇರಳದಲ್ಲಿ 15 ದಿನಗಳು	5
27	ಅಸ್ತಿತ್ವವಾದ	10
28	ದೇಶೀವಾದ	5
29	ವಾಸ್ತವತಾವಾದ	5
30	ಪ್ರಜ್ಞಾಪ್ರವಾಹ ತಂತ್ರ	5
31	ಸಾಹಿತ್ಯ ವಿಮರ್ಶೆ	10
32	ಕನ್ನಡ ಸಾಹಿತ್ಯ ಮತ್ತು ಪ್ರತಿಭಟನೆ	15
33	ಮುಳಿಯ ಶತಮಾನ ಸ್ಮರಣೆ	8
34	ಜನ–ಗಣ–ಮನ	10
35	ಶಾಲ್ಮಲೆಯಿಂದ ಗೋದಾವರಿಯವರೆಗೆ	10
36	ಪ್ರಬಂಧ 1988	15

ನೂರು ರೂಪಾಯಿಗೆ ಮೇಲ್ಪಟ್ಟು ಮೊತ್ತಗಳಿಗೆ ಪುಸ್ತಕಗಳನ್ನು ಖರೀದಿಸಿದರೆ ಶೇ. 15ರಷ್ಟು ರಿಯಾಯಿತಿಯನ್ನು ನೀಡಲಾಗುವುದು, ಅಂಚೆಯಲ್ಲಿ ಕಳಿಸಿಕೊಡಲು ಅಂಚೆ ವೆಚ್ಚ ಪ್ರತ್ಯೇಕ.

"ಅನಿಕೇತನ" ಪತ್ರಿಕೆಗೆ ಚಂದಾದಾರರಾಗಿರಿ.

ಕನ್ನಡ ಮತ್ತು ಇಂಗ್ಲಿಷ್ ಸಂಚಿಕೆಗಳಿಗೆ ಪ್ರತ್ಯೇಕ ಚಂದಾಹಣ

ವಾರ್ಷಿಕ ಚಂದಾ ರೂ. 10–00 ಆಜೀವ ಚಂದಾ ರೂ. 100–00

ರಿಜಿಸ್ಟ್ರಾರ್, ಕರ್ನಾಟಕ ಸಾಹಿತ್ಯ ಅಕಾಡೆಮಿ

ನನ್ನ ನೆನಪುಗಳು

ಆನಂದಕಂದ

ಮೂಡಲಗಿಯಲ್ಲಿ ಕಂಡದ್ದು ಮತ್ತೇನು ?

ನಾನು ಮೂಡಲಗಿಯಲ್ಲಿದ್ದಾಗ ಕಣ್ಣಾರೆ ಕಂಡ ಒಂದು ಸಂಗತಿಯನ್ನು ಹೇಳಲೇ ಬೇಕಾಗಿದೆ. ಅದು ನನ್ನ ಎಳೆಯತನದ ಸಾಹಿತ್ಯ, ಸಂಸ್ಕೃತಿಗಳ ವಿಕಾಸದ ಒಂದು ಮಹತ್ವದ ಅಂಗವೆಂದು ನಾನು ಭಾವಿಸಿದ್ದೇನೆ. ಆಗ ಸಾಹಿತ್ಯ-ಸಂಸ್ಕೃತಿಗಳ ಸ್ಪಷ್ಟ ವಾದ ಕಲ್ಪನೆ ನನಗೆ ಇರಲಿಲ್ಲವಾದರೂ ನನಗೆ ತಿಳಿಯದಂತೆಯೇ ಆ ಘಟನೆಯು ನನ್ನ ಮೇಲೆ ಒಂದು ಬಗೆಯ ಸಾಹಿತ್ಯ-ಸಂಸ್ಕೃತಿಗಳ ಪರಿಣಾಮುವನ್ನುಂಟು ಮಾಡಿತು.

ರಂಗಬೋಧ ಸ್ವಾಮಿಗಳ ಹೆಸರನ್ನು ಈ ಮೊದಲೇ ನಾನು ತಿಳಿಸಿರುವೆನಷ್ಟೆ. ಅವರ ಮನೆತನ ಅನೇಕ ಮಹಾಪುರುಷರ ಜನ್ಮದಿಂದ ಹೆಸರನ್ನು ಪಡೆದುದು. ಅವರು ದಮ್ಮಿನ ರೋಗಕ್ಕೆ ಔಷಧಿಯೆಂದೋ ಅಥವಾ ಹತ್ತಿದ ಚಟವೆಂದೋ ಸುರಾಪಾನ ವನ್ನು ಮಾಡುತ್ತಿದ್ದರು. ಒಮ್ಮೊಮ್ಮೆ ಅದರ ಪರಿಣಾಮವು ಬಹಿರಂಗವಾಗಿಯೂ ಕಾಣುತ್ತಿದ್ದಿತು. ಆಗ ಅವರು ರೌದ್ರಾವತಾರಿಗಳು. ಮುಂದೆ ಕಂಡವರನ್ನು ಎಂತಹ ಮಾತಿನಿಂದಲೂ ಮುಖದ ನೀರನ್ನು ಇಳಿಸುವರು. ಆದರೂ ಬಾಲಪ್ರಹ್ಲಾದನನ್ನು ಪ್ರೀತಿಯಿಂದ ಕಂಡ ನರಸಿಂಹಾವತಾರಿಯಂತೆ ನನ್ನನ್ನು ಕಂಡು ಎಂತಹ ಕೋಪ ದಲ್ಲಿದ್ದರೂ ಶಾಂತರಾಗಿ ನನ್ನನ್ನು ಹತ್ತಿರ ಕರೆದು ಕುಳ್ಳಿರಿಸಿಕೊಳ್ಳುತ್ತಿದ್ದರು. ಅವರು ಆಡಿದ ಮಾತುಗಳು, ಬೈದ ಬೈಗಳು, ವರದಂತೆಯೂ; ಶಾಪದಂತೆಯೂ ಕಾರ್ಯ ಮಾಡುವುದೆಂದು ಜನರು ಭಾವಿಸಿದ್ದರು. ಎಂತಲೇ ಅವರಿಂದ ಸಿಟ್ಟಿನ ಮಾತನ್ನು ಕೇಳುವದೆಂದರೆ ಜನರೆಲ್ಲರೂ ಒಳಗೊಳಗೇ ನಡುಗುತ್ತಿದ್ದರು. ಅವರ ಒಳ್ಳೆಯ ಮಾತು ತಮಗೆ ಒಳ್ಳೆಯದನ್ನು ಮಾಡುವದೆಂದು ನಂಬಿದ್ದರು. ಅವರ ಪೂರ್ವಜ ರಾದ ಅನೇಕ ಜನ ಸ್ವಾಮಿಗಳ ಸಮಾಧಿಗಳು ಒಂದೆಡೆಯಲ್ಲಿ ಚೌಕಾದ ಸುತ್ತು-ಗೋಡೆ ಯಿಂದ ಕಟ್ಟಲ್ಪಟ್ಟ ಚೌಕ ಕಟ್ಟೆಯೊಂದರ ಮೇಲೆ ಅಲ್ಲಲ್ಲ ಹರಡಿಕೊಂಡಿವೆ. ಈ

ಸಮಾಧಿಗಳಿದ್ದ ಪ್ರದೇಶವನ್ನು 'ಊರ ಹೊರಗಿನ ಮಠ' ಎಂದು ಎಲ್ಲರೂ ಕರೆಯುವರು. ಈ ಮಠಕ್ಕೆ ದಿನದಿನವೂ ಹೋಗಿ ನಮಸ್ಕಾರ ಮಾಡಿ ಬರುವ ಭಕ್ತರಿಗೇನೂ ಕಡಿಮೆಯಿರಲಿಲ್ಲ. ಮೊದಲ ಬೋಧಸ್ವಾಮಿಗಳು ಶಿವಬೋಧರು. ಅವರ ಪುಣ್ಯತಿಥಿಯ ಉತ್ಸವವು ಮೂರು ದಿನಗಳವರೆಗೆ ನಡೆದು ಒಂದು ಜಾತ್ರೆಯಂತೆ ಅಲ್ಲಿ ಜನಸಂದಣಿ ಇರುತ್ತಿದ್ದಿತು. ವೈಶಾಖ ಶುದ್ಧ ದಶಮಿಯಿಂದ ದ್ವಾದಶಿಯವರೆಗೆ ಆ ಉತ್ಸವ ವಿಜೃಂಭಣೆಯಿಂದ ನಡೆಯುತ್ತಿದ್ದಿತು.

ಆ ಉತ್ಸವಕ್ಕೆಂದೇ ಕರ್ನಾಟಕ, ಮಹಾರಾಷ್ಟ್ರಗಳಿಂದ ಅನೇಕ ಜನ ಪ್ರಸಿದ್ಧ ಸಂಗೀತಗಾರರು ದಯಮಾಡಿಸುತ್ತಿದ್ದರು. ಕರ್ನಾಟಕದಲ್ಲಿಯ ಹರಿಕೀರ್ತನಕಾರರು ನಾಲ್ಕೆಂಟು ಜನರು ಬರುತ್ತಿದ್ದರು. ಅಲ್ಲದೆ ಎಲ್ಲ ಜಾತಿಯ ಭಕ್ತರೂ ಬೇರೆ ಬೇರೆ ಊರುಗಳಿಂದ ಹಿಂಡು ಹಿಂಡಾಗಿ ಬರುತ್ತಿದ್ದರು. ಎಲ್ಲ ಜನರೂ ಸೇರಿದರೆ ಸುಮಾರು ನಾಲ್ಕೈದು ಸಾವಿರ ಜನರಷ್ಟು ಆಗಬಹುದು. ದಶಮಿಯಿಂದ ದ್ವಾದಶಿಯವರೆಗೆ ಪ್ರಸಾದದ ಕಾರ್ಯಕ್ರಮವು ನಡೆಯುವುದು. ದಶಮಿಯೇ ಆ ಶಿವಬೋಧಸ್ವಾಮಿಗಳ ಪುಣ್ಯತಿಥಿಯ ದಿವಸ. ಅಂದು ಮಧ್ಯಾಹ್ನ ೧೨ ಘಂಟೆಗೆ ಊರೊಳಗಿನ ಮಠದಿಂದ ಪಲ್ಲಕ್ಕಿಯು ವಾದ್ಯ–ವೈಭವಗಳೊಂದಿಗೆ ಹೊರಟು ಅನೇಕ ಪಾತ್ರದ ಸ್ತ್ರೀಯರ ಕುಣಿತದೊಂದಿಗೆ ಹೊರಗಿನ ಮಠಕ್ಕೆ ಹೋಗುವರು. ಅಷ್ಟರಲ್ಲಿಯೇ ಅಲ್ಲಿ ವೈದಿಕರ ನೆರವಿ ನೆರೆದು ಶಿವಬೋಧ ಸ್ವಾಮಿಗಳ ಸಮಾಧಿಗೂ ಬೇರೆ ಸಮಾಧಿಗಳಿಗೂ ರುದ್ರಾಭಿಷೇಕದ ಉತ್ಸವವನ್ನು ನಡೆಸಿ, ಮುಗಿಸಿರುವರು. ಆ ರುದ್ರ–ಸೂಕ್ತದ ಅನೇಕರು ಕೂಡಿ ಹೇಳುವ ವೇದ–ಮಂತ್ರವು ಭಾವುಕರ ಹೃದಯವನ್ನು ಅರಳಿಸುವುದು. ಅದು ಮುಗಿದು ಹೋದಾಗ ಆ ಪಲ್ಲಕ್ಕಿಯ ಉತ್ಸವವು ಅಲ್ಲಿಗೆ ದಯಮಾಡಿಸುವುದು. ಬಳಿಕ ಪಲ್ಲಕ್ಕಿಯನ್ನು ಒಂದೆಡೆಯಲ್ಲಿ ಅಲಂಕರಿಸಿದ ಚಪ್ಪರದೊಳಗೆ ಪ್ರತಿಷ್ಠಾಪಿಸಿ ಅದಕ್ಕೂ ಪೂಜಾದಿಗಳನ್ನು ಸಲ್ಲಿಸುವರು.

ದಶಮಿಯ ದಿನದ ಪ್ರಸಾದವು ಅನ್ನ, ಸಾರು, ಹೋಳಿಗೆ, ತುಪ್ಪ, ಸಕ್ಕರೆ ಇವುಗಳಿಂದ ಕೂಡಿರುವುದು. ಅಲ್ಲದೆ ಕಾಯಿಪಲ್ಯೆ, ಉಪ್ಪಿನಕಾಯಿ, ಚಟ್ನಿ, ಕೋಸಂಬರಿ ಇವುಗಳೂ ಇರುವುವು. ಮಠದ ಪಶ್ಚಿಮದ ಗೋಡೆಗೆ ಹೊಂದಿ ಒಂದು ಅಡಿಗೆಯ ಮನೆಯಿದೆ. ಅಲ್ಲಿಯೇ ಸಮೀಪದಲ್ಲಿ ನೂರಾರು ಕೊಡ ನೀರು ಹಿಡಿಯುವ ಗಚ್ಚಿನ ಹೌದುಗಳಿವೆ. ಇವುಗಳಲ್ಲದೆ ಕಬ್ಬಿಣದ ತಗಡಿನ ದೊಡ್ಡ ದೊಡ್ಡ ಪಾತ್ರೆಗಳಲ್ಲಿಯೂ ನೀರು ತುಂಬಿರುವುದು. ಎಲ್ಲವನ್ನೂ ಜಾತ್ರೆಗೆ ಬಂದ ಭಕ್ತಜನರೇ ತುಂಬುವರು. ಅಡಿಗೆಯ ಮನೆ ಮುಂಗಡೆಗೆ ಒಂದು ಏಳು ಅಂಕಣದ ವಿಸ್ತಾರವಾದ ಭೋಜನ–ಶಾಲೆಯಿದ್ದು, ಅದು ಮಡಿಯಲ್ಲಿ ಊಟಮಾಡುವ ವೈದಿಕ ಬ್ರಾಹ್ಮಣ

ರಿಗಾಗಿ ಮೀಸಲಾಗಿರುವುದು. ಮಿಕ್ಕ ಜನರಿಗೆಲ್ಲ ಸಮಾಧಿಗಳಿರುವ ಕಟ್ಟೆಯ ಮೇಲೆ ರಚಿಸಲಾದ ಗಾರೆಯ ನೆಲವೇ ಭೋಜನಶಾಲೆಯಾಗಿರುವುದು.

ಮೂರು ಗಂಟೆಗೆ ಭೋಜನವು ಪ್ರಾರಂಭವಾಯಿತು. ಅಂದಿನ ಊಟದಲ್ಲಿಯ ವೈಶಿಷ್ಟ್ಯವೆಂದರೆ ಘಟಪ್ರಭೆಯ ತೀರದ ಹಳ್ಳಿಗಳಲ್ಲಿ ಸಿಕ್ಕುವ ಕಂಪಾದ ತುಪ್ಪ. ತುಪ್ಪವನ್ನು ಸೂರಾಡುವಂತೆ ಬಡಿಸಲಾಗುವುದು. ಹೋಳಿಗೆಗೆ ಈ ತುಪ್ಪ-ಸಕ್ಕರಿಗಳನ್ನು ಹಚ್ಚಿಕೊಂಡು ತಿನ್ನುವುದೇ ಈ ಊಟದ ವಿಶೇಷ. ಎಲ್ಲರೂ ತೃಪ್ತರಾಗುವದೆಂದರೆ ನಾಲ್ಕೈದು ಪಂಕ್ತಿಗಳು ಒಂದರ ಹಿಂದೆ ಒಂದರಂತೆ ಕುಳಿತುಕೊಳ್ಳುವುವು. ಕೊನೆಯ ಪಂಕ್ತಿ ಅಡಿಗೆಯ ಜನ, ಬಡಿಸುವ ಜನ, ಉಳಿದ ಜನ ಇವರಿಂದ ಕೂಡಿರುವುದು. ಎಲ್ಲವೂ ಮಠದ ವೆಚ್ಚದಿಂದಲೇ ಈ ಭೋಜನ ಸಮಾರಂಭ ನಡೆಯುವುದು.

ಸ್ವಾಮಿಗಳಿಗೆ ಯಾವುದಕ್ಕೂ ಬಡತನವಿಲ್ಲ. ಮಠದ್ದೇ ಆದ ಹೊಲದ ಉತ್ಪನ್ನವು ಸಾಕಷ್ಟು ಇದೆ. ಆಮೇಲೆ ಹಳ್ಳಿಹಳ್ಳಿಗಳ ಭಕ್ತರೂ ಬೇಕಾದಷ್ಟು ಕಾಣಿಕೆಯನ್ನು ಸಲ್ಲಿಸುವರು. ಅಲ್ಲದೆ ಉತ್ತರ ಕರ್ನಾಟಕದ ಬೇರೆ ಬೇರೆ ಸಂಸ್ಥಾನಿಕರಿಂದ ಸಂಭಾವನೆಗಳೂ ಬರುವುವು. ಎಂತಲೇ ಅವರು ತುಂಬುಗೈಯಿಂದ ಆ ಪುಣ್ಯತಿಥಿಗಾಗಿ ವೆಚ್ಚ ಮಾಡುವರು. ಈ ಊಟದ ಪಂಕ್ತಿಗಳೆಲ್ಲ ಮುಗಿಯುವ ಸಮಯವೆಂದರೆ ಸಂಜೆಯ ಆರು ಗಂಟೆಗಳಾಗುವುವು. ಆಮೇಲೆ ಮಂಗಳಾರತಿಯಾದ ಮೇಲೆ ಭಕ್ತರಿಂದ ಸಕ್ಕರೆ ಹಂಚುವ ಕಾರ್ಯಕ್ರಮ ಜರುಗುವುದು. ಒಬ್ಬರಿಗೆ ಒಂದು ಚಿಮಟಿಗೆಯಂತೆ ಸಕ್ಕರೆ ಹಾಕಿದರೂ ಒಬ್ಬೊಬ್ಬರ ಕೈವಸ್ತ್ರದಲ್ಲಿ ಕೊನೆಗೆ ಏಳೆಂಟು ಸೇರಿನಷ್ಟಾದರೂ ಸಕ್ಕರೆಯಾಗುವುದು. ನಾವು ಮೂವರು ಅಣ್ಣತಮ್ಮಂದಿರು ಸಮಾಧಿ ಎದುರಿನ ಚಪ್ಪರದಲ್ಲಿಯೇ ಸಕ್ಕರೆ ಹಂಚುವ ವೇಳೆಯಲ್ಲಿ ಅದು ಮುಗಿಯುವವರೆಗೂ ಕುಳಿತಿದ್ದೆವು. ಮನೆಗೆ ಹೋಗಿ ಆ ಮೂವರ ಸಕ್ಕರೆಯನ್ನು ಕೊಟ್ಟಾಗ ಅದು ಎರಡು ಧಡೆಯಷ್ಟು ಸಕ್ಕರೆಯಾಯಿತು. ಹಂಚಿದ ಸಕ್ಕರೆಯಲ್ಲಿ ಅರ್ಧದಷ್ಟು ಮಠಕ್ಕೆ ಸಲ್ಲಿಸಲಾಗುವುದು. ಸಕ್ಕರೆ ಹಂಚುವ ಜನರು ಸಾವಿರ ಸಂಖ್ಯೆಯಲ್ಲಿರುವರು. ಇಷ್ಟಾದ ಮೇಲೆ ಸ್ವಾಮಿಗಳಿಗೆ ಆ ಹೋಳಿಗೆಗೆ ಸಕ್ಕರೆ ಹಾಕುವುದಕ್ಕೆ ಕೊರತೆ ಎಂತಾಗುವುದು ? ಉಳಿವ ಸಕ್ಕರೆಯನ್ನು ಮಠದಲ್ಲಿ ಸಂಗ್ರಹಿಸಿ ಇಡಲಾಗುತ್ತಿತ್ತು. ಆಗ ಸಿಕ್ಕುವ ಸಕ್ಕರೆಯೆಂದರೆ ಜಾವಾದ ಮುದ್ದಿ ಸಕ್ಕರೆ. ತುಪ್ಪ ಕಲಸಿದಂತೆ ತಿಂದರೆ ರುಚಿಯಾಗಿರುವುದು.

ಈ ಸಕ್ಕರೆ ಹಂಚುವ ಕಾರ್ಯವು ಮುಗಿದ ಮೇಲೆ ಸಮಾಧಿಯ ಮುಂದಿನ ಚಪ್ಪರದಲ್ಲಿ ಪ್ರಸಿದ್ಧ ಸಂಗೀತಗಾರರ ಸಭೆಯು ನಡೆಯುವುದು. ಎಲ್ಲವೂ ಉತ್ತರ

ಮಾರ್ಗದ ಸಂಗೀತ. ಕೇಳುವುದಕ್ಕೆ ಹಿತವಾಗಿಯೇ ಇರುತ್ತಿತ್ತು. ಪುಣ್ಯತಿಥಿಯ ಉತ್ಸವಕ್ಕಾಗಿ ವಾದ್ಯ-ವಾದನಕಾರರೂ ಅನೇಕ ಜನ ಬಂದಿರುತ್ತಿದ್ದರು. ಅವರಲ್ಲಿ ತಬಲಾ, ಮೃದಂಗ, ಹಾರ್ಮೋನಿಯಂ, ಸಾರಂಗಿಗಳನ್ನು ನುಡಿಸುವ ವಾದ್ಯ-ವಾದನ ಕಾರರು ಬೇರೆ ಬೇರೆಯಾಗಿಯೇ ಇದ್ದರು. ಇವರೆಲ್ಲ ಆ ಸಂಗೀತಸಭೆಯ ಸಂಗೀತ ಗಾರರಿಗೆ ಸಹಕಾರಿಗಳಾಗಿರುತ್ತಿದ್ದರು. ಸಂಗೀತ ಸಭೆಯು ಮುಗಿದೊಡನೆ ಮಠದ ಸುತ್ತಲೂ ಪಲ್ಲಕ್ಕಿ ಸೇವೆಯ ಪ್ರದಕ್ಷಿಣೆ ನಡೆಯುವುದು. ಆಗ ನಡುನಡುವೆ ಪಲ್ಲಕ್ಕಿಯು ನಿಂತು, ಅಲ್ಲಿ ಬೇರೆ ಬೇರೆ ದೇವರ-ಸ್ತೋತ್ರಗಳನ್ನು ಹಾಡುವ ಹಾಡುಗಾರರಿಗೆ ಅವ ಕಾಶವನ್ನು ಕೊಡುತ್ತಿದ್ದಿತು. ಕನ್ನಡ ಮರಾಠಿ ಎರಡೂ ಭಾಷೆಯ ಹಾಡುಗಳವು. ಪಲ್ಲಕ್ಕಿ ಸೇವೆಯು ಒಂದು ಸಂತೋಷದ ಸಮಯವೇ ಆಗಿದ್ದಿತು. ಸಂಗೀತ ಸೇವೆ ಯವರಿಂದ ಭಕ್ತ ಜನರ ಕಿವಿಗಳೂ ತಣಿಯುತ್ತಿದ್ದವು.

ಪಲ್ಲಕ್ಕಿಯು ಪ್ರದಕ್ಷಿಣೆ ಹಾಕಿ ಮೊದಲಿದ್ದ ಸ್ಥಳದಲ್ಲಿ ಪ್ರತಿಷ್ಠಾಪನೆಗೊಂಡ ಮೇಲೆ ಹರಿದಾಸರ ಕೀರ್ತನೆ ಪ್ರಾರಂಭವಾಗುತ್ತಿದ್ದಿತು. ಒಬ್ಬೊಬ್ಬರೇ ಹರಿದಾಸರು ಬಂದು ತಮ್ಮ ತಮ್ಮ ಪರಿವಾರದೊಂದಿಗೆ ಕೀರ್ತನೆ, ಕಥಾಕಾಲಕ್ಷೇಪವನ್ನು ಮಾಡಿ ಹೋಗುತ್ತಿದ್ದರು. ಒಂದು ಮೋಜಿನ ಸಂಗತಿ. ಕೀರ್ತನಕಾರರು ಕನ್ನಡಿಗರೇ ಆದರೂ ವೇಷಭೂಷಣಗಳನ್ನು ಬೇರೆಯಾಗಿಯೇ ಮಾಡಿಕೊಳ್ಳುತ್ತಿದ್ದರು. ಅಂಚಿನ ಧೋತರ, ಕಂಠೀ ಕಮಾನಿನ ಉದ್ದಂಗಿ, ತಲೆಯ ಮೇಲೆ ಮರಾಠಿಜನರ ಮುಂಡಾಸ (ಪಾಗೋಟೆ). ಕೀರ್ತನಕಾರರ ವೇಷಭೂಷಣಗಳು ವಿದೇಶೀಯವಾಗಿದ್ದವಷ್ಟೇ ಅಲ್ಲ, ಅವರು ಹೇಳುವ ಮಂಗಲಾಚರಣ ಪದ್ಯಗಳು ಮರಾಠಿ ಭಾಷೆಯವೇ ಆಗಿರುತ್ತಿದ್ದವು. ಅದರಿಂದಲೇ ಅವರ ಕೀರ್ತನದ ಪೂರ್ವರಂಗವು ಪ್ರಾರಂಭವಾಗುವುದು. ಈ ಪೂರ್ವ ರಂಗದಲ್ಲಿ ಬಳಸುವ ಅಭಂಗ, ಆರ್ಯಾ, ಓವಿ, ಸಾಕಿ, ದಿಂಡಿ ಮೊದಲಾದ ಮರಾಠಿ ದೇಶದ ಪದ್ಯಗಳಿಂದಲೇ ತುಂಬಿರುತ್ತಿದ್ದವು. ಮುಂದೆ ಉತ್ತರ ರಂಗದಲ್ಲಿ ಹರಿ ಕಥೆಯು ಪ್ರಾರಂಭವಾಗುವುದು. ಆ ಕಥೆಯು ಬೆಳೆಯುವ ಪದ್ಯಗಳು ಅನ್ಯ ದೇಶೀಯವೇ ಆಗಿರುತ್ತಿದ್ದವು. ಅದನ್ನು ನೋಡಿದ ನನಗೆ ಅದೇಕೋ ಏನೋ ಬಗೆಯ ವ್ಯಸನವು ತಲೆದೋರಿತು. ಗೋಕಾವಿಯ ಅನಂತಾದ್ರೀಶ ಕವಿಯ ಧ್ರುವ ಚರಿತ್ರ, ಪ್ರಹ್ಲಾದ ಚರಿತ್ರ, ವೆಂಕಟೇಶ-ಪಾರಿಜಾತ, ಶಿವ-ಪಾರಿಜಾತ ಮೊದಲಾದ ಕನ್ನಡದ ಹಾಡುಗಬ್ಬಗಳೂ, ಭೀಮೇಶ ಕೃಷ್ಣ, ಹೆಳವನಕಟ್ಟೆ ಗಿರಿಯಮ್ಮ ಮೊದ ಲಾದ ಕವಯಿತ್ರಿಯರ ಕಥನ ಸಾಂಗತ್ಯಗಳೂ ಕನ್ನಡದಲ್ಲಿ ಸಾಕಷ್ಟಿರುವಾಗ ಈ ಹರಿ ದಾಸರು ತಮಗೆ ಅವು ಗೊತ್ತಿಲ್ಲದಂತೆಯೇ ವರ್ತಿಸುತ್ತಾರಲ್ಲ ಎನಿಸಿತು. ಮೊದಲು ಕೀರ್ತನವನ್ನು ಪ್ರಾರಂಭಿಸಿದವರು ಕಾಖಂಡಿಕೆಯ ಹರಿದಾಸರು. ಅವರು 'ಪಿಡಿಯೆನ್ನ

ಕೈಯ ರಂಗಯ್ಯ' ಎಂಬ ಜಗನ್ನಾಥದಾಸರ ಕೀರ್ತನೆಯಿಂದ ತಮ್ಮ ಹರಿಕಥೆಯನ್ನು ಪ್ರಾರಂಭಿಸಿದರಾದರೂ ಕಥೆಯುದ್ದಕ್ಕೂ ಮರಾಠಿ ಪದ್ಯಗಳೇ ಕೇಳುತ್ತಿದ್ದವು. ಇಮ್ಮಡಿ ಕೆಲಸ. ಮರಾಠಿ ಪದ್ಯಗಳನ್ನು ಹೇಳಿ, ಆಮೇಲೆ ಅದರ ಅರ್ಥವನ್ನು ಕನ್ನಡದಲ್ಲಿ ತಿಳಿಸಿಹೇಳುವುದು ಇಮ್ಮಡಿ ವೇಳೆಯ ವೆಚ್ಚವಲ್ಲವೇ ? ಈ ಕೀರ್ತನೆಗಳಿಂದ ನಾನು ಮನೋರಂಜನವನ್ನು ಪಡೆದೆನಾದರೂ ಕನ್ನಡ ಕಾವ್ಯಗಳ ಪರಿಚಯವಿಲ್ಲದ ಆ ಹರಿದಾಸರನ್ನು ಕಂಡು ಕಳವಳವೆನಿಸಿತು.

ಅಂದು ರಾತ್ರಿಯೆಲ್ಲವೂ ಜಾಗರಣೆ. ಬೇರೆ ಬೇರೆ ಹರಿದಾಸರ ಕಥೆಗಳಿಂದ ಅಂದು ಬೆಳಗನ್ನು ಕಂಡೆವು. ಅಂದು ಬಂದ ಗೋಠೆ, ತಲಸಂಗ, ಬದರಿ, ಕಾಖಂಡಿಗೆ ಮೊದಲಾದ ಊರುಗಳ ಹರಿದಾಸರು ಅಂದಿನ ರಾತ್ರಿಯನ್ನು ಕಳೆಯಲು ತಮ್ಮ ಕೀರ್ತನೆಗಳಿಂದ ಸಹಾಯ ಮಾಡಿದರು. ಎಲ್ಲರೂ ಅನ್ಯ ದೇಶೀಯ ಭಾಷೆಗಳ ಪದ್ಯಗಳಲ್ಲಿಯೇ ತಮ್ಮ ಹರಿಕಥೆಯನ್ನು ಮುಂದುವರೆಸಿದುದು ನನಗೆ ಅಚ್ಚರಿಯುಂಟು ಮಾಡಿತು.

ಮರುದಿನ ಏಕಾದಶಿ. ಆದರೆ ಆ ಮಠದ ಸ್ವಾಮಿಗಳು ಸ್ಮಾರ್ತ ಸಂಪ್ರದಾಯದವರಾದುದರಿಂದ ಭಕ್ತರಾರೂ ಏಕಾದಶಿಗೆ ಮಹತ್ವವನ್ನು ಕೊಡುತ್ತಿರಲಿಲ್ಲ. ಆದರೆ ಊಟದ ಪದಾರ್ಥಗಳಲ್ಲಿ ಅಲ್ಪ ಸ್ವಲ್ಪ ಬದಲಾವಣೆ ಕಂಡು ಬರುತ್ತಿತ್ತು. ಅಂದಿನ ಸಮಾಧಿಗಳ ಪೂಜಾ-ವಿಧಿಯೆಲ್ಲ ಮುಗಿದ ಮೇಲೆ ಪ್ರಸಾದದ ಪಂಕ್ತಿಗಳು ನಡೆದವು. ಅಂದು ಹೋಳಿಗೆಯೂಟಕ್ಕೆ ಬದಲಾಗಿ ಗೋಧಿಯ ರೊಟ್ಟಿ, ಉತ್ತಮವಾದ ಬೆಲ್ಲ, ತುಪ್ಪಗಳು ವಿಶೇಷ ತಿನಿಸಾಗಿ ಕಂಡವು. ಎರಡನೆಯ ದಿನವೂ ಸಂಗೀತ ಸಭೆ, ಹರಿಕಥೆ ಕಾಲಕ್ಷೇಪಗಳಿಂದ ರಾತ್ರಿಯನ್ನು ಕಳೆದಾಯಿತು. ಮೂರನೆಯ ದಿನವೇ ಕೊನೆಯ ದಿನ. ಅಂದು ವಿಶೇಷ-ಪೂಜೆಗಳು ಸಮಾಧಿಗೆ ನಡೆದವು. ನಿತ್ಯದ ಹೋಳಿಗೆ-ತುಪ್ಪದ ಸೂರಾಟದ ಭೋಜನ ಸಮಾರಂಭವು ಜರುಗಿತು. ಸಾಯಂಕಾಲ ಪಲ್ಲಕ್ಕಿಯ ಉತ್ಸವವು ನಡೆದು ಅನೇಕ ಬಗೆಯ ವಾದ್ಯ-ವೈಭವಗಳೊಂದಿಗೂ, ಸೂಳೆಯರ ಮೇಳದ ಸಂಗೀತ-ನಾಟ್ಯಗಳೊಂದಿಗೂ ಪಲ್ಲಕ್ಕಿಯ ಮೆರವಣಿಗೆ ಹೊರಟು ಅದು ಊರೊಳಗಿನ ಮಠಕ್ಕೆ ಮರಳಿ ಬಂದಿತು. ಸಂಜೆಯ ಮೂರು ಘಂಟೆಯ ಪ್ರಸಾದದ ಮೂಲಕ ಯಾರ ಹೊಟ್ಟೆಯೂ ಹಸಿದಿರಲಿಲ್ಲ. ಪಲ್ಲಕ್ಕಿಯನ್ನು ಆ ಚೌಕಿನ ಪಡಸಾಲೆಯಲ್ಲಿ ಪ್ರತಿಷ್ಠಾಪಿಸಿ ಬೇರೆ ಬೇರೆ ಸಂಗೀತಗಾರರು ತಮ್ಮ ಸಂಗೀತ-ನೈಪುಣ್ಯವನ್ನು ಪ್ರದರ್ಶಿಸಿದರು. ಸ್ವಾಮಿಗಳ ಕಡೆಯಿಂದ ಅವರಿಗೆಲ್ಲ ಸಂಭಾವನೆಯು ಸಂದಾಯವಾಯಿತು. ಆಮೇಲೆ ಹರಿಕಥೆ ನಡೆದು ಮೂರು ದಿನಗಳ ಮಹೋತ್ಸವವು ಮುಗಿದಂತಾಯಿತು. ಈ ಪುಣ್ಯತಿಥಿಯನ್ನು ಮೊದಲು ನೋಡಿದ ಜನರಿಂದ ಹೊರ

ಬೀಳುವ ಬಣ್ಣನೆಯ ಮಾತುಗಳಿಂದಲೇ ನಾನು ಬೆರಗಾಗಿ ಹೋಗಿದ್ದೆ. ಈಗ ಅದನ್ನು ಪ್ರತ್ಯಕ್ಷವಾಗಿ ನೋಡಿ ಉತ್ಸವದಲ್ಲಿ ಭಾಗವಹಿಸಿ, ಅದರ ಕಾರ್ಯಕ್ರಮದಲ್ಲಿ ಕಂಡುಬಂದ ಅನೇಕ ಜ್ಞಾನಸಾಧನಗಳಿಂದ ನಾನು, ಹಿಗ್ಗಿದವನಾದೆ. ಅದನ್ನು ನೋಡುವ ಜನರಿಗೆ ನಾನು ಪುಣ್ಯತಿಥಿಯ ಉತ್ಸವವನ್ನು ಬಣ್ಣಿಸಿ ಹೇಳುವವನಾದೆ.

ನಮ್ಮ ಮನೆಗೆ ಅನಂತಾಚಾರ್ಯ ಎಂಬ ಬ್ರಾಹ್ಮಣನು ಪೂಜೆ-ಭೋಜನಗಳಿಗಾಗಿ ಅಲ್ಲಿ ಇದ್ದಾಗ ಬರುತ್ತಿದ್ದನು, ಅವನ ಚಟುವಟಿಕೆಗಳು ಒಂದು ಮೋಜಿನವೇ ಆಗಿವೆ. ಈ ಅನಂತಾಚಾರ್ಯರೆಂದರೆ ತನ್ನ ಅಂತವು ಬೇರೆಯವರಿಗೆ ಗೊತ್ತಾಗದಂತೆ ವರ್ತಿಸುವ ಧೂರ್ತನಾದ ಆಚಾರ್ಯ. ಅವನು ನಮ್ಮ ತಾಯಿ ಎದುರಿಗೂ, ನಮ್ಮ ಅಣ್ಣನ ಎದುರಿಗೂ, ಏನೇನೋ ಸವಿಮಾತುಗಳನ್ನಾಡಿ, ಅವರ ಮನಸ್ಸನ್ನು ತನ್ನ ಸವಿ ಮಾತಿನ ಕಡೆಗೆ ತಿರುಗಿಸಿಕೊಳ್ಳುತ್ತಿದ್ದನು. ನಮ್ಮ ತಾಯಿಗಂತೂ ಈ ಆಚಾರ್ಯರ ಬಗ್ಗೆ ತುಂಬ ಶ್ರದ್ಧೆ. ಅವನು ಒಮ್ಮೆ ನಮ್ಮ ಮನೆಗೆ ಬಂದಾಗ "ಏನ್ರಿ, ನಮ್ಮ ಮನೆಯವ್ರಿಗೆ ಶಾಂವಿಗೆ ಮಾಡಲಿಕ್ಕೆ ಬರೂದಿಲ್ಲ. ನಿಮ್ಮನ್ನು ನೋಡಿದ್ರ, ನಿಮ್ಮ ಶಾಂವಿಗೆ ಕೂದ್ಲ ಎಳಿಹಾಂಗ ಸಣ್ಣ ಆಗ್ತಾವ, ಒಳ್ಳೇ ಅಪರೂಪದ ಶಾಂವಿಗೆ ನಿಮ್ಮವು" ಎಂದ. ಅವನ ಮಾತಿಗೆ ನಮ್ಮ ತಾಯಿ ಮಂಕುಗೊಂಡು ಮನೆಯಲ್ಲಿಯ ಗೋದಿಯನ್ನು ಬೀಸಿ, ಸಜ್ಜಿಗೆ ಹಿಟ್ಟು ತೆಗೆದು ವೇಳೆ, ಶ್ರಮಗಳನ್ನು ಗಣಿಸದೆ, ಶ್ಯಾವಿಗೆ ಮಾಡಿಕೊಟ್ಟಳು. ಅಷ್ಟೊಂದು ವಿಶ್ವಾಸ ಅವಳಿಗೆ. ಆ ಆಚಾರ್ಯರು ತಮ್ಮ ಸವಿಮಾತುಗಳಿಂದ ಕಿವಿಯನ್ನು ಕೊರೆಯುತ್ತ ನಮ್ಮ ತಾಯಿಯೆದುರು ಏನೇನೋ ಭವಿಷ್ಯದ ಸುಂದರ-ಸ್ವಪ್ನಗಳನ್ನು ಬಣ್ಣಿಸಿ ಹೇಳಿ, ಅವರನ್ನು ಆಶಾ ವಾದಿಗಳನ್ನಾಗಿ ಮಾಡಿದ್ದರು. ಆಚಾರ್ಯರ ಮಾತೆಂದರೆ ವೇದವಾಕ್ಯವೆಂದು ಮನ್ನಿ ಸುವಷ್ಟು ಭಕ್ತಿ ಅವಳಿಗೆ.

ಅನಂತಾಚಾರ್ಯರು ಪೌರೋಹಿತ್ಯದಿಂದ ಹೊಟ್ಟೆ ತುಂಬಿಕೊಳ್ಳುವವರಾದರೂ ಅವರ ಮಹತ್ವಾಕಾಂಕ್ಷೆ ದೊಡ್ಡದು. ತಮ್ಮ ಆಕಾಂಕ್ಷೆಯನ್ನು ಪೂರೈಸಿಕೊಳ್ಳಬೇಕೆಂಬ ದೂರದ ಆಸೆಯನ್ನಿಟ್ಟುಕೊಂಡೇ ಪೇಟೆಯಲ್ಲಿ ಒಂದು ಅಂಗಡಿಯ ಕಟ್ಟಡವನ್ನು ಕಟ್ಟಿಸಿದ್ದನು. ಆದರೆ ತನ್ನ ಬಳಿಯಲ್ಲಿರುವ ಬಂಡವಾಳ ಸಾಲದುದರಿಂದಲೋ ಏನೋ, ಅವನು ತನ್ನ ಸ್ವಂತದ ಕಟ್ಟಡದಲ್ಲಿ ತನ್ನದೇ ಆದ ಅಂಗಡಿಯನ್ನು ಪ್ರಾರಂ ಭಿಸಿರಲಿಲ್ಲ. ವೈದಿಕನಾದರೂ ಅವನದು ತುಂಬ ವ್ಯಾವಹಾರಿಕ ಬುದ್ಧಿ. ಎಂತಲೇ ಅರಿವೆ ಅಂಗಡಿಯೊಂದನ್ನು ತೆರೆಯುವ ಆಸೆಯನ್ನು ನಮ್ಮ ತಾಯಿ ಮತ್ತು ಅಣ್ಣಂದಿರ ಎದುರು ಪ್ರಸ್ತಾಪಿಸಿದರು. "ನಾವು ೩೦೦೦ ರೂ. ಬಂಡವಾಳ ಹಾಕಿದರೆ ನಮಗೆ ೬೦೦೦ ರೂ.ಗಳ ಮಾಲು ಸಿಕ್ಕುವುದು. ಅರಿಯದವರು ಅರಿವೆ ಅಂಗಡಿ ಹಾಕ

ಬೇಕೆಂದು ಹೇಳುವರು. ಅದಗಲ್ಲಿ ಕೈ ತುಂಬಾ ಲಾಭ. ಆದುದರಿಂದ ನೀವೂ ನಾವೂ ಕೂಡಿ ಅರಿವೆ ಅಂಗಡಿಯೊಂದನ್ನು ತೆಗೆಯುಬೇಕು" ಎಂಬ ಮಾತನ್ನು ತಮ್ಮ ತಿಳಿಯಾದ ನುಡಿಗಳಲ್ಲಿ ಹೇಳಿ ಅವರ ಮನಸ್ಸನ್ನು ತನ್ನ ಮಾತಿನ ಕಡೆಗೆ ಬೀಳಿಸಿಕೊಂಡಿದ್ದನು. ನಮ್ಮ ಹಣಮಣ್ಣನಿಗೂ ಒಂದು ಸಮಸ್ಯೆ ಬಿಟ್ಟಂತೆ ಕಂಡಿತು. ನಮ್ಮ ಹಿರಿಯಣ್ಣನಾದ ರಾಘಣ್ಣನು ಕೆಲಸವಿಲ್ಲದೆ ಮನೆಯಲ್ಲಿಯೇ ಕುಳಿತುಕೊಂಡುದರಿಂದ ಆತನಿಗೆ ಒಂದು ಉದ್ಯೋಗವನ್ನು ಕಲ್ಪಿಸಿಕೊಟ್ಟಂತಾಗುವುದು ಎಂಬ ವಿಚಾರದಿಂದ ಅಂಗಡಿಯುನ್ನು ತೆರೆಯುವ ಆಚಾರ್ಯರ ಮಾತುಗಳನ್ನು ಒಪ್ಪಿಕೊಂಡನು. ಆದುದರಿಂದಲೇ ಅವನು ರಾಘಣ್ಣನಿಗೊಂದು ಕಾಗದ ಬರೆದು ಹೀಗೆ ತಿಳಿಸಿದನು-"ಇನ್ನು ಮೇಲೆ ನಾವು ಇಟ್ಟಿರುವ ಒಕ್ಕಲುತನವನ್ನು ನಿಲ್ಲಿಸಿಬಿಡೋಣ. ಎಲ್ಲ ದನಗಳನ್ನೂ ಮಾರಾಟ ಮಾಡಿ ಎಲ್ಲ ಹೊಲಗಳನ್ನು ರೈತರಿಗೆ ಹಚ್ಚೋಣ. ನಾವು ತೆರೆಯುಬೇಕೆಂದಿರುವ ಅಂಗಡಿಯಲ್ಲಿ ನೀನು ಹಿರಿಯನಾಗಿ ಇಲ್ಲಿಯೇ ಇದ್ದು ಕಾರ್ಯ ನೋಡಿಕೊಳ್ಳಬೇಕು". ಪತ್ರವನ್ನೋದಿ ರಾಘಣ್ಣನಿಗೂ ಈ ಮಾತು ಸರಿಯೆನಿಸಿತು. ಮೂಡಲಗಿಯಲ್ಲಿ ನಡೆಯುವ ಅರಿವೆ ವ್ಯಾಪಾರದ ವಿಷಯ ಅವನಿಗೂ ಗೊತ್ತಾಗಿತ್ತು. ಅವನು ಕಲ್ಲಪ್ಪ ಎಂಬ ತನ್ನ ಸ್ನೇಹಿತ ವ್ಯಾಪಾರಿಯೊಂದಿಗೆ ಪ್ರತಿ ರವಿವಾರ ಮೂಡಲಗಿಯ ಸಂತೆಗೆ ಹೋಗುತ್ತಿದ್ದ. ಅವನ ಅರಿವೆ ವ್ಯಾಪಾರದಲ್ಲಿ ಸಂಬಳವಿಲ್ಲದೆ ಸಹಾಯ ಮಾಡುತ್ತಿದ್ದ. ಕಲ್ಲಪ್ಪನಿಗೆ ತೊಂದರೆಯಿಲ್ಲದೆ ಈ ಸಹಕಾರ ದೊರೆಯತೊಡಗಿದುದಕ್ಕಾಗಿ ಅವರಿಬ್ಬರಲ್ಲಿ ಸ್ನೇಹ ಬೆಳೆದುಕೊಂಡಿತು. ಕಲ್ಲಪ್ಪ ಮುಂಬೈ ವ್ಯಾಪಾರಿಗಳಿಂದ ಮಾಲು ಖರೀದಿ ಮಾಡುವ ಅರಿವೆ ವ್ಯಾಪಾರಿ. ಅವನು ಆ ಭಾಗದಲ್ಲಿಯೇ ಪ್ರಸಿದ್ಧ ವ್ಯಾಪಾರಿಯಾಗಿದ್ದ. ಹಳ್ಳಿಯ ಜನರೆಲ್ಲರೂ ಕಿರುಕಳ ವ್ಯಾಪಾರಕ್ಕಾಗಿ ಅವನ ಅಂಗಡಿಯಿಂದಲೇ ಅರಿವೆಯ ಥಾನುಗಳನ್ನೂ, ಧೋತರ-ಪಂಚೆಗಳನ್ನೂ ತೆಗೆದುಕೊಂಡು ಹೋಗುತ್ತಿದ್ದರು. ಇದರಿಂದ ಅವನಿಗೆ ಕೈತುಂಬ ಲಾಭವೂ ಸಿಕ್ಕುತ್ತಿತ್ತು. ಇದನ್ನೆಲ್ಲಾ ಕಣ್ಣಾರೆ ಕಂಡ ನಮ್ಮ ರಾಘಣ್ಣನಿಗೆ ಭವಿಷ್ಯ ಕಾಲದ ತನ್ನ ಅಂಗಡಿಯ ಬಗ್ಗೆ ಸವಿಯಾದ ಕನಸುಗಳು ಕಂಡವು. ಕೂಡಲೇ ಹಣಮಣ್ಣನಿಗೆ ತನ್ನ ಒಪ್ಪಿಗೆಯನ್ನು ಸೂಚಿಸಿ, ಒಕ್ಕಲುತನದ ಸಾಹಿತ್ಯಗಳನ್ನೆಲ್ಲ ಒಂದರ-ಹಿಂದೊಂದರಂತೆ ತೆಗೆಯತೊಡಗಿದ. ಮೊದಲು ಎರಡೂ ಎತ್ತುಗಳನ್ನು ಮಾರಾಟ ಮಾಡಿದನು. ಅದರಲ್ಲಿ ಒಂದು ಎತ್ತಿನ ಬೆಲೆ ನಮ್ಮ ತಂದೆಯವರ ತಿರುಪತಿ ಯಾತ್ರೆಯ ಸಾಲದ ಬಡ್ಡಿಗಂಟುಗಳನ್ನು ಕಳೆಯಿತು. ಇನ್ನೊಂದು ಎತ್ತಿಗೆ ಬಂದ ಬೆಲೆಯು ಹೊಲಗಳ ಮೇಲೆ ಮುಂಗಡ ಠೇವು ತೆಗೆದ ರಕಮು ಸೇರಿ, ಅಂಗಡಿಯ ಬಂಡವಾಳದ ಸಿದ್ಧತೆಗೆ ಮೊದಲಾಯಿತು. ಎಲ್ಲ ಹಳೆಯ ಸಾಮಾನುಗಳನ್ನು ರೈತರಿಗೆ ಹಂಚಿ ಕೊಟ್ಟಾಯಿತು. ಹಿಂಡುವ ಎಮ್ಮೆ, ಲಗಳೆಯ ಕೋಣಗಳು ಮಾರಾಟವಾಗಿ ಬಂದ ಹಣವು ಬಂಡವಾಳ

ದಲ್ಲಿ ಸೇರಿಕೊಂಡಿತು. ಇದಿಷ್ಟೆ ಅಲ್ಲ, ನಮಗೆ ಅಂಗಡಿಯ ಬಂಡವಾಳಕ್ಕಾಗಿ ಒಂದೂವರೆ ಸಾವಿರ ರೂ. ಬೇಕಾಗಿದ್ದವು. ಹೆಚ್ಚಿನ ಹಣಕ್ಕಾಗಿ ನಮ್ಮ ಅಣ್ಣನ ಹೆಂಡತಿಯ ಚಿನ್ನದ ಬಳೆ, ಸರಿಗೆಗಳನ್ನು ರಬಕವಿಯ ಸಾಹುಕಾರರ ಬಳಿಯಲ್ಲಿ ಒತ್ತೆಯಾಗಿಟ್ಟು ಹಣವನ್ನು ಸಂಪಾದಿಸಲಾಯಿತು. ಒಂದೂವರೆ ಸಾವಿರ ಬಂಡವಾಳವು ಅಂಗಡಿಗೆ ಸಿದ್ಧವಾಯಿತು. ಆ ಆಚಾರ್ಯರು ತನ್ನ ಪಾಲಿನ ಬಂಡವಾಳವನ್ನು ಇದರಲ್ಲಿ ಸೇರಿಸಿದನು. ಅರಿವೆಯ ಖರೀದಿಗೆ ಪತ್ರ-ವ್ಯವಹಾರ ನಡೆಯಿತು. ಮಾರ್ಗಶಿರ ಮಾಸದ ಕೊನೆಯಲ್ಲಿಯೇ ಪಟ್ಟಿ ಮಾಡಿ ಕಳಿಸಿದಂತೆ ಅರಿವೆಯ ಥಾನುಗಳು ಬಂದವು. ಒಂದು ಶುಭ ಮುಹೂರ್ತವನ್ನು ನೋಡಿ ನಮ್ಮ ಅರಿವೆಯ ಅಂಗಡಿ ಪ್ರಾರಂಭವಾಯಿತು. ಅಂದಿನಿಂದ ನಮ್ಮ ರಾಘಣ್ಣ ಮೂಡಲಗಿಯಲ್ಲಿಯೇ ವಾಸವಾಗಿದ್ದು ತನ್ನ ಅಂಗಡಿಯ ವ್ಯವಹಾರವನ್ನು ನಡೆಸತೊಡಗಿದನು. ನಮ್ಮ ರಾಘಣ್ಣನೆಂದರೆ ಹಸುವಿನಂತಹ ಮನುಷ್ಯ. ಯಾವ ವ್ಯವಹಾರದ ತೊಡಕಿನಲ್ಲಿಯೂ ಸೇರುವವನಲ್ಲ. ಅಂಗಡಿಯ ಖಾತೆ-ಖರ್ದಿಗಳನ್ನು ಅನಂತಾಚಾರ್ಯ ಬರೆಯುತ್ತಿದ್ದ. ಅಂಗಡಿಯ ವ್ಯವಹಾರವು ಸುಯಂತ್ರಿತವಾಗಿ ಸಾಗಿತು. ವಾರವಾರವೂ ಆದ ಲಾಭದ ಮಾತುಗಳನ್ನೇ ಅನಂತಾಚಾರ್ಯ ನಮ್ಮ ತಾಯಿ ಎದುರು ಬಿತ್ತರಿಸಿ, ಬಾಯಲ್ಲಿ ನೀರು ಬಿಡುವಂತೆ ಹೇಳುತ್ತಿದ್ದ.

(ಸಶೇಷ)

ತೆರೆಯಿಲ್ಲವದಕೆ ನೊರೆಯಿಲ್ಲ, ತಿರುಗಣೆಗಳಿರವು
ಹಿರಿಮೆ-ಕಿರಿಮೆಗಳಿರವು, ಹಿಗ್ಗು-ತಗ್ಗುಗಳಿರವು;
ಕಲಕು-ಕದಡುಗಳಿಲ್ಲ, ಮಬ್ಬು-ಮಂಜುಗಳಿಲ್ಲ.
ಹಸನು ಹಸನಾಗಿರುವ ಋತು ಸತ್ಯಗಳ ಹೊನಲು.

ಹರಿಯುತಿದೆ ಎಡೆಬಿಡದೆ ಕಾಲಪ್ರವಾಹ– !
ಇಂದು ನಾಳೆಗಳೆಂಬ ದಂಡುಗವು ಅದಕಿಲ್ಲ,
ಹಿಂದೆ ಮುಂದೆಂಬ ಹಗರಣದ ತೊಡಕಿಲ್ಲ !

ಹರಿಯುತಿದೆ ಹಾಗೆಯೇ ಕಾಲಪ್ರವಾಹ
ಅದಕಾವ ಲೋಭ ಮೋಹ ?

—ಆನಂದಕಂದ

ಹೊಸದು

ಮುಂಜಾವು (ಕಾದಂಬರಿ)

ಲೇಖಕರು: **ಕಾ. ತ. ಚಿಕ್ಕಣ್ಣ**

ಪುಟ: **x + 200,** ಬೆಲೆ: **ರೂ. 30-00**

'ದಟ್ಟ ತಿಟ್ಟ-ತಿರುವು, ಇಳುಕಲು-ಕೊರಕಲು, ಸಂದಿಗೊಂದಿಗಳೊಳಗಿಂದ ಹರಿವುದು-ಅದೇಟು ಸದ್ದು! ಅದೇಟು ಮೌನ!'-ಎಂದು ಆರಂಭವಾಗುವ ಕಾ. ತ. ಚಿಕ್ಕಣ್ಣನವರ 'ಮುಂಜಾವು' ಕಾದಂಬರಿ ನಿಸರ್ಗದೊಂದಿಗೆ ಪಂಚೇಂದ್ರಿಯಗಳ ಮೂಲಕ ನಡೆಸುವ ಸಂವಾದದಂತೆ ತೋರುತ್ತದೆ. ನನಗೆ ಈ ಕಾದಂಬರಿಯನ್ನು ಪಾರಂಪರಿಕ ರೀತಿಯಲ್ಲಿ, ಸಾಮಾಜಿಕ ಪರಿವರ್ತನೆ ಅಥವಾ ಸಾಮಾಜಿಕ ವಿಘಟನೆಯನ್ನು ಹೇಳುವ, ಹಳ್ಳಿಯ ದುರಂತ ಚಿತ್ರವಾಗಿ ಗ್ರಹಿಸುವುದು, ಕಾದಂಬರಿಯ ಮಹಾತ್ವಾಕಾಂಕ್ಷೆಯ ಹರಹಿಗೆ ಸಂಕೋಚ ಹೇರಿದಂತೆ ಅನಿಸುತ್ತದೆ. ಕಾದಂಬರಿಯಲ್ಲಿ ಈ ವಿಘಟನೆಯ ಸನ್ನಿವೇಶವೂ ಒಂದು ಎಳೆಯಾದದ್ದು ಹೌದು. ಆದರೆ ಈ ಎಳೆ ಆನುಷಂಗಿಕವಾದದ್ದೆಂದು ನನಗೆ ತೋರುತ್ತದೆ. ಮುಂಜಾವು ಕಾದಂಬರಿಯ ಶೈಲಿ ಶಾಸ್ತ್ರೀಯವಾದ ಅಧ್ಯಯನ (Stylistic Studies) ಹೆಚ್ಚು ಫಲಪ್ರದವಾದುದಾಗಬಹುದೆನ್ನುವುದು ನನ್ನ ಅನಿಸಿಕೆ.

ಕಾದಂಬರಿಯಲ್ಲಿನ ವಿವರಗಳು ಒಂದು ವಿಶಿಷ್ಟವಾದ ಆವರಣವನ್ನು ಕಟ್ಟಿಕೊಡಲು ದುಡಿಯುತ್ತವೆ. ಮಾನವ ಸಮಾಜದಿಂದ ತುಂಬ ದೂರವಾಗಿರುವ ಅತ್ಯಂತ ದಟ್ಟವಾಗಿರುವ ನಿಸರ್ಗದ ಕೇಂದ್ರವಿದೆ. (ಬೋರೆಯ ಸಮಭಾಗಮಾಡಿ ಗೆರೆ ಎಳದಂಗೆ)... ನಮ್ಮ ದೃಷ್ಟಿ ಇಲ್ಲಿಂದ ಹೊರಬದಿಗೆ ಸರಿಯುತ್ತ ಬಂದಂತೆ- 'ತೆಂಕದಿಕ್ಕಿನ ಜಡೆಮುನಿಗುಡ್ಡದ ಸುತಮುತ ಇರುವ್ರೋಟು ಮರಮುಂಡಿಗೆ ಗಿಡಗಂಟೆ ಬಂಜೆ ಪ್ರಾಣಿ ಪಕ್ಷಿ ಸಂಕುಲವ ಆರಗು ಮಾಡಿಕೊಂಡು ಈಚೆ ಬಂದರೆ ಅಳ್ಳಿಪತಯ್ನ ಗುಡಿ'. ಅಳ್ಳಿಪತಯ್ನ ಗುಡಿಯಿಂದ ಇನ್ನಷ್ಟು ಹೊರಬದಿಗೆ ಅಕ್ಕತಂಗಿಯೋರ

ಬೇವಿನಕಟ್ಟೆ ಇದೆ. ಈ ನಿಸರ್ಗದ ಅಂಚಿನಲ್ಲಿ 'ಅಕ್ಕತಂಗಿಯೋರ ಬೇವಿನ ಮರಗಳ ನೆಳ್ಳಿಗೆ ಮೈಯೊಡ್ಡಿ, ಅಳ್ಳಿಪಶಯನ ಕರುಣೆಗೆ ತಲೆಯಾನಿಸಿ–ಬೋರೆಮಾತಾಯಿಯ ಮಡಲಿನ ಮಗುವಾಗಿ ಕಸ್ತೂರಿಯ ಗುಡಿಸಲಿದೆಯಲ!' ಕೊಪಗಳಿಯ ದುರಂತದ ಕಥೆಯಾಗಿದ್ದರೆ, ಅಲ್ಲಿನ ಜನರ ಸಂಬಂಧಗಳ ವಿಘಟನೆಯ ಕಥೆ ಇದಾಗಿದ್ದರೆ ಕೊಪಗಳಿ ಕೇಂದ್ರವಾಗುತ್ತಿತ್ತು. ಕಾದಂಬರಿಯ ವಿವರಗಳು ಈ ಹಳ್ಳಿಯಿಂದ ಆರಂಭಗೊಂಡು ಅದರ ಹೊರವಲಯಕ್ಕೆ ವ್ಯಾಪಿಸುತ್ತಾ ಸುತ್ತಲಿನ ನಿಸರ್ಗಪರಿಸರವನ್ನು ಒಳಗೊಳ್ಳುತ್ತಿದ್ದವು. ಆದರೆ ಹೀಗಾಗದೇ, ನಿಸರ್ಗದ ಕೇಂದ್ರದಿಂದ ಹೊರಟು ಕ್ರಮೇಣ ಹೊರವಲಯಕ್ಕೆ ಚಲಿಸುತ್ತ, ನಿಸರ್ಗದೊಂದಿಗೆ ಘನಿಷ್ಟವಾದ ಮತ್ತು ನಿರಪೇಕ್ಷ ಎನ್ನಿಸಬಹುದಾದಂಥ ಸಂಬಂಧ ಸಾಧಿಸಿಕೊಂಡ ಕಸ್ತೂರಿಯ ಗುಡಿಸಲು ಬರುತ್ತದೆ. ಕಸ್ತೂರಿಯ ಈ ಗುಡಿಸಲಿನಿಂದ ಇನ್ನಷ್ಟು ಹೊರಬದಿಗೆ ಇರುವುದು ಮನುಷ್ಯರ ಸ್ವಾರ್ಥದ ಲೋಕದ ಕೊಪಗಳಿ. ಆರಂಭದಲ್ಲಿಯೇ ಮೂಡಿ ನಿಲ್ಲುವ ಈ ಆವರಣವು ಕಾದಂಬರಿಯ ವಿನ್ಯಾಸದ ಕಡೆಗೆ ನಮಗೆ ನಿರ್ದೇಶನ ನೀಡುವಂಥದ್ದಾಗಿದೆ.

ಮುಂಜಾವು ನಿಸರ್ಗದ ಹಿನ್ನೆಲೆಯಲ್ಲಿ ಮನುಷ್ಯನನ್ನು ಅವನ ಸಂಬಂಧಗಳನ್ನು ಗುರುತಿಸುವ ಪ್ರಯತ್ನಕ್ಕೆ ತೊಡಗುತ್ತದೆ. ಈ ವಿನ್ಯಾಸದಲ್ಲಿ ಮನುಷ್ಯನ ಒಟ್ಟು ಜೀವಶಕ್ತಿಯ ಮೂಲ ನಿಸರ್ಗವೇ ಆಗಿದೆ. ಮತ್ತೆ ಕಾದಂಬರಿಯ ಆರಂಭದಲ್ಲಿಯೇ (ಪುಟ: 14) ಬರಗಾಲದ ಬಗೆಗಿನ ವಿವರ ಬರುತ್ತದೆ. '....ಗೊಟ್ಟಿನ ಕಾಲ. ಜನಗಳ ಎಲ್ಲ ಹರಕೆಗಳು ಮುಗಿದಿದ್ದೋ, ಎಲ್ಲ ಆಸೆಗಳು ಕುಸಿದಿದ್ದೋ....' ಆಗ– 'ಊರಿನೋರು ಬೋರೆಯನೇ ಆಶರಯಿಸಿದರು. ಅದೊಂದೇ ಊರಿಗಿದ್ದ ಕಸುವು ... ಬೋರೆತಾಯಿ ಮಾತರ ಬಂದೋರಿಗೆ ಏನಾದರೂ ಕೊಡೋ ಶಕುತಿ ಉಳಿಸಿಕೊಂಡಿದ್ದಳು'.... ಮುಂದೆ– (ಪುಟ: 26) ಮಳೆಯಾಗಿ 'ಹಳ್ಳಕೊಳ್ಳಗಳು ತುಂಬಿಕೊಂಡೋ ....ಬೋರೆ ಪುನ್ಯೆಸಿ ಹಸಿರೊಡೆದು ಅರಳಿತು. ಊರುಬುಟುಹೋಗಿದ್ದ ಜನ ಒಬೊಬರಾಗಿ ಬಂದು ಹಟ್ಟಿ ಸೇರಿಕೊಂಡರು. ಊರು ಜೀವ ತುಂಬಿಕೊಂಡಿತು'.

ಸೃಷ್ಟಿ ಬರೀ ಉದರಪೋಷಕವಾದುದಲ್ಲ. ಅದು ಋತುಚಕ್ರದ ಮೂಲಕ ಮನುಷ್ಯನ ಭಾವಜಗತ್ತನ್ನು ಸಂಸ್ಕರಿಸುತ್ತದೆ. ಕಾದಂಬರಿಯಲ್ಲಿ ಚಿತ್ರಿತವಾಗಿರುವ ಮೂರು ಲೈಂಗಿಕ ಸಮಾಗಮಗಳನ್ನು ಈ ಹಿನ್ನೆಲೆಯಲ್ಲಿ ಗಮನಿಸಬಹುದು. (ಪುಟ: 20) 'ಬೋರೆಯ ಇಳಿಜಾರು ಸೆರಗಿನಲಿ, ಅಲ್ಲಲೇ ಹಸಿರು ಚಿಕ್ಕೆ ಇಟ್ಟಂಗೆ ಹಂಡಿ ಕೊಂಡಿದ್ದ ಕುರುಚಲು ಗಿಡಗಂಟೆಗಳು ಒಡಲಲಿ ಕೆಂಪನೆ ಬಿರಿದು ಒಲಿದಾಡುತಿದ ಮುತುಗದ ಮರದಡಿಯ ಹೂಗಳ ಮಧ್ಯೆ, ಹುಸಿ ಮುನಿಸು ತೋರುತಾ ಚೋಟೆಯ ಅತ್ತಿತ್ತ ವಾಲಾಡಿಸುತಾ ಕುಂತಿದ್ದ ವೈಯಾರಿ....ಹೆಂಡತಿ ಗಂಡನ ಮುಂದೆ ಬಿರಿಮೈ

ಬೋರೆಯಾದಳು. ಕಸ್ತೂರಿ ಹೊಸ ಗುಟ್ಟೊಂದನು ಹೆಕ್ಕಿದ ಹುರುಪಿನಲಿ ಬಳಿಸಾರಿ ಬಂದು, ಹಂಡಿಕೊಂಡಿದ್ದ ಹೂವಿನ ಮೇಲೆ ಮಲಗಿಸಿದ. ಸದ್ದು ಮಾಡಿದರೆ ಎಲ್ಲಿ ನಾಚಿ ನೀರಾಗುವರೋ ಅನ್ನುವಂಗೆ ಮರ, ಗಿಡಗಂಟೆಗಳು ಮಿಟಕಾಯಿಸದಂಗೆ ನಿಂತುಕೊಂಡವು. ಬೋರೆತಾಯಿ ಇವರ ಆಟಕೆ ಸುತರಾಂ ಸಮ್ಮತಿ ಕೊಟ್ಟಂಗೆ ಮೌನವಾಗಿ ಬುಟಿದಳು. ಕೊಡೆಯಂಗೆ ಬಿಚ್ಚಿ ನಿಂತಿದ್ದ ಮುತುಗದ ಮರ ತನ್ನ ಮಕ್ಕಳ ಆಟಕೆ ಮರೆಮಾಡಿ ಕಾವಲಾದಳು'–(ಪುಟ: 44) 'ಹನಿ ಉದುರತೊಡಗಿತು. ಧಮಾರ್‌ನೆ ಈಶಾನ್ಯ ಮೂಲಿಂದ ಒಂದು ಗುಡುಗು ದಡಗರಿಯಿತು.... ಇಬ್ಬರೂ ನೆಂದು ಹೋದರು....ದನಗಳ ಕಟ್ಟೊದಿಕಾಗಿ ಮಾಡಿದ್ದ ಹಟ್ಟಿ ಒಳಗಡೆ ತಿಮ್ಮುನ ಹಿಡಕೊಂಡು ಕಾಲಿಟ್ಟ. ಮೂಲೆಯಲಿ ಎಂಡು ಸಾರಗ ಮೈಮರೆವಿನಲಿ ತೊಡಿಕೊಂಡಿದ್ದವು. ಇಬರೂ ಇನೊಂದು ಮೂಲೆಯಲಿ ನಿಂತು ಸದ್ದುಮಾಡದೆ ಅವುಗಳ ಆಟ ನೋಡಿದರು. ಒತ್ತೊತ್ತಿಗೆ ಇನೋಟು ಸರಿದು ಒಳಗೊಳಗೇ ಬಿಸಿಯಾಗತೊಡಗಿದರು. ತಮಗೆ ಗೊತ್ತಿಲ್ಲದಂಗೇ ಹುರಿಯಾಗಿ ಇಬರೂ ಒಬರಿಗೊಬರು ಸಾರಗಗಳಾದರು; ಹೊರಗಡೆಯ ಮಳೆ ಮಿಂಚುಗುಡುಗು ಸಿಡಿಲುಗಳೆಲ್ಲ ಈಗ ನಿಂತಂತಾಗಿ, ತಿಮ್ಮು ಕಸ್ತೂರಿ ಮಾತರ ಎಲವೂ ಆಗಿಹೋದರು. ಯಾವಾಗ ಆ ಸಾರಗಗಳು ನಾಚಿಕೊಂಡು ಆಚೆ ಹೋದವೊ ಗೊತ್ತಿಲ–ಮಳೆ ಯಾವಾಗ ನಿಂತಿತೊ ತಿಳಿಯದು–ಈಚೆ ಬಂದು ನೋಡಿದರೆ ನೀರು ಕುಡಿದ ನೆಲ ಹೊಳ್ಳಾಡುತಾ ಅದೆ–ಮರಗಿಡಗಳು ಮೈತೊಳಕೊಂಡು ಕಿಲಕಿಲನೆ ನಗುತಾ ಅವೆ ...' ಕಸ್ತೂರಿ ಅಗಸರ ಲಕಸುಮಿಯೊಂದಿಗೆ ಸಂಯೋಗ ಹೊಂದುವುದು ಕೂಡ ಹೊಂಗೆಮರವೊಂದರ ಅಡಿಗೆ.

ಕಸ್ತೂರಿ ಮಗನನ್ನು ಪಡೆಯುವುದು ನಿಸರ್ಗದ ಕೊಡುಗೆಯಾಗಿ. ಮರದಡಿಗೆ ಅಳುತ್ತ ಮಲಗಿದ ನಿಸರ್ಗದ ಕೂಸು ಮಗುವಾಗಿ ಕಸ್ತೂರಿಯ ಮಡಿಲು ತುಂಬಿತು. ಇನ್ನು ಕಸ್ತೂರಿ ಸಾವಿನೊಂದಿಗೆ ಮುಖಾಮುಖಿಯಾಗುವುದು ಕೂಡ ನಿಸರ್ಗದ ಆವರಣದಲ್ಲಿಯೇ. (ಪುಟ: 4) '... ತಿಂಗಳಮಾವನ ಕಟೆ ದಾಟಿ ಅಟ್ಟ ಹತ್ತಿ ತಿರುಗ ಇಳಿಯೋವಾಗ ಆಲದಮರದಂಡಿ ತರಗೆಲೆ ತುಂಬಿದ್ದ ಕಲ್ಲಿ ಕಂಡಂಗೆ ಆಯಿತು. ಅತ್ತ ಹೋಗಿ ನೋಡಿದ. ದಿಟವಾಗಲೂ ಅದು ಕಲ್ಲಿನೇ. ಅವಸರದಿಂದ ಮುಂದೆ ಹೋದ. ಅದರಾಚೆ ಯಾರೋ ನಿಗುತುಕೊಂಡು ಬಿದ್ದಿರುವಂಗೆ ಕಂಡಿತು. ಗಾಬರಿಯಿಂದ ಬಳಿ ಹೋದರೆ ಆ ಕಲ್ಲಿ ನಮದು. ಅವನು ಅಪ್ಪಾ !' ಕಸ್ತೂರಿಯ ಪ್ರಜ್ಞೆಗೆ ಹುಟ್ಟು-ಸಾವುಗಳು ಒದಗಿ ಬರುವುದು ನಿಸರ್ಗದ ಎರಡು ನಿಗೂಢಗಳಾಗಿ. ಅವುಗಳಿಗೆ ಅವನ ಪ್ರಜ್ಞೆಯಲ್ಲಿ ಯಾವ ವಿವರಣೆಯೂ ಸಾಧ್ಯವಿಲ್ಲ.

ನಿಸರ್ಗದ ಈ ಜೀವಶಕ್ತಿಯ ಎದುರು, ಈ ಜೀವಶಕ್ತಿಯ ನಿರಪೇಕ್ಷ ಪ್ರಯೋಜನದ ಸಂಬಂಧ ಮೀರಿದ ಮನುಷ್ಯನ ಸ್ವಾರ್ಥವಿದೆ. ಇದಕ್ಕೆ ಯಾವ ಇಸಮ್ಮಿನ

ಹೆಸರೂ ಇಲ್ಲ–ಮನುಷ್ಯನ ಎಲ್ಲ ಕಾಲದ ಬದುಕಿನ ಹಿಂದೆ, ನಾಗರೀಕತೆಯ ಹಿಂದೆ ಇದು ಅತ್ಯಂತ ಪ್ರಬಲ ಪ್ರೇರಣೆಯಾಗುತ್ತ ನಿಂತಿದೆ. 'ಮುಂಜಾವು' ಕಾದಂಬರಿಯಲ್ಲಿ ಈ ಪ್ರೇರಣೆಯು ಬಂಡವಾಳಶಾಹೀ ಜೀವನವಿಧಾನದ ಪರಿಣಾಮದಂತೆ ತೋರುತ್ತದೆ. ಆದರೆ ಇದು ಅಷ್ಟು ಸ್ಪಷ್ಟವಾಗುವುದಿಲ್ಲ. ಯಾಕೆಂದರೆ ಚಹದ ಹೊಟೆಲ್ಲಿನ ಮಾಲಿಂಗೂ ಶಾನುಭೋಗರ ಭೂಮಿ ಕೊಳ್ಳುತ್ತಾನೆ. ಶಾನುಭೋಗರು ತಮ್ಮ ಭೂಮಿಯನ್ನು ಹಣವಾಗಿ ಪರಿವರ್ತಿಸಿಕೊಳ್ಳುತ್ತ ಹೋಗುತ್ತಾರೆ. ದನಗಳ ಚಾಟಿ ವ್ಯಾಪಾರದ ನಿಂಗ ಹೊಟೆಲ್ ಉದ್ಯಮಕ್ಕೆ ಬರುತ್ತಾನೆ. ಕಾಳಾಚಾರಿ ಶಾನುಭೋಗರ ಹಿಂದೆ ಅಡ್ಡಾಡುವ, ಮೈ ಬಗ್ಗಿಸದ ಪುಢಾರಿಗಿರಿಯ ಕಸುಬು ಹಿಡಿಯುತ್ತಾನೆ. ಚಾಮ ತನ್ನ ಕಸಬನ್ನ ಬಿಟ್ಟು ಸದ್ರಪ್ಪನ ಹಿಂಬಾಲಕನಾಗುತ್ತಾನೆ. ಆದರೆ ಈ ಎಲ್ಲ ಉಲ್ಲಟ ಪಲ್ಲಟಗಳ ಹಿಂದಿನ ಪ್ರೇರಣೆ ಮಾತ್ರ ಅದೇ ಸ್ವಾರ್ಥ ಮತ್ತು ಆಸೆಗಳಾಗಿವೆ. ತಿಮ್ಮಾಜಿಗೆ ತಾನೂ ಕೆಂಪಗೆ ಗದಗದ ಹೊಳೆಯೋ, ಚಿತ್ತಾರ ಬರೆದ ಮಡಕೆ ಮಾಡಬೇಕೆಂದು ತೋರುವುದು ಇಂಥ ಮಡಕೆಗಳಿಗೆ ಇರುವ ಅಪಾರ ಬೆಲೆಗಾಗಿ. ಬಹಳ ಹೆಚ್ಚೆಂದರೆ ಆಣೆಗೊಂದರಂತೆ ಇವರು ಮಾಡುವ ಮಡಕೆ ಮಾರಿದ್ದರೆ ಇದೀಗ ಈ ಚಿತ್ತಾರದ ಮಡಕೆಗಳ ಬೆಲೆ ಎಂಟರಿಂದ ಹನ್ನೆರಡಾಣೆ ! ಅಂದರೆ ಈ ಮನುಷ್ಯರೆಲ್ಲ ನಿಸರ್ಗದ ಜೀವಶಕ್ತಿಗೆ ಭಿನ್ನವಾದ ಇನ್ನೊಂದು ಶಕ್ತಿಯನ್ನು ಸೃಷ್ಟಿಸಿಕೊಳ್ಳುತ್ತಾರೆ. ಅದು ಹಣವಾಗಿರುತ್ತದೆ, ಆಸ್ತಿಯಾಗಿರುತ್ತದೆ ಇಲ್ಲವೆ ದೇಹಬಲವಾಗಿರುತ್ತದೆ. ನಗರೀಕರಣದ ಸಂದರ್ಭದಲ್ಲಿ ಇವುಗಳೊಂದಿಗೆ ಯಂತ್ರಬಲ ಸೇರಿಕೊಳ್ಳುತ್ತದೆ.

ಈ ಎಲ್ಲ ಹಿನ್ನೆಲೆಯಲ್ಲಿ 'ಮುಂಜಾವು' ಕಾದಂಬರಿಯಲ್ಲಿ ಬರುವ ನಿಧಿಲಾಭದ ಎಪಿಸೋಡ್ ಸಾಂಕೇತಿಕ ಅರ್ಥವನ್ನು ಪಡೆದುಕೊಳ್ಳುತ್ತದೆ. ಇದ್ದಕ್ಕಿದ್ದಂತೆಯೇ ಕಸ್ತೂರಿ–ತಿಮ್ಮಾಜಿಗೆ ನಿಧಿ ದೊರಕಿದೆ ಎನ್ನುವ ಸುದ್ದಿ ಕೊಪಗೊಳಿಯಲ್ಲಿ ಹರಡುತ್ತದೆ. ಕಾದಂಬರಿಯಲ್ಲಿ ಈ ನಿಧಿಲಾಭ ಕುರಿತಂತೆ ಒಂದು ರೀತಿಯ ಕಾಲ್ಪನಿಕ ಸನ್ನಿವೇಶ ಸೃಷ್ಟಿಯಾಗುತ್ತದೆಯೇ ಹೊರತು ಅದು ವಾಸ್ತವದ ನೆಲೆಯಲ್ಲಿ ಚಿತ್ರಿತವಾಗುವುದೇ ಇಲ್ಲ. ನಿಧಿ ದೊರಕಿತು ಎನ್ನಲು ಆಧಾರವಾಗಬಹುದಾದ ಯಾವ ಘಟನೆಯ ವಿವರವೂ ನೇರವಾಗಿ ಕಾದಂಬರಿಯಲ್ಲಿ ಚಿತ್ರಿತವಾಗುವುದಿಲ್ಲ. ಪರೋಕ್ಷವಾಗಿ ಒಂದು ಮಾತು ಎಲ್ಲಿಯೋ ಬರುತ್ತದೆ. ಈ ನಿಧಿ ಎನ್ನುವುದು ಕಸ್ತೂರಿಯ ಕುಟುಂಬ ಗಳಿಸಿಕೊಂಡಿರುವ, ನಿಸರ್ಗದೊಂದಿಗೆ ಸಾಧಿಸಬೇಕಾದ ನಿರಪೇಕ್ಷ ಸಂಬಂಧದ ಬಗೆಗಿನ ಪ್ರಜ್ಞೆಯಾಗಿದೆ. ಈ ಪ್ರಜ್ಞೆಗೆ ಕಸ್ತೂರಿಯಲ್ಲಿ ಬೇರಿದ್ದರೆ ತಿಮ್ಮಾಜಿಯಲ್ಲಿ ಚಿಗುರು ಇದೆ. ಆದರೆ ಇಂಥ ಸಂಬಂಧವನ್ನು ಅರಿಯಲಾರದ, ಬಂಡವಾಳಶಾಹಿಯ ಕೂಸುಗಳಾದ ಕೊಪಗಳಿಯ ಜನ ಕಸ್ತೂರಿಯ ಗುಡಿಸಲಿನಲ್ಲಿ ನಿಧಿಗಾಗಿ ತಡಕಾಡುತ್ತಾರೆ. ತಿಮ್ಮಾಜಿ

ಮಾಡಿದ ಕುಸುರಿನ ಗಡಿಗೆ ಮಡಕೆಗಳನ್ನೆಲ್ಲ ಒಡೆದು ಹಾಕುತ್ತಾರೆ. ಕಸ್ತೂರಿ-ಅಮ್ಮಾಜಿಯ ಗುಡಿಸಲಿನಲ್ಲಿಯ ಗಡಿಗೆ ಮಡಕೆಗಳನ್ನೆಲ್ಲ ಒಡೆದುಹಾಕುವ ಕ್ರಿಯೆಯನ್ನು ದುರ್ಬಲನೊಬ್ಬನ ಮೇಲೆ ಊರಿನ ಪ್ರತಿಷ್ಠಿತ ಪುಂಡರ ದೌರ್ಜನ್ಯ ಎಂದು ಪರಿಗಣಿಸುವುದು ಸರಳೀಕೃತ ತೀರ್ಮಾನ ಎನ್ನಿಸುತ್ತದೆ.

O

ಚಿಕ್ಕಣ್ಣನವರ ಮುಂಜಾವು ಕಾದಂಬರಿ ಒಂದು ದೊಡ್ಡ ಪ್ರಶ್ನೆಯನ್ನೆತ್ತಿಕೊಂಡು ಹೊರಡುತ್ತದೆ. ಇಂಥ ವಸ್ತುವಿನೊಂದಿಗೆ ತೊಡಗುವ ಸೃಜನಕ್ರಿಯೆ ಘನವಾದ ಚಾಲೆಂಜ್ ಎದುರಿಸಬೇಕಾಗುತ್ತದೆ. ಈ ಚಾಲೆಂಜ್‌ನ್ನು ಎದುರಿಸಿ ಗೆಲ್ಲುವ ಸೃಜನಕ್ರಿಯೆ ಮಲೆಗಳಲ್ಲಿ ಮದುಮಗಳು, ಬೆಟ್ಟದ ಜೀವದಂಥ ಉತ್ಕೃಷ್ಟ ಕಾದಂಬರಿಗಳನ್ನು ಸೃಷ್ಟಿಸುತ್ತದೆ. ಈ ಆಹ್ವಾನದಲ್ಲಿ ಸೋಲುವ ಸೃಜನಕ್ರಿಯೆ ಕೂಡ ವ್ಯರ್ಥವಲ್ಲ.

'ಮುಂಜಾವು' ಕಾದಂಬರಿ ನಮ್ಮಲ್ಲಿ ಹುಟ್ಟಿಸುವ ತೀವ್ರ ಅತೃಪ್ತಿಗೆ, ಅದರ ಸೋಲಿಗೆ ಅದರ ಸಂಯೋಜನೆಯಲ್ಲಿನ ದೌರ್ಬಲ್ಯ ಕಾರಣವಾಗಿದೆ. ಇಂಥ ಸಂಯೋಜನೆಯ ಕಾರಣದಿಂದಲೇ ಕಾದಂಬರಿಯಲ್ಲಿ ವಸ್ತುವು ಸಾಧಿಸಿಕೊಳ್ಳುವ ವಿನ್ಯಾಸದ ಬಗೆಗೆ ನಮಗೆ ಧೈರ್ಯದಿಂದ ಹೇಳಲಾಗುವುದಿಲ್ಲ. ಕಾದಂಬರಿಯಲ್ಲಿ ತಾತ್ವಿಕ ಅಮೂರ್ತದ ಸ್ತರ ಮತ್ತು ಸಾಮಾಜಿಕ ವಿವರದ ವಾಸ್ತವದ ಸ್ತರ ಪರಸ್ಪರ ಮಿಳಿತಗೊಳ್ಳದೇ ಒಡೆದ ಹಾಲಿನ ಸ್ಥಿತಿ ಉಂಟಾಗುತ್ತದೆ. ಮುಂಜಾವಿನ ಮೊದಲಿನ ನಿಶೆಯಲ್ಲಿ ಏಕಾಗ್ರಗೊಳ್ಳದ ಮನಸಿದೆ. ಭಂಗಗೊಂಡ ಧ್ಯಾನವಿದೆ. ಆದರೆ ಈ ಕಾದಂಬರಿ ತನ್ನ ಹಿಂದಿರುವ ಏಕಾಗ್ರತೆಯ ಬಗೆಗಿನ-ಧ್ಯಾನದ ಬಗೆಗಿನ ಪ್ರಯತ್ನವನ್ನು (ಸೋಲು-ಗೆಲುವಿನ ಮಾತು ಬೇರೆ) ಖಂಡಿತವಾಗಿ ಹೇಳುತ್ತದೆ. ಚಿಕ್ಕಣ್ಣನವರ ಮುಂದಿನ ಕಾದಂಬರಿಯ ಬಗ್ಗೆ ನಮ್ಮಲ್ಲಿ ಆಸೆ, ಕುತೂಹಲ ಹುಟ್ಟಿಸುತ್ತದೆ-ಅಡಿಗರ 'ಪ್ರಾರ್ಥನೆ' ನೆನಪಾಗುತ್ತದೆ:

ಈ ಅರಿವು ಅರೆಹೊರೆದ ಮೊಟ್ಟೆ, ದೊರೆ ; ಚಿಪ್ಪೊಡೆದು
ಬರಲಿ ಪರಿಪೂರ್ಣಾವತಾರಿ ವಿನತಾಪುತ್ರ -
ಗಾಳಿಕಡೆಯಲು ಸೆಟೆದ ಬೆಳ್ಳಿ ಮಿಂತು,
ನಿನ್ನ ತೊಡೆ ಹೊರೆಕೆಳಗೆ ಮೆತ್ತೆ-ಸಡಿಲು.

—ರಾಘವೇಂದ್ರ ಪಾಟೀಲ

ಬೆಳಗೆರೆ ಜಾನಕಮ್ಮ : ಬದುಕು ಬರಹ

ಸಂಪಾದಕಿ: ನೇಮಿಚಂದ್ರ

ಪ್ರಕಾಶಕರು: ಕರ್ನಾಟಕ ಲೇಖಕಿಯರ ಸಂಘ, ಬೆಂಗಳೂರು

ಪುಟ: 170, ಬೆಲೆ: ರೂ. 20-00

ಸ್ವಾತಂತ್ರ್ಯ ಪೂರ್ವದಲ್ಲಿಯೇ ಕವಿತೆ ಬರೆದ ಒಬ್ಬ ಕವಯಿತ್ರಿಯ ಜೀವನ ಮತ್ತು ಸಾಹಿತ್ಯ ಕುರಿತ ಪುಸ್ತಕ ಇದು. ಇದರಲ್ಲಿ ಮೂರು ಭಾಗಗಳಿವೆ. ಮೊದಲ ಭಾಗದಲ್ಲಿ ಜಾನಕಮ್ಮನವರ ಪ್ರಕಟಿತ ಸಂಕಲನ 'ಕಲ್ಯಾಣ'ದಲ್ಲಿದ್ದ ಕವನಗಳಿವೆ. ಎರಡನೆ ಭಾಗದಲ್ಲಿ ಅಪ್ರಕಟಿತ ಕವಿತೆಗಳಿವೆ. ಮೂರನೇ ಭಾಗದಲ್ಲಿ ಪತ್ರರೂಪದ ಕವನಗಳಿವೆ. ಮುನ್ನುಡಿಯಲ್ಲಿ ಜಾನಕಮ್ಮನವರ ಬದುಕು ಮತ್ತು ಸಾಹಿತ್ಯಾಸಕ್ತಿ ಬೆಳೆದ ರೀತಿಗಳ ಪರಿಚಯವಿದೆ.

ಕನ್ನಡ ಮಹಿಳಾ ಸಾಹಿತ್ಯದ ಅಧ್ಯಯನ ಎಂದಿನಿಂದಲೂ ಸಾಮಗ್ರಿಯ ಕೊರತೆಯನ್ನು ಅನುಭವಿಸುತ್ತಿದೆ. ಅದರಿಂದಾಗಿಯೇ ಕೆಲವು ತಪ್ಪುಗ್ರಹಿಕೆಗಳೂ ಸಾಹಿತ್ಯ ವಲಯಗಳಲ್ಲಿವೆ. ಇಂಥ ಗ್ರಹಿಕೆಯೊಂದರ ಸತ್ಯಾಸತ್ಯತೆಯ ಮೇಲೆ ಬೆಳಕು ಚೆಲ್ಲುವಂಥ ಕೃತಿ "ಬೆಳಗೆರೆ ಜಾನಕಮ್ಮ:ಬದುಕು ಬರಹ". ನವೋದಯ ಕಾಲದಲ್ಲಿ ಕವಯಿತ್ರಿಯರೇ ಇರಲಿಲ್ಲ ಎಂಬ ಮಾತು ಇಂಥ ಗ್ರಹಿಕೆಗಳಲ್ಲೊಂದು. ಬಹುಶ್ರುತರಾದ ವಿಮರ್ಶಕರು ಕೂಡ ಕನ್ನಡದಲ್ಲಿ ಮಹಿಳೆಯರು ಕವಿತೆ ಬರೆಯತೊಡಗಿದ್ದು ಎಪ್ಪತ್ತರ ದಶಕದಲ್ಲಿ, ನವ್ಯದ ಸಮೃದ್ಧಿಯಲ್ಲಿ ಎಂದು ಹೇಳುತ್ತಾರೆ. ಕೆಲವರು ಇನ್ನೂ ಮುಂದೆ ಹೋಗಿ ಈ ಕವಿತೆ ಬರೆವ ಎಚ್ಚರ ಬಂಡಾಯ/ದಲಿತ ಸಾಹಿತ್ಯದ ಅರಿವಿನೊಂದಿಗೆ ಬಂದುದು ಎಂದು ಭಾವಿಸುತ್ತಾರೆ.

ಈ ಮಾಡಿಕೆಯ ಮಾತುಗಳಿಗೆ ಅಪವಾದವೆಂಬಂತೆ ಜಾನಕಮ್ಮನವರ ಕವಿತೆ ಇದೆ. ಬಡತನದ ನೋವು, ಸಾಂಸಾರಿಕ ಸಂಕಟಗಳು, ಕೌಟುಂಬಿಕ ಉತ್ಸಾಹ ಎಲ್ಲವನ್ನೂ ಜಾನಕಮ್ಮನವರ ಕವಿತೆ ಹಿಡಿದಿಟ್ಟಿದೆ. ಅಂದಿನ ನವೋದಯ ಲಯಗಳು ಸಮರ್ಥವಾಗಿ ಮೂಡಿಬಂದಿವೆ. ಶ್ರೀಯವರ ಇಂಗ್ಲಿಷ್ ಗೀತೆಗಳಲ್ಲಿ, ಕೆ.ಎಸ್.ನ. ಅವರ ಕವಿತೆಗಳಲ್ಲಿ ಕಂಡುಬರುವಂಥ ವಿಶಿಷ್ಟ ಲಯಗಳನ್ನು ಜಾನಕಮ್ಮನವರ ಕವಿತೆಗಳಲ್ಲಿ ಗುರುತಿಸಬಹುದು. ಸಾಂಪ್ರದಾಯಿಕ ವಿದ್ಯಾಭ್ಯಾಸವನ್ನು ಪಡೆಯದ_ಸಮಕಾಲೀನ ಕವಿತೆಯ ಬೆಳವಣಿಗೆಯನ್ನು ಕೂಡ ತನ್ನ ಮನೆಯಂಗಳದ ಮಿತಿಯಲ್ಲಷ್ಟೇ ಅಭ್ಯಸಿಸಿದ ಈ ಕವಯಿತ್ರಿಗೆ ಲಯದ ಮೇಲಿರುವ ಪ್ರಭುತ್ವ ಆಶ್ಚರ್ಯಕರವಾಗಿದೆ.

ಜಾನಕಮ್ಮನವರು ತಮ್ಮ ಕವಿತೆಗಳಿಗೆ ಆಯ್ದುಕೊಂಡಿರುವ ವಸ್ತುಗಳು ಸರ್ವೇಸಾಧಾರಣವಾದವು. ಶಾಲೆಗೆ ಹೋಗಲು ಹಟ ಮಾಡುವ ಹುಡುಗ, ಮನೆಗೆಲಸಕ್ಕೆ ಬಾರದೆ ಜಾತ್ರೆಗೆ ಹೋಗುವ ಕೆಲಸದ ಹುಡುಗಿ, ಕರಕುಶಲೆ ಗಂಗಜ್ಜಿ-ಇಂಥ ದೈನಂದಿನ

ಜೀವನದ ಅನುಭವಗಳು, ಚಿತ್ರಗಳು; ಇವುಗಳ ಜೊತೆಗೆ ಪ್ರಾರ್ಥನೆಯ ಪದ್ಯಗಳೂ ಇವೆ. ಇವರ ಕವಿತೆಗಳಲ್ಲಿರುವ ಮೌಲ್ಯಗಳು ಹೆಚ್ಚಾಗಿ ಪರಂಪರೆಯನ್ನು ಒಪ್ಪಿಕೊಂಡಿರುವಂಥವು. ಕೆಲವು ಕವಿತೆಗಳಲ್ಲಿ ಪರಿಸರದ ಕುರಿತ ಅಸಹನೆ-ಬಂಡೇಳುವ ಪ್ರವೃತ್ತಿಗಳೂ ಕಂಡುಬರುತ್ತವೆ. ಪೂಜೆ ಪ್ರಾರ್ಥನೆಗಳ ಕವಿತೆ ಕಟ್ಟುವ ಕವಿಯೇ

"ಗಿಡವೆಂದು ಬಗೆದೆಯೋ
ಹೆಣ್ಣು ಜನ್ಮದ ಒಡಲ
ಫಲಗಳನು ಸೃಷ್ಟಿಸುವುದಕೆ" (ಚಂಡಶಾಸನ)

ಎಂದು ಸೃಷ್ಟಿಕರ್ತನನ್ನು ಗಟ್ಟಿಸಿ ಕೇಳುತ್ತಾರೆ.

'ದಟ್ಟಿ', 'ಚಂಡಶಾಸನ', 'ಗಂಡ'–ಈ ಕವನಗಳಲ್ಲಿ ಸಾಂಪ್ರದಾಯಿಕ ಮೌಲ್ಯಗಳಾಚೆಗೆ ಚಿಂತಿಸಬಲ್ಲ ಮನೋಧರ್ಮ ಕಂಡುಬರುತ್ತದೆ.

"ಗಂಡನೆಂದರೆ ಪ್ರಾಣಗಂಡ–ಹೆಣ್ಣೆ ನೀ ಗಂಡನ ಕೂಡಿಕೊಂಡ್ಯ
ನೋಡು, ಮಂಡೂಕ ಸರ್ಪದ ನೆಳಲಿಗೆ ಹೋದಂತೆ"

ಎಂದು ತನ್ನ ಅನುಭವ ಗ್ರಹಿಕೆಗಳನ್ನು ನಿರ್ಭಿಡೆಯಿಂದ ಅನಾವರಣಗೊಳಿಸುವ ಕವಯಿತ್ರಿ ಅದೇ ಪದ್ಯದ ಕೊನೆಯಲ್ಲಿ "ಸತಿಯು ಚಿತ್ತವ ನೀನನುಸರಿಸು" ಎಂಬ ಪರಂಪರಾಗತ ಮೌಲ್ಯಕ್ಕೆ ಶರಣಾಗಿ ಬಿಡುತ್ತಾರೆ.

ಬಂಧ ರೂಪಗಳ ದೃಷ್ಟಿಯಿಂದಲೂ ಉತ್ತಮವಾದ ಕವನ 'ಗುಬ್ಬಿ'. ಜಂತೆಯ ಸಂದಿಯಲ್ಲಿ ಗೂಡುಕಟ್ಟಿದ ಗುಬ್ಬಿಯ ಚಿನ್ನಾಟ, ಅದನ್ನು ನೋಡಿ ಮೈಮರೆತು ಕವಿ ಸೃಷ್ಟಿಯ ಕುರಿತು ಸೂಚಿಸುವ ಬೆರಗು ಬಹುಸುಂದರವಾಗಿ ಇಲ್ಲಿ ಮೂಡಿದೆ. 'ದುರ್ದೈವಿ' ಕವಿತೆಯಲ್ಲಿ ಸ್ಪಷ್ಟವಾಗಿ ಶ್ರೀಯುವರ ದುಃಖಸೇತುವಿನ ಪ್ರಭಾವವಿದೆ.

ಅನುಬಂಧದಲ್ಲಿರುವ ಓಲೆಯಾದ ಕವನಗಳಲ್ಲಿ ಜಾನಕಮ್ಮನವರ ಬಗ್ಗೆ ಬೇರೆಯವರು ಪತ್ರರೂಪದಲ್ಲಿ ಬರೆದ ಕವನಗಳು, ಅವರು ಬೇರೆಯವರಿಗೆ ಬರೆದ ಕವನ/ಪತ್ರಗಳು ಸೇರಿವೆ. ತಮ್ಮ ಸಮಕಾಲೀನ ಕವಿಗಳಿಂದ ಜಾನಕಮ್ಮನವರಿಗೆ ದೊರೆತ ಮೆಚ್ಚಿಗೆ, ಪ್ರಶಂಸೆ, ಶುಭಹಾರೈಕೆಗಳನ್ನಷ್ಟೇ ಇಲ್ಲಿ ನೋಡಬಹುದು. ಇದರಿಂದಾಚೆಗೆ ಕವಿತೆಯನ್ನು ಮುಖ್ಯವಾಗಿಟ್ಟುಕೊಂಡು ವಿವೇಚಿಸುವ ಪ್ರಯತ್ನ ಇಲ್ಲಿಲ್ಲ.

ಕವಯಿತ್ರಿಯ ಜೀವನದ ಮೇಲೆ ಬೆಳಕು ಚೆಲ್ಲಿರುವ ಸಂಪಾದಕಿ ನೇಮಿಚಂದ್ರರ ಮುನ್ನುಡಿ ಅವರ ಸಂಶೋಧನೆ ಅಧ್ಯಯನಗಳ ಅಚ್ಚುಕಟ್ಟನ್ನು ತೋರುತ್ತದೆ. ಮಹಿಳಾ ಸಾಹಿತ್ಯದ ಅಧ್ಯಯನಕ್ಕೆ ಒಂದು ಹೊಸತಿರುವು ಕೊಡಬಹುದಾದ ಕೃತಿಯಿದು.

—ಸ. ಉಷಾ

ಭೂಮಿ ಬದುಕಿನ ಗಂಧ (ಕವನ ಸಂಕಲನ)

ಲೇಖಕರು: **ಸತ್ಯನಾರಾಯಣರಾವ್ ಅಣತಿ**

ಪ್ರಕಾಶಕರು: ಪರಿಸರ ಸಾಹಿತ್ಯ ಪ್ರಕಾಶನ, ಶಿವಮೊಗ್ಗ

ಪುಟ: 67, ಬೆಲೆ: ರೂ. 15–00

ಇದು ಅಣತಿಯವರ ಮೂರನೇ ಕವನ ಸಂಕಲನ. ನವ್ಯಕಾವ್ಯ ಆಂದೋಲನದ ಕೊನೆಗಾಲದಲ್ಲಿ ತಮ್ಮ ಎರಡನೇ ಕವನ ಸಂಕಲನ 'ಹಿಪ್ಪೆಮರ'ವನ್ನು (1974) ಪ್ರಕಟಿಸಿದ ಅಣತಿಯವರು ನಂತರದ ಒಂದು ದಶಕದ ಕಾಲ ಕಾವ್ಯವೈರಾಗ್ಯ ತಳೆದವರು. ಪ್ರಸ್ತುತ ಸಂಕಲನದ ಬಹುಪಾಲು ಕವನಗಳು 1985ರಿಂದೀಚೆಗೆ ಬರೆದಂಥವು. ಆದರೆ ಈ ಕವನಗಳನ್ನು ಓದಿದಾಗ ಅಣತಿಯವರ ಈ ಕಾವ್ಯವೈರಾಗ್ಯ ಅನುಚಿತವೂ, ಉದ್ದೇಶರಹಿತವೂ ಆಗಿತ್ತೆನಿಸಿದರೆ ಆಶ್ಚರ್ಯವಿಲ್ಲ. ಏಕೆಂದರೆ ಈ ಸಂಕಲನದ ಮುನ್ನುಡಿಕಾರ ಶಾಂತಿನಾಥ ದೇಸಾಯಿಯವರು ಹೇಳುವಂತೆ 'ಹಿಪ್ಪೆ ಮರ'ದ ಮೂಲಕ "ಇನ್ನೇನು ಇಷ್ಟರಲ್ಲೇ ಈ ಕವಿ ಕನ್ನಡದ ಮಹತ್ವದ ಕವಿಗಳ ಸಾಲಿನಲ್ಲಿ ಸೇರುತ್ತಾನೆ ಎಂಬ ಭರವಸೆಯನ್ನು ಹುಟ್ಟಿಸಿದ್ದ" ಅಣತಿಯವರು ತಮ್ಮ ಮೂರನೇ ಕವನ ಸಂಕಲನದ ಹೊತ್ತಿಗೆ ತಮ್ಮ ಕಾವ್ಯ ಪ್ರತಿಭೆಯ ನಿರಂತರತೆಯನ್ನು ಕಳೆದುಕೊಂಡು ಮತ್ತೆ ವಿವಿಧ ಕಾವ್ಯಶೈಲಿಗಳ ಪ್ರಯೋಗ ಮಾಡುತ್ತಾ ತಮ್ಮನ್ನು ತಾವೇ ಮತ್ತೆ ಹುಡುಕಿಕೊಳ್ಳುವ ತರಾತುರಿಯಲ್ಲಿದ್ದಂತೆ ತೋರುತ್ತದೆ. ಈ ಅರ್ಥ ದಲ್ಲಿ 'ಭೂಮಿ ಬದುಕಿನ ಗಂಧ' ಆಧುನಿಕ ಕನ್ನಡ ಕಾವ್ಯ ಈವರೆಗೆ ಕಂಡಿರುವ ಹಲವು ಕಾವ್ಯಶೈಲಿಗಳ ರೀಪ್ಲೇ ಇದ್ದಂತಿದೆ:

> ಕವಿ ಕಂಡ ಕನಸಿನ ಕನ್ಯೆ
> ಅಕ್ಷರದೊಳು ನೀ ಮೂಡಿ ಧನ್ಯೆ. (ಕನಕಾಂಗಿ)

ಎಂಬ ನವೋದಯ ಶೈಲಿ ಮೆಲ್ಲಗೆ ನುಣುಪಾಗುತ್ತಾ–

> ಕಟಿಪಟ್ಟಿ ಬಿಗಿತಕ್ಕೆ
> ಬೆಡಗೊಡೆದ ನಿತಂಬ
> ಹೊತ್ತು ನಿಂತ ತೊಡೆ
> ಬಾಳೆಯ ಕಂಬ
> ಕಾಲುಗೆಜ್ಜೆಯ ನಾದ
> ಮೂಡಿಸುವ ಉನ್ಮಾದ (ಭಾವ ಭ್ರಮಿಸುವ ಭಂಗಿ)

ಎಂಬ ಅತಿ ನವ್ಯ ಶೈಲಿಗೆ ನುಸುಳಿ–

> ಹೇಳಿ
> ಪ್ರಮೀಳೆ ನಾಡವಳೆ

ನಿನ್ನ ನಗುವಿನ ಅರ್ಥ ಹೇಳಿ
ಇಲ್ಲದಿರೆ
ಮುಷ್ಟಿ ಮೈಥುನ ವ್ಯರ್ಥ ಕೇಳಿ (ಮೂರು ನಗುವಿನ ಹಾಡು)

ಎಂಬ ಮುಕ್ತ ನವ್ಯಶೈಲಿಯ ಚೇಷ್ಟೆಗೆ ಇಳಿದು ಸಾವರಿಸಿಕೊಂಡು–

ಹಣ ಹದ್ದುಗಳಿರಾ
ನಿಮ್ಮ ಕೊಕ್ಕಿನ ಸೊಕ್ಕಿನಲಿ
ಸಿಕ್ಕಿ ನರಳುವ ನಮ್ಮ
ನಿಟ್ಟುಸಿರು ಸುಡದಿಹುದೇ ನಿಮ್ಮ ? (ದಹನ)

ಎಂಬ ಬಂಡಾಯ ಶೈಲಿಯಲ್ಲಿ ಆರ್ಭಟಿಸಿ ಆಯಾಸಗೊಂಡು–

ರಾಜವಸ್ತ್ರವ ಕಳಚಿ ಕಾಷಾಯ ಧರಿಸಿ
ತಂದೆ ತಾಯಿ ಎದುರಿನಲೆ ಪ್ರವ್ರಜ್ಯೆ ಸ್ವೀಕರಿಸಿ
ಪರಿವ್ರಾಜಕನಾಗಿ ಇಟ್ಟ ದಿಟ್ಟ ಹೆಜ್ಜೆ
ಕವಿ ಹೃದಯದಿ ಮಾರ್ದನಿಸುವ
ಕಾರುಣ್ಯದ ಗೆಜ್ಜೆ (ನಗುವ ಬುದ್ಧ)

ಎಂಬ ಕಾರುಣ್ಯ ಬೋಧಿಸುವ ಖಂಡಕಾವ್ಯವಾಗಿ ಮಾರ್ಪಾಟಾಗುತ್ತದೆ.

ಇಷ್ಟೆಲ್ಲಾ ಅಲೆದಾಟದ ನಡುವೆಯೂ, ಈ ಸಂಕಲನದ ಮೊದಲ ನಾಲ್ಕೈದು ಪದ್ಯಗಳನ್ನು ಬಿಟ್ಟರೆ, ಮಿಕ್ಕೆಲ್ಲ ಪದ್ಯಗಳಲ್ಲೂ ಅಣತಿ ತಮ್ಮ ಅನುಭೂತಿಗೆ ದಕ್ಕಿದಷ್ಟನ್ನು ಕಾವ್ಯವಾಗಿಸುವ ದಕ್ಷತೆ ತೋರಿಸಿದ್ದಾರೆ:

ಇಪ್ಪತ್ತು ಸಲ
ಋತುಚಕ್ರ ಸುತ್ತಿದರೂ
ಆ ಒಪ್ಪತ್ತಿನ ಒನಪು ವಯ್ಯಾರ
ಬಿಂಕ ಬಿನ್ನಾಣ
ಕಣ್ಣು ಕೆನ್ನೆ ತುಟಿ
ಕಟಿಯಷ್ಟೆ ಅಲ್ಲಾ
    ಇಡಿಯಾಗಿ ಮೈಮನದ
    ಪಡಿನುಡಿ
    ಕವಿತೆ
ಚಿಮ್ಮುವ
ಒರತೆ (ಪಡಿನುಡಿ)

ಎಂಬ ಅರಿವು ಕವಿಗಿದೆ. ಇದಕ್ಕೆ ಸಾಕ್ಷಿಯೆಂಬಂತೆ 'ಮುಂಮಾಗಿ ಕವಿತೆ', 'ತಿರುವನಂತಪುರ', 'ಮಾತು-ಮೌನ', 'ಭೂಮಿ ಬದುಕಿನ ಗಂಧ', 'ಅಮೃತಮತಿ' ಹಾಗೂ 'ನೆನಪು'ಗಳಂತಹ ಸುಂದರ ಕವನಗಳು ಮೂಡಿಬಂದಿವೆ. ಆದರೆ ಕಾವ್ಯವೆಂದರೆ ಶಬ್ದ ಶಿಬ್ದಶಿಲ್ಪ ಮಾತ್ರವಲ್ಲವಾದ್ದರಿಂದ ಕವಿಯೇ ಒಂದು ಕಡೆ ಅನುಮಾನಿಸುವಂತೆ-

ನೀ ನಕ್ಕದ್ದೇಕೆ
ಮೋಹಕ
ಭ್ರಾಮಕ
ಮುಗ್ಧ
ಇದಿಷ್ಟು
ಶಬ್ದ ಸೂತಕವಷ್ಟೇ (ಮೂರು ನಗುವಿನ ಹಾಡು)

ಎಂದೆನ್ನಿಸುವ ಅಪಾಯವಿದೆ. ಇದು ಅರಿವಿಗೆ ಬಂದೋ ಏನೋ ಅಣತಿ 'ನಗುವ ಬುದ್ಧ' ಎಂಬ ಮಹಾತ್ವಾಕಾಂಕ್ಷೆ ಪ್ರಕಟಿಸುವ ಖಂಡಕಾವ್ಯವನ್ನು ಬರೆದಿದ್ದಾರೆ. ಆದರೆ ಸಿದ್ಧಾರ್ಥ ಮನೆ ಬಿಟ್ಟು ಬುದ್ಧನಾಗುವ ತನಕ ಹಬ್ಬಿರುವ ಈ ದೀರ್ಘಕವನ ಕೂಡಾ ಅಲ್ಲಲ್ಲಿ ಮಿಂಚುವ ಸುಂದರ ಶಬ್ದಚಿತ್ರಗಳ ಹೊರತಾಗಿ, ನಮ್ಮ ಒಳಗಿನ ಜೀವವನ್ನು ಅಲ್ಲಾಡಿಸುವುದಿಲ್ಲ.

ಇದೆಲ್ಲದಕ್ಕೆ ಕಾರಣ, ಮುನ್ನುಡಿಕಾರ ಶಾಂತಿನಾಥ ದೇಸಾಯಿಯವರೇ ವಂತೆ "ಇವರು 'ಏನೋ ಒಂದು' ಅರಸುವ ಆತಂಕದಲ್ಲಿದ್ದಾರೆ". ಆ 'ಏನೋ ಒಂದು' ದಕ್ಕುವವರೆಗೆ ಅಣತಿಯವರು ಕಾಯಬೇಕಾಗಿದೆ.

—ಡಿ. ಎಸ್. ನಾಗಭೂಷಣ

ಮೊದಲ ನೋಟ

ಕವಿ ಮತ್ತು ಕರವಸ್ತ್ರ (ಕವನ ಸಂಕಲನ)
ಲೇಖಕರು: ಕುಮಾರ ಜೋಶಿ

ಕುಮಾರ ಜೋಶಿಯವರ ಈ ಕವನ ಸಂಕಲನದಲ್ಲಿ 24 ಕವಿತೆಗಳಿವೆ. ಮಧ್ಯೆ ಮಧ್ಯೆ ಕೆಲವು ಹನಿಗವಿತೆಗಳಿವೆ, ರೂಢಮೌಲ್ಯಗಳ ಬಗ್ಗೆ ಅನುಮಾನ, ಬದಲಾವಣೆಯ ಬಯಕೆ, ನಗರ ಜೀವನವನ್ನು ಕುರಿತ ವ್ಯಂಗ್ಯ, ಪ್ರೀತಿಯ ಹಂಬಲ ಈ ಕವಿತೆಗಳ ಪ್ರೇರಣೆಯಾಗಿವೆ.

ಕೆಲವು ಕವಿತೆಗಳು ಆರಂಭದಲ್ಲಿ ಒಂದು ಸುಂದರ ಚಿತ್ರದೊಡನೆ ಪ್ರಾರಂಭವಾಗಿ ಕೊನೆಗೆ ವಾಚಾಳವಾಗಿ ಬಿಡುತ್ತವೆ. ಉದಾ: "ಎಳಸುಳಿಯ ಮೊದಲ ಪಾಠ", "ಬೆಕ್ಕಿಗೆ ಗಂಟೆ". ಕೆಲವು ಕವಿತೆಗಳು ಅತ್ಯಂತ ಆಪ್ತವಾದುದನ್ನು, ವೈಯುಕ್ತಿಕವಾದುದನ್ನು ನಿರೂಪಿಸುವಾಗ ತಮ್ಮ ತೀವ್ರತೆ, ಭಾವುಕತೆಗಳಿಂದಲೇ ಹೆಚ್ಚಿನ ಯಶಸ್ಸು ಸೌಂದರ್ಯಗಳನ್ನು ಪಡೆಯುತ್ತವೆ. ಉದಾ; "ಗುಮ್ಮ", "ಬಾ ಬರುವೆಯಾ", "ಇಲ್ಲದ ಸೇತುವೆಯ ಕುರಿತು". ಇದೇ ಸಂವೇದನೆ "ಇಪ್ಪತ್ತೆಂಟರಲ್ಲಿ", "ಮುಂಬೈಯಲ್ಲಿ ಬರೆದದ್ದು", "ಜಾತ್ರೆ ಅಂದರೆ"–ಈ ಕವಿತೆಗಳಲ್ಲಿ ಹೆಚ್ಚು ಸಂಕೀರ್ಣವಾದ ಅಭಿವ್ಯಕ್ತಿಯನ್ನು ಪಡೆದುಕೊಂಡು ನಗರ ಜೀವನವನ್ನು ಕುರಿತ ವ್ಯಂಗ್ಯ, ಮನುಷ್ಯ ಸಂಬಂಧಗಳು ಅರ್ಥಹೀನವಾಗುವುದರ ಬಗೆಗಿನ ವಿಷಾದವನ್ನು ಹಿಡಿದಿಟ್ಟಿವೆ. "ನೀವಾದರೂ", "ಅಣ್ವಸ್ತ್ರ ಮತ್ತು ಮಖಮಲ್ ಟೊಪ್ಪಿಗೆ" ಇಂಥ ಕವನಗಳು ಹೆಚ್ಚು ಮಹತ್ವಾಕಾಂಕ್ಷಿಯಾದವು. ಕುತೂಹಲ ಹುಟ್ಟಿಸುವ ಸಂಕಲನ.

ಇನ್ನೊಬ್ಬಳು ಶಕುಂತಲೆ (ಕವನ ಸಂಕಲನ)

ಲೇಖಕರು: ಕೆ. ಎಂ. ಮುನಿಕೃಷ್ಣಪ್ಪ

ವರ್ಣರಂಜಿತವಾದ ರಕ್ಷಾಪುಟ, ಒಳ್ಳೆಯ ಕಾಗದ ಹಾಗೂ ಸುಂದರವಾದ ಮುದ್ರಣದಿಂದ ಭರ್ಜರಿಯಾಗಿ ತಯಾರಾಗಿರುವ ಈ ಸಂಕಲನದ ಒಳಹೂರಣ ಮಾತ್ರ ನಿರಾಶದಾಯಕವಾಗಿದೆ. ಮುನಿಕೃಷ್ಣಪ್ಪನವರು ತಮ್ಮ ಮೊದಲ ಕವನ ಸಂಕಲನ 'ಮೊದಲು ಗೊತ್ತಿರಲಿಲ್ಲ'ದಿಂದ ಬಹುಮುಖವಾಗಿ ಬೆಳೆದಿದ್ದಾರೆ ಎಂಬ ಮುನ್ನುಡಿಕಾರ ಶಂಕರ ಮೊಕಾಶಿ ಪುಣೇಕರರ ಮಾತುಗಳಿಗೆ ಪುಷ್ಟಿ ಕೊಡುವ ಸಾಲುಗಳು ಈ ಸಂಕಲನದಲ್ಲಿ ನಮ್ಮ ಕಣ್ಣಿಗಂತೂ ಬಿದ್ದಿಲ್ಲ. ಬಹಳಷ್ಟು ಕವನಗಳು ತೀವ್ರತೆ ಇಲ್ಲದೆ ಬರೆದಂಥವು. ಮತ್ತೆ ಕೆಲವಂತೂ (ಗಪದ್ಯಗಳೆಂಬ ಅಭಿನಾಮದೊಂದಿಗೆ) ಏಕೆ ಇವನ್ನು ಬರೆಯಲಾಗಿದೆ ಎಂಬುದೇ ಗೊತ್ತಾಗುವುದಿಲ್ಲ. ಕವಿತೆ ಸರಳವಾಗಿರಬೇಕೆಂಬ ಮಾತನ್ನು ಕವಿ ತೀರಾ ಸರಳವಾಗಿ ಅರ್ಥಮಾಡಿಕೊಂಡಿರುವರೆನಿಸುತ್ತದೆ. ಇಲ್ಲಿ ಸಿಟ್ಟು, ವ್ಯಂಗ್ಯ. ಕರುಣೆ, ಪ್ರೀತಿಗಳೂ ಸರಳೀಕರಣಗೊಂಡು ಧ್ವನಿಹೀನವಾಗಿವೆ. ಹಾಗೆಯೇ 'ಇನ್ನೊಬ್ಬಳು ಶಕುಂತಲೆ', 'ನೆನಪಿನಂಗಳದಲ್ಲಿ ಕತ್ತಲಾದಂತೆಲ್ಲ' ಹಾಗೂ ಹಾಡಲು ಬರೆದಂತೆ ತೋರುವ 'ಐಕ್ಯಗಾನ' ಮತ್ತು 'ನಗುವ ಮಕ್ಕಳು'–ಈ ಕವಿತೆಗಳು ಮುನಿಕೃಷ್ಣಪ್ಪನವರು ಕಾವ್ಯರಚನೆಯನ್ನು ಗಂಭೀರವಾಗಿ ತೆಗೆದುಕೊಂಡರೆ ಒಳ್ಳೆಯ ರಚನೆಗಳನ್ನು ಕೊಡಬಲ್ಲರು ಎಂಬ ಗುಟ್ಟನ್ನೂ ಹೇಳುತ್ತವೆ.

ಸಿಕ್ಕಿದ್ದು (ಕಾದಂಬರಿ)
ಲೇಖಕರು: ಮೋಹನ್‌ದಾಸ್ ಥಾವಸ್‌ಕರ್

ಒಬ್ಬ ಹದಿವಯಸ್ಸಿನ ಹುಡುಗ ಬಾಲು ತನ್ನ ಬೆಳವಣಿಗೆಯ ಹಾದಿಯಲ್ಲಿ ಕಂಡ ಕಟುವಾಸ್ತವದ ವಿವರಗಳನ್ನು ಕಾಮ, ಕ್ರೌರ್ಯ, ಔದಾರ್ಯಗಳ ಪ್ರಪಂಚದ ಚಿತ್ರಣವನ್ನು ಈ ಕಾದಂಬರಿಯ ಪೂರ್ವಾರ್ಧ ಚಿತ್ರಿಸುತ್ತದೆ. ಉತ್ತರಾರ್ಧದಲ್ಲಿ ತಾನು ಬಾಳಿದ ಕ್ರೌರ್ಯದ ಪ್ರಪಂಚದಿಂದ ಹೊರಬಂದು ವಾತ್ಸಲ್ಯದ ಹೊರೆ ಹೊರ ಬಯಸುವ ಪ್ರೌಢ ಜಗ್ಗಯ್ಯ, ಬಚ್ಚಿಟ್ಟ ಜನ್ಮರಹಸ್ಯಗಳನ್ನು ತಿಳಿದು ಬದಲಾದ ವಸ್ತು ವಸ್ತುಸ್ಥಿತಿಗೆ ಆಘಾತಗೊಂಡಾಗಲೂ ತನ್ನ ಶ್ರದ್ಧೆ ಅಲುಗಾಡದ ಹಾಗೆ ಕಾದು ಕೊಳ್ಳಲು ಮಾಡಿದ ಪ್ರಯತ್ನವನ್ನೂ ನಿರೂಪಿಸುತ್ತದೆ. ಈ ಎರಡು ಪಾತ್ರಗಳ ಅನುಭವಗಳ ಮೇಲೆ ಕಾದಂಬರಿಯ ಹಂದರ ಹಬ್ಬಿದೆ. ಗಂಡು ಹೆಣ್ಣಿನ ಸಂಬಂಧದ ಘಟನಾವಳಿಗಳು ಇಲ್ಲಿ ಮುಖ್ಯವಾಗಿವೆ.

ಆದರೆ ಈ ಕಾದಂಬರಿಯಲ್ಲಿ ಮುಖ್ಯವಾಗಿ ನಿರೂಪಕನಿಗೆ ಬೇಕಾದ ನಿರ್ಲಿಪ್ತಿಯ ಅಭಾವ, ಪಾತ್ರಗಳ ಅಂತರಂಗವನ್ನು ನಿರೂಪಿಸುವ ಅವಕಾಶ ಸಿಕ್ಕಾಗಲೂ ಅದನ್ನು ಸೂಕ್ಷ್ಮವಾಗಿ ಬಿಡಿಸದೆ ಹೋಗುವುದು, (ಉದಾ: ಜಗ್ಗಯ್ಯನಿಗೆ ನಂದಿನಿ ತನ್ನ ಮಗಳೇ ಅಲ್ಲವೆಂದು ತಿಳಿದಾಗ ಅವನ ಭಾವನೆಗಳು) ಹಾಗೂ ಕಥೆ ಹೇಳಿ ಮುಗಿಸಬೇಕೆನ್ನುವ ಆತುರ—ಇವುಗಳಿಂದ ಕಾದಂಬರಿ ಕಾದಂಬರಿಯಾಗಿ ರೂಪುಗೊಳ್ಳದೆ, ಕಥಾನಕ ಮತ್ತು ಘಟನಾವಳಿಗಳಾಗೇ ಉಳಿದು ಬಿಡುತ್ತದೆ.

ನವಿಲು ಕಿನ್ನರಿ (ಕವನ ಸಂಕಲನ)
ಲೇಖಕರು: ಲಕ್ಷ್ಮೀಪತಿ

ಇದು ಈ ಕವಿಯ ಮೊದಲ ಕವನ ಸಂಕಲನ. ಈ ದೃಷ್ಟಿಯಿಂದ ನೋಡಿದಾಗ ಇಲ್ಲಿನ ರಚನೆಗಳಲ್ಲಿ ಕಾಣುವ ದಕ್ಷತೆ ಮೆಚ್ಚುವಂತಹುದು. 'ಬಾವಲಿ', "ನವಿಲು ಕಿನ್ನರಿ', 'ರಮಜಾನಿನ ಕೊನೆಯ ರಾತ್ರಿ', 'ಗಿಳಿಯು ಪಂಜರದೊಳಿಲ್ಲ' ಹಾಗೂ 'ಮಕ್ಕಲಿ ಘೋಶಾಲ್'—ಇವು ನುರಿತ ಕವಿಗಳು ಕೂಡಾ ಕರುಬಬಹುದಾದಂತಹ ಶಾಬ್ದಿಕ ರಚನೆಗಳು. ಆದರೆ ಹೊಸಕವಿ ಎಂಬ ರಿಯಾಯಿತಿ ಇಲ್ಲದೆ ನೋಡಿದಾಗ ಇವು ಅರ್ಥ ಸ್ಫುರಣೆಯ ದೃಷ್ಟಿಯಿಂದ ಅಭ್ಯಾಸ ಕವನಗಳಂತೆ ಕಾಣುತ್ತವೆ. ಒಮ್ಮೆಗೇ ಸಮುದ್ರ ಹಾರಲು ಹೊರಟಂತಿರುವ ಲಕ್ಷ್ಮೀಪತಿಯವರು ಕೊಂಚ ಸಾವಧಾನದಿಂದ ಕಾವ್ಯಸರಸ್ವತಿಯನ್ನು ಒಲಿಸಿಕೊಳ್ಳಲು ಪ್ರಯತ್ನಿಸಿದರೆ ಒಳ್ಳಿತೆಂಬುದಕ್ಕೆ ಇಲ್ಲಿನ ಬಹುತೇಕ ಕವನಗಳಲ್ಲಿ, ಕವಿಯೇ ಸೃಷ್ಟಿಸಿದ ಶಬ್ದ ಸಂಕೀರ್ಣತೆಯಲ್ಲಿ ಕವಿ ಹೊರಬರ

ಲಾಗದಷ್ಟು ಜಟಿಲವಾಗಿ ಸಿಕ್ಕಿಹಾಕಿಕೊಂಡಿರುವುದೇ ಸಾಕ್ಷಿ. ಮಹತ್ವಾಕಾಂಕ್ಷೆ ಪ್ರಕಟಿಸುವ 'ಗಾರುಡಿಗಂಗ ಭಾರತ'ದಲ್ಲಿ ಕಾವ್ಯ ಕಳೆದುಹೋಗಿರುವುದೇ ಹೀಗೆ. ಹೀಗಾಗಿ ಲಕ್ಷ್ಮೀಪತಿಯವರು ಮುಂದಿನ ದಿನಗಳಲ್ಲಿ ಕುತೂಹಲದಿಂದ ಗಮನಿಸಬೇಕಾದ ಕವಿ ಎಂದಷ್ಟೇ ಹೇಳಬಹುದು.

ಮುಚ್ಚಿಡಲಾರೆ (ಕವನ ಸಂಕಲನ)
ಲೇಖಕರು: ಬಂದಗದ್ದೆ ರಾಧಾಕೃಷ್ಣ

ಇದು ಬಂದಗದ್ದೆ ರಾಧಾಕೃಷ್ಣ ಅವರ ಮೊದಲ ಕವನ ಸಂಕಲನ. 1981 ರಿಂದ 1986ರ ವರೆಗಿನ ಕಾಲಾವಧಿಯಲ್ಲಿ ಈ ತರುಣ ಕವಿ ಬರೆದ ಐವತ್ತು ಪದ್ಯಗಳು ಇಲ್ಲಿ ಮೂರು ಗೊಂಚಲುಗಳಲ್ಲಿ ಸಂಗ್ರಹಗೊಂಡಿವೆ. ಮೊದಲ ಗೊಂಚಲಿನ ಕವಿತೆಗಳು ಬಹುತೇಕ ಆರಂಭಕಾಲದ ಕವಿತೆಗಳಾಗಿವೆ. ಇವು ಸುತ್ತಲಿನ ನೂರೆಂಟು ವಿಷಯಗಳಿಗೆ ಕವಿ ತೋರುವ ಮುಕ್ತ ಪ್ರತಿಕ್ರಿಯೆಯ ಶಬ್ದ ಚಿತ್ರಗಳಾಗಿವೆ. ಪ್ರೀತಿ, ಕಾಮವನ್ನು ನಿರ್ದಿಷ್ಟ ವಸ್ತುವಾಗಿ ಸ್ವೀಕರಿಸುವ ಎರಡನೆಯ ಗೊಂಚಲಿನ ಪದ್ಯಗಳು ಈ ವಸ್ತು ಕುರಿತು ಹೊಸದೇನನ್ನೂ ಹೇಳಲು ಪ್ರಯತ್ನಿಸುವುದಿಲ್ಲ. ಮೂರನೆಯ ಗೊಂಚಲಿನ ಪದ್ಯಗಳು ರತ್ನನ 'ಅಮಲಿನ' ಪದ್ಯಗಳು.

ಸಂಕಲನದ ಅನೇಕ ಕವಿತೆಗಳು ಬೇರೆ ಬೇರೆ ಕವಿಗಳ ಪ್ರತಿಧ್ವನಿಗಳಂತೆ ಕೇಳಿಸುತ್ತವೆ. ಪ್ರಬಲವಾದ ಸ್ಪಂದನೆ ಕವಿತೆಗಳ ಹಿಂದೆ ಇದ್ದಾಗ ಅಂಥ ಕವಿತೆಗಳು ತಮ್ಮ ಮೂಲಧ್ವನಿಯ ನೆರಳನ್ನು ಮೀರಿ ಹೊರಬಂದು ಸ್ವತಂತ್ರವಾಗಿ ಉಸಿರಾಡಿಸಲು ಸಾಧ್ಯವಾಗುತ್ತದೆ. ಕವಿಯ ಆರಂಭದ, ಮೊದಲ ಗೊಂಚಲಿನ ಅನೇಕ ಕವಿತೆಗಳಿಗೆ ಇಂಥ ಸ್ವತಂತ್ರ ಉಸಿರಾಟ ಸಾಧ್ಯವಾಗಿ, ನಂತರದ ಹಂತದ ಕವಿತೆಗಳಲ್ಲಿ ಇದು ಸಾಧ್ಯವಾಗದೇ ಹೋದದ್ದು ವಿಚಿತ್ರವೆನಿಸುತ್ತದೆ. ಕವಿತೆ ಬರೆಯುವುದು ಗೀಳಾಗಿದ್ದರಿಂದ ಹೀಗಾಗಿರಬಹುದು.

ಈ ಕವಿಯ ಇಂಥ ಮಿತಿಗಳನ್ನು ಸುಲಭವಾಗಿ ಗುರುತಿಸಲು ಸಾಧ್ಯವಾಗುವಂತಿದ್ದರೂ, ಇವರು ತಮ್ಮ ಮೊದಲ ಸಂಕಲನದಲ್ಲಿಯೇ ತೋರುವ ಭಾಷೆಯ ಬಗೆಗಿನ ಸಂಯಮ ಮೆಚ್ಚುವಂಥದ್ದಾಗಿದೆ. ಸಂಕಲನದ 'ಸದ್ದು' ಎನ್ನುವ ಪುಟ್ಟ ಪದ್ಯವನ್ನು ಉದಾಹರಿಸಬೇಕೆನಿಸುತ್ತದೆ–

ಗೆಜ್ಜೆ ಕಟ್ಟಿಕೊಂಡವರು
ಹೆಜ್ಜೆ ಹಾಕಿದರೆ
ಘಲ್ ಘಲ್ಲನೆ ಜಣ್‌ಜಣ್ಣನೆ ಸದ್ದಾಗತ್ತೈತಿ

ಬೂಟುಗಾಲಿನವರು
ಓಡಾಡಿದರೆ
ಟಾಕು ಟೀಕಿನ ಸದ್ದಾಗತೈತಿ

ಬರಿಗಾಲಿನವರು ನಡೆದಾಡಿದರೆ
ಹೇಳಯ್ಯ ಏನಾಗತೈತಿ

ಇದು ಕೇವಲ ವ್ಯತ್ಯಾಸಗಳನ್ನು ಹೇಳುವ ಪದ್ಯವಲ್ಲ. ರಾಧಾಕೃಷ್ಣ ಇಂಥ ಪದ್ಯಗಳನ್ನು ಬರೆಯಬಲ್ಲರು. ಆದರೆ ಅದಕ್ಕಾಗಿ ಅವರು ಧ್ಯಾನಿಸುತ್ತ ಕಾಯಬೇಕಾಗುತ್ತದೆ. ಹೀಗೆ ಮಾಡುವುದು ಬಿಟ್ಟು ಪದ್ಯಗಳ ಬೇಟೆಗೆ ಹೊರಟರೆ ಬೇಟೆಯಾದ ಪದ್ಯಗಳು ದೊರೆಯಬಹುದು.

ಜೀವ (ಕವನ ಸಂಕಲನ)

ಲೇಖಕರು: ಮಹಾಬಲಮೂರ್ತಿ ಕೊಡ್ಲೆಕೆರೆ

'ಜೀವ' ಮಹಾಬಲಮೂರ್ತಿ ಕೊಡ್ಲೆಕೆರೆಯವರ ಎರಡನೆಯ ಕವನ ಸಂಕಲನ. ಈ ಸಂಕಲನಕ್ಕೆ ಮುನ್ನುಡಿ ಬರೆಯುತ್ತ ಕವಿ ಗೋಪಾಲಕೃಷ್ಣ ಅಡಿಗರು 'ಕನ್ನಡದ ತರುಣ ಕವಿಗಳಲ್ಲಿ ಅಗ್ರಪಂಕ್ತಿಗೆ ಸೇರುವ ಶ್ರೀ ಮಹಾಬಲಮೂರ್ತಿ ಕೊಡ್ಲೆಕೆರೆ ಯಾವ ಕಾಲಕ್ಕೂ ಅಪರೂಪವಾಗಿರುವ ನಿಜವಾದ ಕವಿ....' ಎಂದು ಹೇಳುವ ಮಾತುಗಳು ಆಶೀರ್ವಾದದ ಮಾತುಗಳಾಗಿ ಮಾತ್ರ ತೋರುತ್ತವೆ. 'ಜೀವ' ಸಂಕಲನದಲ್ಲಿ ಇಂಥ ಮಾತಿಗೆ ಪುರಾವೆಗಳು ಸಿಗುವುದಿಲ್ಲ. ಭಾಷೆ ಛಂದಸ್ಸಿನ ಸಮರ್ಥ ಉಪಯೋಗ ಮಾತ್ರ ಒಳ್ಳೆಯ ಕವಿತೆ ಕಟ್ಟಲಾರವು. ಅದೂ ಅಲ್ಲದೆ ಕೊಡ್ಲೆಕೆರೆಯವರ ದೊಡ್ಡ ದೌರ್ಬಲ್ಯ ಅವರು ಬಳಸುವ ಈ ನಿರರ್ಗಳವಾದ ಭಾಷೆಯೇ ಆಗಿದೆ. ಅವರ ಕವಿತೆಗಳು ರಪರಪವೆಂದು ಬೀಳುವ ಶಬ್ದಗಳ 'ಮಳೆ ಬಂದಿದ್ದರಿಂದ' ಬರೀ ತೊಯ್ದಿಲ್ಲ, ಬಹಳಷ್ಟು ಕಡೆ ಕರಗಿಹೋಗಿವೆ. ಕವನಗಳಲ್ಲಿನ ನಿರರ್ಗಳವಾದ ಭಾಷೆಯ ರಭಸಕ್ಕೆ ಹೆದರುವ ಎದೆಯ ಕವಾಟ ಇನ್ನಷ್ಟು ಬಿಗಿಯಾಗಿ ಮುಚ್ಚಿಕೊಳ್ಳುತ್ತವೆ. ಹೃದಯ ಕರಗುವುದಿಲ್ಲ. ಬಹುಶಃ ಪದ್ಯಗಳ ಹಿಂದೆ 'ತುರ್ತು' ಇಲ್ಲದಿರುವುದು ಕವಿತೆಗಳ ಇಂಥ ರೂಪಕ್ಕೆ ಕಾರಣವಾಗಿರಬಹುದು. ಅನಿವಾರ್ಯವಲ್ಲದ ಕವಿತೆಗಳಲ್ಲಿ ಬಳಸಿಕೊಳ್ಳುವ ಭಾಷೆ ಮತ್ತು ಪೌರಾಣಿಕ ಕಲ್ಪನೆಗಳು ಸವಕಳಿಗೆ ಒಳಗಾಗುತ್ತವೆ. ಈ ಕವನಗಳ ಬಗ್ಗೆ ಮೂಡುವ ಭಾವ–'ಕದ ತೆರೆಯುವ ಕೈಗಳು ಇಲ್ಲಿಲ್ಲ. ಹೃತ್ಕರ್ಣ–ಹೃತ್ಕುಕ್ಷಿ ಆಕಳಿಸುವ ಆಟ, ಸಂತೃಪ್ತಿಗಳಿಲ್ಲ' (ನಾಳೆ ಪು: 62)

ಸಂಪಾದಕರ ಟಿಪ್ಪಣಿಗಳು

ಬಂಡಾಯ ಸಂಘಟನೆಗೆ ಹತ್ತು ವರ್ಷ ತುಂಬಿತು.

ತಾನು ಯಾವ ವ್ಯವಸ್ಥೆಯನ್ನು ವಿರೋಧಿಸಿ ಮೂಡಿ ಬಂದಿತ್ತೋ ಆ ಸಾಹಿತ್ಯ ಪರಿಷತ್ತಿನ ಆಶ್ರಯದಲ್ಲಿ ಇದೀಗ ತಾನೇ ಬಂಡಾಯ ಸಂಘಟನೆಯ ದಶಮಾನೋತ್ಸವ ಸಮಾರಂಭದ ಆಚರಣೆಯಾಗಿದೆ. ಈ ಮಾತನ್ನು ನಾವು ವ್ಯಂಗ್ಯದ ಯಾವ ಸೋಂಕೂ ಇಲ್ಲದೇ ಹೇಳುತ್ತಿದ್ದೇವೆ. ಯಾಕೆಂದರೆ ಇದು ಪರಂಪರೆಯ ಹರಿವಿನ ನಿರಂತರವಾದ ಕ್ರಮ. ವ್ಯವಸ್ಥೆಗೊಂದು ಬಂಡಾಯ ಮೂಡುತ್ತದೆ. ಬಂಡಾಯದ ಮೌಲ್ಯಗಳು ಕ್ರಮೇಣ ವ್ಯವಸ್ಥೆಯ ರೆಪರ್ಟರಿಗೆ ಸೇರಿಕೊಳ್ಳುತ್ತ ಬರುತ್ತವೆ. ಮತ್ತೆ ಹೊಸ ಬಂಡಾಯ–ಮತ್ತೆ–ವಾತಾಪಿ ಜೀರ್ಣೋಭವ....

ಬಂಡಾಯ ಸಂಘಟನೆಯ ಹತ್ತು ವರ್ಷಗಳ ಕಾಲದ ಫಲಶ್ರುತಿಯೇನು ಎನ್ನುವ ಪ್ರಶ್ನೆ ನಮ್ಮ ಇದಿರಿಗೆ ಬರುತ್ತದೆ. ಈ ಪ್ರಶ್ನೆಯ ಜಾಡು ಹಿಡಿದು ಹೊರಟರೆ ಬಂಡಾಯದ ಹತ್ತು ವರ್ಷಗಳು ಸಫಲತೆ ವಿಫಲತೆಗಳೆರಡರ ಅನುಭವ ನೀಡುತ್ತವೆ.

ಬಂಡಾಯ ಮೂಡುವಷ್ಟೊತ್ತಿಗೆ ಕನ್ನಡದಲ್ಲಿ ನವ್ಯ ಸಾಹಿತ್ಯ ಮಾರ್ಗವು ಒಂದು ಜಾಡಿಗೆ ಬೀಳುತ್ತಿತ್ತು. ಸೃಜನಶೀಲತೆಯಲ್ಲಿನ ಹುಸಿ ಆದರ್ಶ, ಅತಿಭಾವುಕತೆ ಗಳಿಗೆ ಪ್ರತಿಕ್ರಿಯೆಯಾಗಿ ಮೂಡಿಬಂದ ನವ್ಯಸಾಹಿತ್ಯ ವ್ಯಕ್ತಿ ಕೇಂದ್ರದ ಸುತ್ತ ಗಿರಕಿ ಹೊಡಿಯುತ್ತಿತ್ತು. ಆಗ ಬಂತು ಬಂಡಾಯ. ಬಂಡಾಯದ ವೈಚಾರಿಕತೆ ಪರಂ ಪರೆಯ ಧಾರೆಯ ಬಲದಂಡೆಗಿದ್ದವರಿಗೆ ಹೊಸ ಸಾಧ್ಯತೆಗಳನ್ನು ತೋರಿಸಿತು. ಸ್ವಾತಂತ್ರ್ಯೋತ್ತರದ ಭ್ರಮನಿರಸನದ ವ್ಯಸನದಲ್ಲಿ ವೈಯುಕ್ತಿಕ ಚಿಂತನೆಗಳು ಮಾತ್ರ ಪ್ರಾಮಾಣಿತ–ಸತ್ಯಗಳೆಂದು ತೋರಿ ನವ್ಯದ ಮನಸ್ಸು ಮತ್ತೆ ಮತ್ತೆ ತನ್ನನ್ನು ಬಗೆದುಕೊಳ್ಳುವ ಹವ್ಯಾಸಕ್ಕೆ ಒಳಗಾಗಿ ಸಾಮಾಜಿಕ ವಾಸ್ತವಕ್ಕೆ ಒಂದು ಬಗೆಯ ದುರ್ಲಕ್ಷ್ಯ ತೋರಿತ್ತು. ಇಂಥ ಸಂದರ್ಭದಲ್ಲಿ ಬಂಡಾಯದ ವೈಚಾರಿಕತೆ ಸಾಹಿತ್ಯ ಪರಂಪರೆಗೆ ಹೊಸನೀರಾಗಿ ಬಂದು ಒಂದು ಹೊಸ ಸೆಳವನ್ನು ಹುಟ್ಟಿಸಿತು. ನವ್ಯದ ಬಿಗಿ ಬಂಧದೊಂದಿಗೆ ಸಾಮಾಜಿಕ ವಾಸ್ತವದ ಜೀವಂತಿಕೆ ಬೆರೆತು ಹೊಸ ಸೊಬಗಿನ ಬರೆಹ ಸಾಧ್ಯವಾಯಿತು.

ಆದರೆ ಇಂಥ ಧನಾತ್ಮಕ ಪರಿಣಾಮ ಸಾಧ್ಯವಾದದ್ದು ಮುಕ್ತ ಮನಸ್ಸಿನ ಮೂಸೆಯಲ್ಲಿ ಮಾತ್ರ. ಬಂಡಾಯ ಸಂಘಟನೆಯ ಕಟ್ಟುಪಾಡುಗಳಿಗೆ ಆದರ

ಘೋಷಣೆಗಳಿಗೆ ಒಳಗಾಗಿ ಸೃಷ್ಟಿಸಿದ ಸಾಹಿತ್ಯ ಕಲೆಗಾರಿಕೆಯು ಪ್ರಭೆಯಿಂದ ವಂಚಿತವಾಯಿತು. ಹೂವು, ಹೆಣ್ಣು, ತಾರೆಗಳ ಬಗ್ಗೆ ಬರೆಯಲಾಗದು–ಕೇವಲ ಸಾಮಾಜಿಕ ಅನ್ಯಾಯ, ಶೋಷಣೆ, ದೌರ್ಜನ್ಯ ಕುರಿತು ಬರೆಯಬೇಕು–ಇಂಥ ಇಂಥ ಕವಿಗಳು, ಲೇಖಕರು ಜೀವವಿರೋಧಿಗಳು, ಅವರು ರಚಿಸಿದ ಸಾಹಿತ್ಯ ಓದಲು ಅನರ್ಹ–ಈ ಮುಂತಾದ ಘೋಷಿತ ಅಘೋಷಿತ ನಿಯಮಗಳು ಯುವಪೀಳಿಗೆಯ ಬರಹಗಾರರ ಮೇಲೆ ವಿಪರೀತ ಪರಿಣಾಮ ಬೀರಿತು. ಸಿದ್ಧಲಿಂಗಯ್ಯನವರ 'ಹಸಿವಿನಿಂದ ಸತ್ತೋರು....' ಮತ್ತು ಅವರ ಇತರ ಒಳ್ಳೆಯ ಕವನಗಳು ಆದರ್ಶವಾಗುವ ಬದಲು 'ಇಕ್ರಲಾ–ವದೀರ್ಲಾ ' ಪದ್ಯ ಯುವಲೇಖಕರಿಗೆ ಆದರ್ಶವಾದದ್ದನ್ನು ನಾವು ಇತ್ತೀಚಿನ ಯುವ ಕವಿಗಳ ಕವಿಗೋಷ್ಠಿಯಲ್ಲಿ ಕಾಣಬಹುದು. ಕಥೆ–ಕಾದಂಬರಿಗಳಲ್ಲಿ ದೇವನೂರರ ಕಲೆಗಾರಿಕೆಯ ಮೂಸೆಯಲ್ಲಿ ಮೂಡಿಬಂದಂಥ ಜೀವಂತ ಪಾತ್ರಗಳು ಸಾಧ್ಯವಾಗದೇ ಒರಟು ಬರಹದ ರಟ್ಟಿನ ಆಕಾರದಂಥ ನಿರ್ಜೀವ ಪಾತ್ರಗಳು ಧಂಡಿ ಧಂಡಿಯಾಗಿ ಬಂದವು. ಬಂಡಾಯ ಸಂಘಟನೆ ಕಾಲದ ನಿರಂತರತೆಯನ್ನು ಧಿಕ್ಕರಿಸುತ್ತಾ ವರ್ತಮಾನದ ಒಂದು ಸಣ್ಣ ತುಂಡನ್ನು ಮಾತ್ರ ನಂಬಿತು. ಅದಕ್ಕೇ ಅದು ಕಾಗೆಯೇ ಕೋಗಿಲೆಗಿಂತ ಶ್ರೇಷ್ಠವೆಂದು ಸಾಧಿಸುವ ನಿರರ್ಥಕ ಘೋಷಣೆಯ ಬೆನ್ನು ಹತ್ತಿತು. ಘೋಷಣೆಗಳು ಯಾವಾಗಲೂ ಅರ್ಧ ಸತ್ಯಗಳಾಗಿರುತ್ತವೆ ಮತ್ತು ಸೃಜನಶೀಲತೆ ವೈಯುಕ್ತಿಕ ಹಂತದ ಧ್ಯಾನಶೀಲತೆಯ ಮೂಲದಿಂದ ಹುಟ್ಟುವುದಾಗಿದೆ. ಸೃಜನಶೀಲತೆ ಸಮಾಜವನ್ನು ಒಳಗೊಳ್ಳುವುದೂ ವೈಯುಕ್ತಿಕ ಧ್ಯಾನದ ನೆಲೆಯಲ್ಲಿಯೇ. ಅದಕ್ಕೆ ಸಂಘಟನೆಯ ಬೆಂಬಲ ಬೇಕಾಗಿಲ್ಲ. ಇವು ಬಂಡಾಯದ ವೈಚಾರಿಕತೆ ಮತ್ತು ಬಂಡಾಯ ಸಂಘಟನೆಗಳು ಸಾಹಿತ್ಯ ಪರಂಪರೆಯ ಮೇಲೆ ಮಾಡಿರುವ ಪರಿಣಾಮಗಳಿಂದ ದೊರೆಯುವ ಅನುಭವಗಳಾಗಿವೆ.

O

ಸಂವಾದದ 15ನೇ ಸಂಚಿಕೆಯನ್ನು ನಿಮ್ಮ ಕೈಯಲ್ಲಿಡುತ್ತಿದ್ದೇವೆ. ಸಂವಾದದ ಸಮಸ್ಯೆಗಳನ್ನು ಈಗಾಗಲೇ ನಿಮ್ಮಲ್ಲಿ ತೋಡಿಕೊಂಡಿದ್ದೇವೆ. ಇಲ್ಲಿ ಮತ್ತೊಮ್ಮೆ ಕೇಳಿಕೊಳ್ಳುತ್ತಿದ್ದೇವೆ. ದಯವಿಟ್ಟು ಸಂವಾದದ ಚಂದಾ ಹಣ ಕಳಿಸಿಕೊಡಿ. ಆಜೀವ ಚಂದಾ ಎಂದು ಐವ್ವತ್ತೋ ನೂರೋ ಕೊಟ್ಟಿರುವ ಗೆಳೆಯರು (ಮುನ್ನೂರು ರೂಪಾಯಿಗಳಲ್ಲಿ ಅದನ್ನು ಕಳೆದು) ಉಳಿದದ್ದನ್ನು ಆದಷ್ಟು ಬೇಗ ಸಂದಾಯ ಮಾಡಿ ಪೂರ್ಣ ರಶೀತಿ ಪಡೆಯಿರಿ. ಸಂವಾದ ಬದುಕುಳಿಯಲು ಕೈಯಾಸರೆ ನೀಡಿ. ನಿಮ್ಮ ಪೂರ್ಣ ಸಹಕಾರ ಸಿಕ್ಕರೆ ನಾವು ಸಂವಾದಕ್ಕಾಗಿ ದುಡಿಯಲು ಪ್ರೋತ್ಸಾಹ ನೀಡಿದಂತಾಗುತ್ತದೆಂದು ನಿವೇದಿಸಿಕೊಳ್ಳಬಯಸುತ್ತೇವೆ. ●

ಹೊಸ ಪುಸ್ತಕಗಳು:

1. 21ನೇ ಶತಮಾನಕ್ಕೆ (ಕವನ ಸಂಕಲನ) ಲೇ: ಹರೋನಹಳ್ಳಿ ಸ್ವಾಮಿ.
ಪ್ರ: ಸಾಹಿತ್ಯ ಸಂಪದ ಪ್ರಕಾಶನ, 3/103, ಗೌರಮ್ಮನ ದೇವಸ್ಥಾನದ ಬೀದಿ,
ಚನ್ನಗಿರಿ–577 213. ಪುಟ; x + 60, ಬೆಲೆ: ಆರು ರೂಪಾಯಿಗಳು,

2, ಹಕ್ಕಿಯು ಹರಯು (ಕವನ ಸಂಕಲನ) ಲೇ: ಡಾ॥ ಪದ್ಮಾ ಶೇಖರ್, ಪ್ರ: ಪಲ್ಲವಿ ಪ್ರಕಾಶನ,
ಕೆ.ಆರ್. ರಸ್ತೆ, ಮಂಡ್ಯ. ಪುಟ: xx + 74. ಬೆಲೆ: ಹದಿನೈದು ರೂಪಾಯಿಗಳು.

3. ಬಾನು ಸುರಿದ ಮಾತು (ಕವನ ಸಂಕಲನ) ಲೇ: ಸಿದ್ಧರಾಮ ಹಿರೇಮಠ,
ಪ್ರ: ಆಲೋಚನ ಪ್ರಕಾಶನ, ವಿಕಾಸನಗರ, ಕೊಪ್ಪಳ–583 231
ಪುಟ: viii + 50. ಬೆಲೆ: ಹತ್ತು ರೂಪಾಯಿಗಳು

5. ಜಾನಪದ ಸ್ಪಂದನ (ಪ್ರಬಂಧ ಸಂಕಲನ) ಲೇ: ಸಿ. ಕೆ. ನಾವಲಗಿ, ಪ್ರ: ಭರತ ಪ್ರಕಾಶನ,
ಗೋಕಾಕ–591 307, ಪುಟ: xiii + 190. ಬೆಲೆ: ಹದಿನೈದು ರೂಪಾಯಿಗಳು.

6. ಸಾವಿರ ಕಣ್ಣಿನ ನವಿಲು (ಕವನ ಸಂಕಲನ) ಲೇ: ಕೃಷ್ಣಮೂರ್ತಿ ಬಿಳಿಗೆರೆ,
ಪ್ರ: ಬಿಳಿಗೆರೆ ಪ್ರಕಾಶನ, ಬಿಳಿಗೆರೆ, ತಿಪಟೂರು ತಾ॥ ತುಮಕೂರು ಜಿಲ್ಲೆ.
ಪುಟ: 58, ಬೆಲೆ: ಎಂಟು ರೂಪಾಯಿಗಳು,

7. ಕತ್ತಲ ಹೂವಿನ ಹಾಡು (ನೀಗ್ರೊ ಕವಯಿತ್ರಿಯರ ಕಾವ್ಯ)
ಅನುವಾದಕರು: ಎಂ. ಆರ್, ಕಮಲ
ಪ್ರ: ಕಲ್ಯಾಣಿ ಪ್ರಕಾಶನ, ಬೆಂಗಳೂರು–50, ಪುಟ: 168, ಬೆಲೆ: ರೂ. 30

8. ವರ್ತುಲದ ಹೊರಗೆ (ಕವನ) ಲೇ: ಲಕ್ಷ್ಮೀಶ ಚೊಕ್ಕಾಡಿ, ಪ್ರ: ಸುಮನಸಾ ವಿಚಾರ ವೇದಿಕೆ,
ಚೊಕ್ಕಾಡಿ, ದ.ಕ. ಪುಟ: 72, ಬೆಲೆ: ಹದಿನೈದು ರೂಪಾಯಿಗಳು.

9, ಕಾಯುತ್ತಿದ್ದೇನೆ (ಕವನ) ಲೇ: ಡಾ॥ ಭ. ನಾಗರಾಜ,
ಪ್ರ: ಪ್ರಗತಿ ಪ್ರಕಾಶನ, ಮೈಸೂರು–4. ಪುಟ: 40, ಬೆಲೆ: ಹತ್ತು ರೂಪಾಯಿಗಳು

10. ಕಾತರ (ಕವನ) ಲೇ: ನಜೀರ ಚಂದಾವರ, ಪ್ರ: ಸಮೀರ ಪ್ರಕಾಶನ, ಶಿರಸಿ
ಪುಟ: 77, ಬೆಲೆ: ಹದಿನೈದು ರೂಪಾಯಿಗಳು

11. ಆಷಾಢಭೂತಿಗಳು (ಕವನ) ಲೇ: ವೀರಣ್ಣವಾಲಿ,
ಪ್ರ: ಕುಮಾರ ಪ್ರಕಾಶನ. ಕರಮುಡಿ. ಪುಟ 50, ಬೆಲೆ: ಐದು ರೂಪಾಯಿಗಳು

12. ಹಕ್ಕಿ ನಡಿಗೆ (ಕವನ) ಪ್ರ. ಸಂ. ರಾಜೀವ ಸಖ,
ಪ್ರ: ಪ್ರತಿಭಾ ಯುವ ವೇದಿಕೆ, ಬೆಂಗಳೂರು–21.

13. ಆಯ್ದ ಲೇಖನಗಳು (ವಿಮರ್ಶೆ) ಲೇ: ಡಾ॥ ವಸಂತಕುಮಾರ ತಾಳ್ತಜೆ,
ಪ್ರ: ಸಾಹಿತ್ಯ ಪ್ರಕಾಶನ. ಮುಂಬೈ. ಪುಟ: 94, ಬೆಲೆ: ಮೂವತ್ತು ರೂಪಾಯಿಗಳು.